ಕರ್ನಾಟಕ ವಿಧಾನ ಸಭೆ

ಗುರುವಾರ ೧೬ನೇ ಜೂನ್ ೧೯೭೭

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೩೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

೧೯೭೭-೭೮ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರಿಂದ ಉತ್ತರ.

ಬೇಡಿಕೆ ಕ್ರಮಸಂಖ್ಯೆ - ೩೦

† ಶ್ರೀ ಬಿ. ರಾಚಯ್ಯ—ಮಾನ್ಯ ಅಧ್ಯಕ್ಷರೆ, ಕುಟುಂಬ ಕಲ್ಯಾಣ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಹಣಕಾಸಿನ ಮನವಿಯ ಮೇಲೆ ಮಾತನಾಡಿದಂಥ ಮಾನ್ಯ ಸದಸ್ಯರುಗಳಿಗೆ ಪ್ರಥಮತಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಖ್ಯವಾಗಿ ಈ ಇಲಾಖೆಯ ಮೇಲೆ 10 ಜನ ಮಾತನಾಡಿದ್ದು, ಅದರಲ್ಲಿ ಶ್ರೀಮಾನ್ ರತ್ನಾಕರ್ ಅವರು ಸುದೀರ್ಘವಾಗಿ ಕುಟುಂಬ ಕಲ್ಯಾಣ, ಆರೋಗ್ಯ ಇಲಾಖೆಗಳ ಮೇಲೆ ಹೆಚ್ಚಿನ ವಿಷಯಗಳನ್ನು ಚರ್ಚಿಸಿದ್ದಾರೆ. ಮತ್ತೆ ಕೆಲವರು ಸರ್ಕಾರದ ಈ ಇಲಾಖೆಯಲ್ಲಿ ಕಂಡು ಬಂದ ಲೋಪ ದೋಷಗಳನ್ನು ಎತ್ತಿಹಿಡಿದಿದ್ದಾರೆ. ಸರ್ಕಾರದ ಆಸ್ಪತ್ರೆಗಳಲ್ಲಿ ವೈದ್ಯರುಗಳಿದ್ದರೆ ಔಷಧಿಗಳು ಇಲ್ಲ, ಔಷಧಿ ಇದ್ದರೆ ದಾದಿಯರು ಇಲ್ಲವೆಂದು ಟೀಕೆ ಮಾಡಿದ್ದಾರೆ. ನಾನು ಒಂದೊಂದು ವಿಚಾರಕ್ಕೂ ಉತ್ತರ ಕೊಡುವುದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇನೆ. ಪ್ರಾರಂಭ ಮಾಡಿದಂತ ಮಾನ್ಯ ಸದಸ್ಯರು ಕನ್ನಡದಲ್ಲಿ ಒಳ್ಳೆಯ ಶೈಲಿಯಲ್ಲಿ ಉತ್ತಮವಾದಂತ ಭಾಷಣವನ್ನು ಮಾಡಿದ್ದಾರೆ. ವ್ಯಕ್ತಿ, ಕುಟುಂಬ ಸಮಾಜ ಇದರ ಸ್ವಾಸ್ಥ್ಯವನ್ನು ನೋಡಿಕೊಳ್ಳತಕ್ಕ ಮಂತ್ರಿಗಳು ಮಾನಸಿಕವಾಗಿ ಭೌತಿಕವಾಗಿ ಅವರ ಆರೋಗ್ಯ ನೋಡಿಕೊಂಡಿದ್ದರೆ, ಚೆನ್ನಾಗಿ ನಡೆಯುತ್ತಿತ್ತು. ಆದರೆ ಅವರ ಕೈಯಲ್ಲಿ ಇಲಾಖೆ ಎಷ್ಟರಮಟ್ಟಿಗೆ ನಡೆಯಬೇಕಾಗಿತ್ತೋ, ಅಷ್ಟರಮಟ್ಟಿಗೆ ನಡೆಯುತ್ತಿಲ್ಲವೆನ್ನುವ ಸಂಶಯದಿಂದಲೇ ಪ್ರಾರಂಭ ಮಾಡಿದರು. ಸಹಜವಾಗಿ ಆ ವಯಸ್ಸಿನಲ್ಲಿರತಕ್ಕವರಿಗೆ ನನ್ನನ್ನು ನೋಡಿದಾಗ ಹಾಗೆ ಕಾಣಿಸುತ್ತದೆ. ಆ ದೃಷ್ಟಿಯಿಂದ ಮಾನಸಿಕವಾಗಿ ದೈಹಿಕವಾಗಿ ನನ್ನ ಸ್ವಾಸ್ಥ್ಯ ಚೆನ್ನಾಗಿದೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ನನ್ನ ಸ್ವಾಸ್ಥ್ಯ ಉತ್ತಮವಾಗಲಿ ಮತ್ತು ಜನರ ಸ್ವಾಸ್ಥ್ಯವನ್ನು ಉತ್ತಮ ಪಡಿಸುವ ದೃಷ್ಟಿಯಿಂದ ಮುಖ್ಯ ಮಂತ್ರಿಗಳು ನನ್ನ ಕೈಗೆ ಈ ಇಲಾಖೆಯನ್ನು ಕೊಟ್ಟಿದ್ದಾರೆ. ನಾನು ಉತ್ತಮ ವೈದ್ಯನೂ ಅಲ್ಲ, ತಜ್ಞನೂ ಅಲ್ಲ 30-40 ವರ್ಷಗಳ ಹಳೆಯ ರೋಗಿಯಾಗಿದ್ದೇನೆ. ಒಂದಲ್ಲಾ ಒಂದು ಸಲ ಹೊರಗಡೆಯಿಂದ ಆಸ್ಪತ್ರೆ ತಜ್ಞರು ಶುಶ್ರೂಕರು ಔಷಧಿಗಳು ಇರತಕ್ಕ ಉಪಕರಣಗಳನ್ನು ನೋಡಿಕೊಂಡು ಬಂದಿದ್ದೇನೆ. ಸಹಜವಾಗಿ ಇರತಕ್ಕ ಕೊರತೆಗಳನ್ನು ಸರಿಸೂಗಿಸತಕ್ಕ ಪ್ರಯತ್ನವನ್ನು ಮಾಡಿಕೊಂಡು ಬಂದಿದ್ದೇನೆ. ಒಳಗಡೆ ಹೋಗಿ ನೋಡತಕ್ಕ ಅವಕಾಶ ಕಳೆದ 8-9 ತಿಂಗಳಿಂದ ಸಿಕ್ಕಿದೆ. ಸಾಧ್ಯವಾದಷ್ಟು ಮಟ್ಟಿಗೆ ಒಂದೊಂದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿ ರೋಗಗಳು ಬರದ ಹಾಗೆ ನೋಡಿಕೊಳ್ಳತಕ್ಕ ವಿಷಯದಲ್ಲಿ ಪ್ರಥಮವಾಗಿ ಭಾಷಣ ಪ್ರಾರಂಭ ಮಾಡಿದರು. ಅದರಲ್ಲಿಯೂ ಮಲೇರಿಯಾ ರೋಗ ರಾಜ್ಯದಲ್ಲಿ ಮತ್ತೆ ಮರುಕಳಿಸಿದ್ದು, ಅದು ವ್ಯಾಪಕವಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. 1976ರಲ್ಲಿ 6 ಸಾವಿರ ಜನ ಮಲೇರಿಯಾ ರೋಗದಿಂದ ನರಳುತ್ತಿದ್ದರು. ಇವತ್ತು 86 ಸಾವಿರಕ್ಕೆ ಇದು ಹೆಚ್ಚಿದೆ.

10-00 ಎ. ಎಂ.

ಇದರಲ್ಲಿ ಗುಲ್ಬರ್ಗ ಭಾಗದಲ್ಲಿ, ಬಿಜಾಪುರದಲ್ಲಿ, ಮಂಡ್ಯದಲ್ಲಿ, ಮೈಸೂರಿನ ಕೆಲವು ಭಾಗದಲ್ಲಿ, ಈ ಭಾಗಗಳಲ್ಲಿ ಇದು ಮರುಕಳಿಸಿದೆ. ಇದಕ್ಕೆ ಕಾರಣ ನೀರಾವರಿ ಹೆಚ್ಚು ಆದಮೇಲೆ ಅಲ್ಲಿ ನೀರು ನಿಂತು ಈ ಸೊಳ್ಳೆಗಳು ಬೆಳೆಯುವುದಕ್ಕೆ ಅವಕಾಶವಾಗಿರುವುದು. ಆದ್ದರಿಂದ ನಾವು ಈ ಭಾಗಗಳಲ್ಲಿ ಒಂದು ತಿಂಗಳಿಗೆ ಒಂದು ಸಲ ಸಿಂಪಡಿಸತಕ್ಕ ಔಷಧವನ್ನು 15 ದಿವಸಗಳಿಗೆ ಒಂದು ಸಲ ಸಿಂಪಡಿಸತಕ್ಕ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಆದರೂ ಕೂಡ ಸೊಳ್ಳೆಗಳು ಎಚ್ಚೆತ್ತುಕೊಂಡಿವೆ. ಬಿ.ಸಿ.ಜಿ. ಆಗಲಿ, ಮತ್ತೆ ನಮ್ಮ ಪೌಡರ್ ಆಗಲಿ, ಇದರಿಂದ ನಾವು ಏನು ಮಾಡುತ್ತೇವೆ ಅದರಿಂದ ಅವು ಸಾಯುತ್ತಿಲ್ಲ. ರೆಸಿಸ್ಟೆನ್ಸ್ ಜಾಸ್ತಿ ಆಗಿದೆ. ಆದ್ದರಿಂದ, ಮಾಲಿತಿನ್ ಪೌಡರ್ ಹಾಕುವುದರಿಂದ ಅವುಗಳ ಸಂತಾನ ಅಭಿವೃದ್ಧಿ ತಡೆಯಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕದ್ದನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿದಾಗ ತಿಳಿಯಿತು. ಅದನ್ನು ನಾವು ಒಪ್ಪಿಕೊಂಡು ಉಪಯೋಗ ಮಾಡುವುದರಿಂದ ಸೊಳ್ಳೆಗಳ ಬೆಳವಣಿಗೆಯನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗುತ್ತದೆ ಎಂದು ನಮ್ಮ ಅಧಿಕಾರಿಗಳು ಅವರ ಜೊತೆ ಚರ್ಚೆ ಮಾಡಿದ್ದಾರೆ. ಅವರು ಒಪ್ಪಿಕೊಳ್ಳತಕ್ಕ ಪರಿಸ್ಥಿತಿ ಇದೆ. ಇದರಿಂದ ಪುನಃ 7-8 ಜಿಲ್ಲೆಗಳಲ್ಲಿ ಮರುಕಳಿಸಿರತಕ್ಕ ಸೊಳ್ಳೆಯ ಬೆಳವಣಿಗೆಯನ್ನು ನಾವು ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರು ನಗರದ ವಿಮಾನ ನಿಲ್ದಾಣದ ಪಕ್ಕದಲ್ಲಿರತಕ್ಕ ಕೆರೆಗಳಲ್ಲಿ ಮತ್ತೆ ಎಲ್ಲಿ ಕೊಳಚೆ ಪ್ರದೇಶ ಇದೆ ಮತ್ತೆ ನಮ್ಮ ಸಿವರೇಜ್ ವಾಟರ್ ಎಲ್ಲಿ ಹೋಗುತ್ತದೆ ಆದರಿಂದ ಎಲ್ಲಿ ಹುಲ್ಲು ಬೆಳೆಯುತಕ್ಕದ್ದು ಇದೆ, ಮತ್ತೆ ನೀರಿನೊಳಗೆ ಬರತಕ್ಕ ಗಿಡಗಳು ಏನಿವೆ ಅವುಗಳು ಸೊಳ್ಳೆಯನ್ನು ಸಂರಕ್ಷಣೆ ಮಾಡತಕ್ಕಂಥ ಸ್ಥಾನಗಳು ಆಗಿರುವುದರಿಂದ, ಆ ಕಡೆಗಳಲ್ಲಿ ನಮ್ಮ ಕಾರ್ಪೊರೇಷನ್‌ನವರು ಹೆಚ್ಚು ಪ್ರಯತ್ನ ಮಾಡಬೇಕಾಗಿದೆ. ನಮ್ಮ ಇಲಾಖೆಯಿಂದ ಒಂದು ಕೆರೆಯನ್ನು ತೆಗೆದುಕೊಂಡು ಪ್ರಾಯೋಗಿಕವಾಗಿ ಮಾಡುತ್ತಿದ್ದಾರೆ. ಈ ದೃಷ್ಟಿಯಲ್ಲಿ ಅನಾಫಿಲಿಸ್ ಸೊಳ್ಳೆಯನ್ನಾಗಲಿ ಅಥವಾ ಯಾವುದೇ ಸೊಳ್ಳೆಯನ್ನಾಗಲಿ ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮನೆಗಳ ಹತ್ತಿರ ಬೇರೆ ಬೇರೆ ಪರಿಸರಗಳಲ್ಲಿ ಎಲ್ಲಿ ಜನರು ಮಾಲಿತಿನ್ ಪೌಡರ್ ಹಾಕಿದರೆ ಸಾಯುತ್ತವೆ ಎಂದು ಹೇಳುತ್ತಾರೆ ಅಂತಹ ಕಡೆ ಹಾಕಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ವರ್ಷ ನಾವು ಇದಕ್ಕಾಗಿ ಖರ್ಚು ಮಾಡದೆ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆಂದು ಹೇಳಿದರು. ಇದಕ್ಕೋಸ್ಕರ 425 ಲಕ್ಷ ರೂಪಾಯಿ ಕೇಂದ್ರದವರು ಕೊಟ್ಟಿದ್ದಾರೆ. ನಾವು 425 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ನಮ್ಮ ಯೋಜನೇತರ ಪ್ಲಾನ್‌ನಲ್ಲಿ 360ಲಕ್ಷ ರೂಪಾಯಿ ಕೊಟ್ಟು ಈ ಒಂದು ಕಾರ್ಯಕ್ಕೆ1210ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ರಾಜ್ಯದಲ್ಲಿ ಬೇರೆ ಬೇರೆ ರಾಜ್ಯಗಳಿಗಿಂತಲೂ ಹೆಚ್ಚಿನ ರೀತಿಯಲ್ಲಿ ಸಾಧನೆ ಮಾಡಿದ್ದೇವೆ. ಇದರ ಫಂಡ್ಸ್ ಲಾಸ್ ಮಾಡಿದ್ದಾರೆ, ಖರ್ಚು ಮಾಡಿಲ್ಲ ಎಂದು ಹೇಳಿದ್ದುದು ಸರಿಯಲ್ಲ. ನಾವು ಹೆಚ್ಚಿನ ರೀತಿಯಲ್ಲಿ ಹಣ ಖರ್ಚು ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಅವರು ಹೇಳಿದಂಥ ಲೆಪ್ರೊಸಿ ಆಗಲಿ, ಟಿ.ಬಿ. ಆಗಲಿ, ಈ ಕಾರಣಗಳಿಗೋಸ್ಕರ ನಾವು ಕೆಲವು ಸಾಧನೆಗಳನ್ನು ಮಾಡಿರತಕ್ಕದ್ದು ಇದೆ. ಲೆಪ್ರೊಸಿಗೆ ಸಂಬಂಧಪಟ್ಟಂತೆ ಈ ಎಂಡಿಟಿ ಪ್ರೋಗ್ರಾಮ್ ಏನಿದೆ ಅದನ್ನು 12 ಜಿಲ್ಲೆಗಳಿಗೆ ವಿಸ್ತರಿಸುತ್ತಿದ್ದೇವೆ. ಮತ್ತೆ ಅದಕ್ಕೋಸ್ಕರ ನಾವು ಹೆಚ್ಚಿನ ರೀತಿಯಲ್ಲಿ "ಮಲ್ಟಿ ಡ್ರಗ್ ತೆರಪಿ" ಬಂದಮೇಲೆ ಬಹಳ ವರ್ಷಗಳು ಕೊಡುತ್ತಿದ್ದ ಈ ಕಾರ್ಯವನ್ನು ನಾವು ಸ್ವಲ್ಪ ಹತ್ತಿರವಾಗಿ ಇದನ್ನು ಮುಗಿಸಲಿಕ್ಕೆ ಅವಕಾಶವಾಗಿದೆ. 100 ಪರ್‌ಸೆಂಟ್ ನೆರವು ಇದಕ್ಕೆ ಕೇಂದ್ರ ಸರ್ಕಾರದಿಂದ ದೊರೆಯಬೇಕು. ಅದು ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ ಐದು ವರ್ಷಗಳ ಅವಧಿಯಲ್ಲಿ ಸಿಕ್ಕುತ್ತದೆ. ಮಿಕ್ಕಿದ್ದು ನಾನ್‌ಪ್ಲಾನ್ ಆಗುತ್ತದೆ. ಆ ದೃಷ್ಟಿಯಿಂದ ಕೂಡ ನಾವು ಈ ರಾಜ್ಯದ ಕಾರ್ಯಕ್ರಮದಡಿಯಲ್ಲಿ 350 ಲಕ್ಷ ರೂಪಾಯಿ ಬಳಸಿ ನಾವು ಖರ್ಚು ಮಾಡಿದ್ದೇವೆ. ಕೇಂದ್ರ ದಿಂದ ಕೆ ವಲ 75 ಲಕ್ಷ ರೂಪಾಯಿ ನಮಗೆ ಬಂದಿದೆ. ಈ ಲೆಪ್ರಸಿ ಕಾಯಿಲೆ ಅಂಟು ರೋಗ ಎಂದು ಏನು ಹೇಳಿದ್ದಾರೆ, ಅದು ಅಂಟು ರೋಗ ಅಲ್ಲ. ಗಂಡನಿಗೆ ಇದ್ದರೆ ಹೆಂಡತಿಗೆ ಬರುವುದಿಲ್ಲ, ಪ್ರಾರಂಭದಲ್ಲಿ ಇದನ್ನು ಕಂಡ ಕೂಡಲೇ ಆ ಮಚ್ಚೆಯನ್ನು ಕಂಡಂಥ ಕಾಲದಲ್ಲಿ ರಕ್ತ ಪರೀಕ್ಷೆ ಮಾಡಿದ ಮೇಲೆ ಅವಕ್ಕೆ ಚಿಕಿತ್ಸೆ ಪಡೆಯುವುದು ಒಳ್ಳೆಯದು. ಚಿಕಿತ್ಸೆ ಪಡೆದುಕೊಂಡು ಅವರು ಅಂಗವಿಕಲರಾದ ಕೆಲವು ಸಂದರ್ಭದಲ್ಲಿ ಬೇರೆ ಬೇರೆ ರೀತಿಯಲ್ಲಿ ರೂಪ ವಿಕಾರ ಆಗತಕ್ಕಂಥ ಸಂದರ್ಭಗಲ್ಲಿ ಅಸಹ್ಯಪಡುತ್ತಿರೆಯೇ ವಿನಃ ಇದು ಸಾಂಕ್ರಮಿಕ ರೋಗ ಅಥವಾ ಅಂಟು ರೋಗ ಅಲ್ಲ. ಆದ್ದರಿಂದ ಮಲ್ಟಿಡ್ರಗ್ಸ್ ದೃಷ್ಟಿಯಿಂದ ಎಲ್ಲಾ ಕಡೆಗೂ ಖಾಸಗೀ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರಿಗೂ ಸಹಾಯ ಮಾಡುತ್ತಿದ್ದೇವೆ. ಅವರಿಗೆ ಕೇಂದ್ರದಿಂದ ಮತ್ತು ನಮ್ಮ ಸರ್ಕಾರದಿಂದಲೂ ಸಹಾಯ ದೊರೆಯುತ್ತದೆ ನಮ್ಮ ಆಸ್ಪತ್ರೆಗಳಲ್ಲೂ ಕೂಡ ಆ ಕೆಲಸ ಮಾಡುತ್ತಿದ್ದಾರೆ. ಈ ದಿಸೆಯಲ್ಲೂ ಕೂಡ ರೋಗವನ್ನು ತಡೆಗಟ್ಟುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಬೇರೆ ರಾಜ್ಯಗಳಿಗಿಂತಲೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಮತ್ತು ಕ್ಷಯರೋಗಕ್ಕೆ ಸಂಬಂಧ

ಪಟ್ಟ ಹಾಗೆ ನಾವು ಪ್ರತಿಜಿಲ್ಲೆಗೂ ಕೂಡ ಜಿಲ್ಲಾ ಕ್ಷಯರೋಗ ತಜ್ಞರನ್ನು ನೇಮಿಸಿ ಕ್ಷಯರೋಗವನ್ನು ತಡೆಗಟ್ಟಲು ಸಾಕಷ್ಟು ಪ್ರಮಾಣದಲ್ಲಿ ಕಾರ್ಯ ಮಾಡುತ್ತಿದ್ದೇವೆ ಮುಖ್ಯವಾಗಿ ೧೨ ಜಿಲ್ಲೆಗಳಲ್ಲಿ ಅಲ್ಪಾವಧಿ ಚಿಕಿತ್ಸಾ ಪ್ರಯೋಗ ನಡೆಸಿ, ಅದು ಹೆಚ್ಚು ಪರಿಣಾಮಕಾರಿಯಾದರೆ ಈ ವರ್ಷದಲ್ಲಿ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಜಾರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಮಾತ್ರ ಈ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇದರಲ್ಲಿ ಸುಮಾರು ೧೫೦ ವೈದ್ಯಾಧಿಕಾರಿಗಳಿಗೆ ೧೧೫೦ ಕಾರ್ಯಕರ್ತರಿಗೆ ತರಬೇತಿ ಕೊಟ್ಟು ೧೨ ಜಿಲ್ಲೆಗಳಲ್ಲಿ ಕ್ಷಯರೋಗ ನಿವಾರಣೆ ಕ್ರಮದ ವೈದ್ಯಕೀಯವನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ತರಬೇತಿ ಕೊಟ್ಟಿದ್ದೇವೆ. ಈ ದೃಷ್ಟಿಯಿಂದ ೮೫ ಸಾವಿರ ಕ್ಷಯ ರೋಗಿಗಳನ್ನು ೧೯೮೭–೮೮ನೇ ಇಸವಿಯಲ್ಲಿ ಪತ್ತೆಹಚ್ಚಿ ಅವರಲ್ಲಿ ೭೧,೭೯೬ ರೋಗಿಗಳನ್ನು ಈ ಚಿಕಿತ್ಸೆಗೆ ಒಳಪಡಿಸಿ ಸುಮಾರು ೮೪ ಪರ್ಸೆಂಟ್ ಕ್ಷಯರೋಗಿಗಳನ್ನು ಗುಣಪಡಿಸುವುದರಲ್ಲಿ ನಾವು ಸಾಧನೆ ಮಾಡಿದ್ದೇವೆಂದು ಹೇಳಲು ಹೆಮ್ಮೆಪಡುತ್ತೇನೆ.

ಇನ್ನು ಸಮುದಾಯ ಕ್ಷಯ ಮತ್ತು ಲೆಪ್ರಸಿ, ಬ್ಲೈಂಡನೆಸ್ ಇದಕ್ಕೆ ೧೦೦ ಪರ್ಸೆಂಟ್ ಕೇಂದ್ರ ಸರ್ಕಾರದಿಂದ ಹಣ ಸಹಾಯ ಸಿಗುತ್ತದೆ. ನಮ್ಮ ಎಲ್ಲಾ ೪ ದೊಡ್ಡ ಪಟ್ಟಣಗಳಲ್ಲಿ, ನಮ್ಮ ಜಿಲ್ಲಾ ಆಸ್ಪತ್ರೆಗಳಲ್ಲಿ ನಮ್ಮ ಬೆಂಗಳೂರಿನಲ್ಲಿರುವ ಮಿಂಟೋ ಆಸ್ಪತ್ರೆಯಲ್ಲಿ ಹಾಗೂ ಮೈಸೂರು, ಹುಬ್ಬಳ್ಳಿ, ಬೆಳಗಾಮ್‌ನಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಪೊರೆ ತೆಗೆಯತಕ್ಕಂಥ ಕಾರ್ಯಕ್ರಮಗಳನ್ನು ಕೈಕೊಂಡು ಇದರಲ್ಲಿ ಹೆಚ್ಚಿನ ರೀತಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅದಕೋಸ್ಕರವಾಗಿ ಯಾರಿಗೆ ಕಣ್ಣು ಬರುವುದಿಲ್ಲವೆಂದು ತಿಳಿದುಕೊಂಡಿರುತ್ತಾರೋ ಅವರಿಗೆ ಅಪರೇಷನ್ ಮಾಡಿದಾಗ ಹೊಸದಾಗಿ ದೃಷ್ಟಿ ಬರುವುದರಿಂದ ಬಹಳ ಮಟ್ಟಿಗೆ ಶಿಬಿರಗಳನ್ನು ನಡೆಸುವ ಮುಖಾಂತರ ಇಂತಹ ಜನರಿಗೆ ಸಹಾಯ ಮಾಡುತ್ತಿದ್ದೇವೆ. ಇದಕ್ಕೆ ಖಾಸಗಿ ಸಂಸ್ಥೆಗಳಾಗಿತಕ್ಕಂಥ ಲಯನ್ಸ್ ಕ್ಲಬ್, ರೋಟರಿ ಮುಂತಾದ ಸಂಸ್ಥೆಗಳು ಕೂಡ ಮುಂದೆ ಬಂದು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುತ್ತಿವೆ. ಆದ್ದರಿಂದ ಹುಟ್ಟಿದಾಗಲೇ ಕಣ್ಣು ಕಳೆದುಕೊಂಡಿರತಕ್ಕಂಥ ಜನ ಯಾರು ಇದ್ದಾರೆ ಅವರ ವಿಷಯದಲ್ಲಿ ಗಮನ ಹರಿಸಿಲ್ಲ, ಪ್ರಚಾರ ಮಾಡಲಿಲ್ಲವೆಂದು ಮಾನ್ಯ ರತ್ನಾಕರ್‌ರವರು ಏನು ಹೇಳಿದರು. ಇದಕ್ಕೆ ಬಹುಶಃ ''ಎ'' ಅನ್ನಾಂಗ ಕೊರತೆ ಇರಬಹುದು ''ಎ'' ಅನ್ನಾಂಗದ ಕೊರತೆಯನ್ನು ತಪ್ಪಿಸುವುದ ಕೋಸ್ಕರವಾಗಿ ಅವರಿಗೆ ಹೆಚ್ಚಿನ ರೀತಿಯಲ್ಲಿ ಬೇಕಾಗಿತಕ್ಕಂಥ ''ಎ'' ಅನ್ನಾಂಗ ಒಳಗೊಂಡಂತ ಔಷಧಿಗಳನ್ನು ಕೊಡಬೇಕಾಗಿದೆ. ಸಾಮಾನ್ಯವಾಗಿ ಹೆಚ್ಚಿನ ರೀತಿಯಲ್ಲಿ ''ಎ'' ಅನ್ನಾಂಗ ಕಡಿಮೆಯಾಗಿರುವ ತಾಯಂದಿರಿಂದ ಹುಟ್ಟುವ ಮಕ್ಕಳಿಗೆ ದೃಷ್ಟಿಮಾಂದ್ಯ ಇರುತ್ತದೆ. ಅದಕೋಸ್ಕರವಾಗಿ ಗರ್ಭಿಣಿ ಸ್ತ್ರೀಯರಿಗೆ ಕಬ್ಬಿಣ ಅಂಶ ಹೆಚ್ಚಾಗಿ ತೆಗೆದುಕೊಳ್ಳಬೇಕೆಂಬ ಅಂಶವನ್ನು ಪ್ರಚಾರ ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ದೃಷ್ಟಿ ಮಾಂದ್ಯವಾಗತಕ್ಕಂಥದ್ದು ಎರಡು ವಿಧದಲ್ಲಿ, ವಯಸ್ಸಾಗಿರತಕ್ಕಂಥವರಿಗೂ ಪೊರೆ ಬರುತ್ತದೆ. ಹುಟ್ಟಿದಾಗಲೇ ಕಣ್ಣನ್ನು ಕಳೆದುಕೊಳ್ಳತಕ್ಕಂಥ ಮಕ್ಕಳಿಗೆ ಅವನ್ನು ಕಳೆದುಕೊಳ್ಳದಿರುವುದಕ್ಕೆ ''ಎ'' ಅನ್ನಾಂಗವನ್ನು ತೆಗೆದುಕೊಂಡು ಅದನ್ನು ಸರಿಪಡಿಸಿಕೊಳ್ಳಬೇಕು. ನಮ್ಮ ಇಲಾಖೆ ಮೂಲಕ ಅದಕ್ಕೆ ಪ್ರಚಾರ ಕೊಡುವ ಮೂಲಕ ಕೆಲಸ ಮಾಡುತ್ತಿದ್ದೇವೆ. ನಮ್ಮ ಮಿಂಟೋ ಆಸ್ಪತ್ರೆ ಏನಿದೆ ಅದು ಅತ್ಯಂತ ಆಧುನಿಕ ಉಪಕರಣಗಳನ್ನು ತಜ್ಞರನ್ನು ಈ ದೃಷ್ಟಿಯಲ್ಲಿ ಹೊಂದಿದ್ದು ಉತ್ತಮ ಮಟ್ಟದ ಆಸ್ಪತ್ರೆಯಾಗಿದೆ. ಈ ಆಸ್ಪತ್ರೆಯಲ್ಲಿ ಏನೊಂದು ಉಪಕರಣಗಳಿವೆ ಅದೇ ರೀತಿಯಲ್ಲಿ ಮೈಸೂರು, ಹುಬ್ಬಳ್ಳಿ ಮತ್ತು ಬೆಳಗಾಂ ಆಸ್ಪತ್ರೆಗಳಿಗೂ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ದೃಷ್ಟಿಯಲ್ಲಿ ನಮ್ಮಲ್ಲಿರತಕ್ಕ ಆಸ್ಪತ್ರೆಗಳನ್ನು ಸಜ್ಜುಗೊಳಿಸತಕ್ಕದ್ದು ಮತ್ತು ಅಲ್ಲಿರತಕ್ಕ ತಜ್ಞರಿಗೆ ಹೆಚ್ಚಿನ ತರಬೇತಿ ಕೊಡತಕ್ಕ ಕೆಲಸವನ್ನು ನಮ್ಮ ಇಲಾಖೆಯ ಮೂಲಕ ಮಾಡುತ್ತಿದ್ದೇವೆ. ಕ್ಷಯರೋಗವಾಗಲಿ, ಲೆಪ್ರಸಿಯಾಗಲಿ, ಆನೇಕಾಲು (ಫೈಲೇರಿಯಾ) ರೋಗವಾಗಲಿ, ಅದನ್ನು ಕೂಡ ಪರೀಕ್ಷೆ ಮಾಡಿ ತಕ್ಕ ಚಿಕಿತ್ಸೆ ನೀಡಿ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾದಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಮಲೆನಾಡಿನ ಮತ್ತು ಸಮುದ್ರ ತೀರದಲ್ಲಿರತಕ್ಕ ಪ್ರದೇಶದಲ್ಲಿ ಫೈಲೇರಿಯಾ ಹೆಚ್ಚಾಗಿ ಕಾಣುತ್ತದೆ. ಅಂಥ ಕಡೆ ರಕ್ತ ಪರೀಕ್ಷೆ ಮಾಡಿ ರೋಗವನ್ನು ಕಂಡುಹಿಡಿದು ಅದಕ್ಕೆ ತಕ್ಕ ಚಿಕಿತ್ಸೆ ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಕೆಲವು ಮಾನ್ಯ ಸದಸ್ಯರು ಮಿದುಳು ಜ್ವರದ ಬಗ್ಗೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಔಷಧಿಗಳನ್ನು ಕಂಡುಹಿಡಿದಿದ್ದೇವೆ, ಮತ್ತು ಅದಕ್ಕೆ ತಕ್ಕ ಚಿಕಿತ್ಸೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕಾಣತಕ್ಕ ಕೆಲವು ಮುಖ್ಯ ರೋಗಗಳು ಏನಿವೆ, ಅವುಗಳ ನಿವಾರಣೆ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡು, ಸಂಪೂರ್ಣವಾಗಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುತ್ತಿದ್ದೇವೆ. ನಾವು ಈ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದೇವೆಂಬ ಪ್ರಶಂಸೆಯನ್ನು ಬೇರೆ ರಾಜ್ಯಗಳವರಿಂದ ಪಡೆದಿದ್ದೇವೆ. ಮುಖ್ಯವಾಗಿ ಮಕ್ಕಳ ಮತ್ತು ತಾಯಂದಿರ ಆರೋಗ್ಯ ಸಂರಕ್ಷಣೆಯ (ಮಿನಿಮಮ್ ನೀಡ್ಸ್ ಪ್ರೋಗ್ರಾಂ) ವಿಷಯದಲ್ಲಿ

ನಾವು ಸಾಕಷ್ಟು ಕಾರ್ಯ ಮಾಡುತ್ತಿದ್ದೇವೆ. ಜಿಲ್ಲಾ ಪರಿಷತ್ತುಗಳ ರಚನೆಯಾದ ಮೇಲೆ ಅವುಗಳಿಗೆ ಈ ಕಾರ್ಯಕ್ರಮವನ್ನು ವಹಿಸಿದ್ದೇವೆ. ಇದಕ್ಕೋಸ್ಕರ ೭೫ ಪರ್ಸೆಂಟ್ ಹಣವನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟು ಈ ಕಾರ್ಯಕ್ರಮವನ್ನು ನಡೆಸತಕ್ಕ ವ್ಯವಸ್ಥೆ ಮಾಡಿದ್ದೇವೆ. ೭೫ ಪರ್ಸೆಂಟ್ ಹಣವನ್ನು ಕೊಟ್ಟಾಗ್ಯೂ ಕೂಡ ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ, ಅಲ್ಲಿನ ವೈದ್ಯರು ಕೊಟ್ಟ ಚೀಟಿಯನ್ನು ತೆಗೆದುಕೊಂಡು ಹೋಗಿ ಅಂಗಡಿಗಳಲ್ಲಿ ಔಷಧಿ ಕೊಂಡುಕೊಳ್ಳಬೇಕೆಂದು ವೀರಯ್ಯಸ್ವಾಮಿಯವರು ಮತ್ತು ಬೆಲ್ಲದರವರು ಹೇಳಿದ್ದಾರೆ. ಆ ದೃಷ್ಟಿಯಿಂದ ಔಷಧಿ ಕೊಡುವ ಸಲುವಾಗಿ ಉತ್ತರ ಭಾಗದಲ್ಲಿ ಬರತಕ್ಕ ಆಸ್ಪತ್ರೆಗಳಿಗೆ ಶೇಕಡ ೧೫ರಷ್ಟು ಹಣವನ್ನು ಕೊಡಬೇಕೆಂದು ಮಾಡಿದ್ದೇವೆ. ಅದು ಈ ವರ್ಷದಿಂದ ಜಾರಿಗೆ ಬರುತ್ತದೆ. ಇದೇ ಸಂದರ್ಭದಲ್ಲಿ ಔಷಧಿಗೆ ಸಂಬಂಧಪಟ್ಟ ಹಾಗೆ ಪ್ರತಿ ಸಮುದಾಯ ಕೇಂದ್ರಗಳಿಗೆ ಮತ್ತು ಪಿ.ಹೆಚ್.ಯು. ಮತ್ತು ಪಿ.ಹೆಚ್.ಸಿ ಗಳಿಗೆ ಕೊಡತಕ್ಕ ಔಷಧಿ ಏನಿದೆ ಅದರ ಬಗ್ಗೆಯೂ ಹೇಳಬಯಸುತ್ತೇನೆ. ಔಷಧಗಳ ಪ್ರಮಾಣವನ್ನು ೧೫ ಪರ್ಸೆಂಟ್ ಹೆಚ್ಚಿಸಿದ್ದೇವೆಂದು ಹೇಳಿದ್ದೇನೆ. ಇದರ ಬಗ್ಗೆ ಈ ಸಭೆಯಲ್ಲಿ ಹೇಳಿದ್ದೇನೆ ಆದ್ದರಿಂದ ಈಗ ತಕ್ಷಣ ಆ ಫಿಗರ್ಸ್ ಸಿಗುತ್ತಿಲ್ಲ. ಆಮೇಲೆ ಡ್ರಗ್ಸ್ ಅಡಿಕ್ಟ್ ಬಗ್ಗೆ ಅಂದರೆ ಮಾದಕ ವಸ್ತುಗಳನ್ನು ಸೇವನೆ ಮಾಡುವ ಪರಿಣಾಮಾಂತರ ಬಹಳ ವಿದ್ಯಾರ್ಥಿಗಳು, ಯುವಕರು ಕೆಟ್ಟುಹೋಗುತ್ತಿರುವುದರಿಂದ ಹೆಚ್ಚಿನ ಆಸಕ್ತಿವಹಿಸಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಿಸಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ಕಳಪೆ ಇರುವ ಡ್ರಗ್ಸ್‌ಗಳನ್ನು ಮಾರಾಟ ಮಾಡುತ್ತಿರುವುದನ್ನು ನಿಲ್ಲಿಸಿ, ಅವುಗಳನ್ನು ಪರೀಕ್ಷೆ ನಡೆಸುವ ಮೂಲಕ ಕ್ರಮ ಕೈಗೊಳ್ಳಬೇಕೆಂದು ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಮ್ಮ ಔಷಧ ನಿಯಂತ್ರಣ ಇಲಾಖೆಯು ಗಣನೀಯವಾಗಿ ತನ್ನ ಕರ್ತವ್ಯಗಳನ್ನು ಮಾಡಿ ಎಲ್ಲೆಲ್ಲಿ ಕಳಪೆವಸ್ತುಗಳನ್ನು ತಯಾರಿಸುತ್ತಿದ್ದರೋ ಮತ್ತು ಎಲ್ಲೆಲ್ಲಿ ಓವರ್‌ಡೇಟೆಡ್ ಔಷಧಗಳನ್ನು ಮಾರಾಟ ಮಾಡುತ್ತಿದ್ದರೋ ಅಂಥವರನ್ನು ಹಿಡಿದಿರುವ ಅಂಕಿಅಂಶಗಳನ್ನು ಈಗಾಗಲೇ ತಿಳಿಸಿದ್ದೇನೆ. ಇದರ ಬಗ್ಗೆ ಇನ್ನೂ ಹೇಳುವುದಾದರೆ ನಮ್ಮ ಔಷಧ ಇಲಾಖೆ ಬಹಳ ಉತ್ತಮವಾಗಿ ಕೆಲಸಗಳನ್ನು ಮಾಡಿದೆ. ಕಳೆದ ವರ್ಷ ಒಂದು ಸಂಸ್ಥೆಯು ಆಯುರ್ವೇದಿಕ್ ಔಷಧಿಗೆ ಅಲೋಪತಿ ಲೇಬಲ್ ಹಚ್ಚಿ ಜಾಸ್ತಿ ರೇಟ್ ಫಿಕ್ಸ್ ಮಾಡಿ ಬಿಡುಗಡೆ ಮಾಡುತ್ತಿದ್ದುದನ್ನು ನಮ್ಮ ಇಲಾಖೆ ಹಿಡಿದು ೧.೯ ಕೋಟಿ ರೂ.ಗಳು ವಾರ್ಷಿಕ ಟ್ಯಾಕ್ಸ್ ಕಡಿಮೆಯಾಗಿದ್ದಿತೆಂದು ಕೇಸ್ ಹಾಕಿದೆ. ಈ ರೀತಿ ಸರ್ಕಾರಕ್ಕೆ ಸೋರಿಹೋಗುವ ಹಣವನ್ನು ಸರಿ ಮಾಡಿದೆ ಮತ್ತು ಯಾರು ಮಾದಕವಸ್ತುಗಳನ್ನು ಮಾರುತ್ತಿದ್ದಾರೋ ಅವರನ್ನು ಹಿಡಿದು ಇನ್‌ಸ್ಪೆಕ್ಟ್ ಮಾಡಿ ಕೆಲವರ ಲೈಸೆನ್ಸ್‌ಗಳನ್ನು ರದ್ದುಮಾಡಿದೆ ಮತ್ತು ಕೆಲವರಿಗೆ ಲೈಸೆನ್ಸ್ ರಿನ್ಯೂವಲ್ ಮಾಡಿಲ್ಲ.

ಕೆಲವು ನಿಮಿಷಗಳ ಹಿಂದೆ ಆಸ್ಪತ್ರೆಗಳಿಗೆ ಹೆಚ್ಚಿಸಿರುವ ಗ್ರಾಂಟಿನ ಪ್ರಮಾಣದ ಫಿಗರ್‌ಗಳು ಸಿಗಲಿಲ್ಲ ಎಂದು ಹೇಳಿದ್ದೆ, ಈಗ ಸಿಕ್ಕಿದೆ. ಅದರ ಪ್ರಕಾರ ಜಿಲ್ಲಾ ಆಸ್ಪತ್ರೆಗಳಿಗೆ ೩ ಲಕ್ಷ ಇದ್ದುದನ್ನು ೧೦ ಲಕ್ಷಕ್ಕೆ ಹೆಚ್ಚು ಮಾಡಿದ್ದೇವೆ, ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗೆ ೧ ಲಕ್ಷ ಇದ್ದದ್ದನ್ನು ೨ ಲಕ್ಷಕ್ಕೆ ಏರಿಸಿದ್ದೇವೆ, ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ೨೫ ಸಾವಿರ ಇದ್ದುದನ್ನು ೭೫ ಸಾವಿರಕ್ಕೂ ೨೫ ಸಾವಿರ ಇದ್ದದ್ದನ್ನು ೫೦ ಸಾವಿರಕ್ಕೂ ಮತ್ತು ತಾಲ್ಲೂಕು ಮಟ್ಟದ ಸಣ್ಣ ಘಟಕಗಳಿಗೆ ೧೨ ಸಾವಿರ ಇದ್ದುದನ್ನು ೨೦ ಸಾವಿರಕ್ಕೆ ಏರಿಸಿದ್ದೇವೆ. ಮತ್ತೆ ತಾಲ್ಲೂಕು ಮಟ್ಟದ ಆರೋಗ್ಯ ಘಟಕದಲ್ಲಿ ಹೆರಿಗೆ ವಿಭಾಗ ಸೇರಿ ೧೦ ಸಾವಿರ ರೂಪಾಯಿ ಇದ್ದುದನ್ನು ೫೦ ಸಾವಿರ ರೂಪಾಯಿಗೆ ಏರಿಸಿದ್ದೇವೆ. ತಾಲ್ಲೂಕು ಮಟ್ಟದ ಕೆಳಗೆ ಇರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೆರಿಗೆ ವಿಭಾಗ ಸೇರಿ ೧೨ ಸಾವಿರ ರೂಪಾಯಿಯಿಂದ ೩೦ ಸಾವಿರ ರೂಪಾಯಿಗೆ ಹೆಚ್ಚಿಸಿದ್ದೇವೆ. ಪ್ರಾಥಮಿಕ ಆರೋಗ್ಯ ಘಟಕಗಳಿಗೆ ೮ ಸಾವಿರ ಇದ್ದುದನ್ನು ೨೦ ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ದಾವಣಗೆರೆ ಆಸ್ಪತ್ರೆಗೆ ೩೭ ಲಕ್ಷ ರೂಪಾಯಿ ಇದ್ದುದನ್ನು ೫೦ ಲಕ್ಷ ರೂಪಾಯಿ ಮಾಡಿದ್ದೇವೆ. ನಾನ್‌ಪ್ಲಾನ್‌ನಲ್ಲಿ ಕೂಡ ಹಣವನ್ನು ಈ ಆಸ್ಪತ್ರೆಗೆ ೨೧೪.೫ ಲಕ್ಷ ರೂಪಾಯಿಗೆ ಹೆಚ್ಚಿಸಿದ್ದೇವೆ. ಈ ದೃಷ್ಟಿಯಿಂದ ಔಷಧಗಳಿಗೆ........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗುಲ್ಬರ್ಗಕ್ಕೆ ಹೇಳಿ ?

ಶ್ರೀ ಬಿ. ರಾಚಯ್ಯ.—ಸಾಮಾನ್ಯವಾಗಿ ಎಲ್ಲಾ ಘಟಕಗಳ ಆಸ್ಪತ್ರೆಗಳಿಗೆ ಕೊಟ್ಟಿರುವುದರ ಜೊತೆಗೆ ೧೫ ಪರ್ಸೆಂಟ್ ಹೆಚ್ಚಿಗೆ ಅಲ್ಲಿಗೆ ಕೊಟ್ಟಿದ್ದೇವೆ. ಕುಟುಂಬ ಕಲ್ಯಾಣ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ ಕಳೆದ ೧೯೮೨-೮೩, ೧೯೮೩-೮೪ ಮತ್ತು ೧೯೮೪-೮೫ ರಲ್ಲಿ ಮಾಡಿದ ಸಾಧನೆಗೋಸ್ಕರ ೧ ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದವರು ಬಹುಮಾನವಾಗಿ ನಮಗೆ ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ರೀತಿಯಲ್ಲಿ ಸಹಕರಿಸಿ ಕೆಲಸ ಮಾಡಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ೧೯೮೭-೮೮ರಲ್ಲಿ ನಮ್ಮ ಸಾಧನೆ ೯೧.೩ ಆಗಿದೆ. ವಂಕಿ

ಧಾರಣೆಯಲ್ಲಿ ಸಂತಾನ ನಿರೋಧ ಚಿಕಿತ್ಸೆ ಈ ಭಾಗದಲ್ಲಿ ೯೧.೬ ಆಗಿದೆ. ಇದರಿಂದ 'ಡಿ' ಗ್ರೂಪ್‌ನಲ್ಲಿ ಮೇಲಿನವರಾಗಿದ್ದೇವೆ. ಇದರಿಂದ ಎರಡೂವರೆ ಕೋಟಿ ರೂಪಾಯಿ ನಮಗೆ ಬರಬೇಕೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಸಂತಾನ ಹರಣ ಶಸ್ತ್ರಚಿಕಿತ್ಸೆ ವಿಷಯದಲ್ಲಾಗಲೀ ಕುಟುಂಬ ಕಲ್ಯಾಣ ನಿಯಂತ್ರಣದಲ್ಲಾಗಲೀ, ಪಂಕಿಧಾರಣೆಯಲ್ಲಾಗಲೀ, ಐ. ಯು. ಡಿ. ಯಲ್ಲಾಗಲೀ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾದ ಕಾರ್ಯವನ್ನು ಮಾಡಿದ್ದಾರೆ. ಬರೀ ಶಸ್ತ್ರಚಿಕಿತ್ಸೆ ಮಾಡುವುದಲ್ಲ, ಏತಕ್ಕೋಸ್ಕರ ಇದನ್ನು ಮಾಡುತ್ತಿದ್ದೇವೆ ಎಂಬುದನ್ನು ಜನಗಳಿಗೆ ಪ್ರಚಾರ ಮಾಡಬೇಕೆಂದು ಅವರು ಹೇಳಿದರು. ದೊಡ್ಡ ಕುಟುಂಬ ಇದ್ದರೆ ಅತ್ಯಂತ ಉತ್ತಮವಾಗಿ ಜೀವನವನ್ನು ಸಾಗಿಸುವುದಕ್ಕಾಗುವುದಿಲ್ಲ, ಅವರಿಗಿರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ಚಿಕ್ಕದಾದ ಚೊಕ್ಕವಾದ ಸಂಸಾರ ಆದರೆ ಅವರ ಮಕ್ಕಳಿಗೆ ಬೇಕಾದ ವಿದ್ಯಾಭ್ಯಾಸ, ಆರೋಗ್ಯ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ಸಾಕಷ್ಟು ಮಟ್ಟಿಗೆ ಪ್ರಚಾರ ಮಾಡುತ್ತಿದ್ದೇವೆ. ಫಿಲಂಸ್ ಕೂಡ ತೆಗೆದು ಜನರಿಗೆ ತೋರಿಸುತ್ತಿದ್ದೇವೆ. ಮತ್ತು ಜನರೂ ಕೂಡ ಇದಕ್ಕೆ ಮುಂದೆ ಬರುತ್ತಿದ್ದಾರೆ. ಕೆಲವರಿಗೆ ಏನು ಅಭಿಪ್ರಾಯ ಇದೆ ಅಂದರೆ ಕೇವಲ ಹರಿಜನ ಗಿರಿಜನರಿಗೆ ಹೆಚ್ಚು ಆಪರೇಷನ್ ಮಾಡುತ್ತಿದ್ದಾರೆ, ಬೇರೆಯವರಿಗೆ ಮಾಡುತ್ತಿಲ್ಲ ಎಂಬ ಅಭಿಪ್ರಾಯ ಇದೆ. ಆ ರೀತಿ ಅಲ್ಲ. ಯಾರು ಅವಿದ್ಯಾವಂತರಿದ್ದಾರೆ ಆ ಜನರಿಗೆ ತಿಳುವಳಿಕೆ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿ ಚಿಕ್ಕದಾದ ಸಂಸಾರವನ್ನು ಹೂಡಿದರೆ ಒಳ್ಳೆಯದು ಎಂದು ಪ್ರಚಾರ ಮಾಡುತ್ತಿದ್ದೇವೆ. ಈ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಪ್ರಚಾರ ಕಾರ್ಯ ಏನೂ ಕಳಪೆಯಲ್ಲ. ಹೆಚ್ಚಾಗಿಯೇ ಮಾಡುತ್ತಿದ್ದೇವೆ. ಮಾನ್ಯ ಪಟವುಕ್ಕಿ ರತ್ನಾಕರ್ ಅವರು ಯುವಕರಾಗಿ ಈ ವಿಷಯದಲ್ಲಿ ಹೆಚ್ಚಿನ ಚಿಂತನೆ ಮಾಡಿರುವುದು ಅತ್ಯಂತ ಸಂತೋಷದ ವಿಷಯ. ಮದುವೆ ಮಾಡತಕ್ಕ ವಯಸ್ಸುಗಳನ್ನು ೧೮ ವರ್ಷ ಎಂದು ನಿಗದಿ ಮಾಡಿ ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತಿದ್ದೇವೆ. ಅದಕ್ಕಿಂತ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದರೆ ಅದು ಕಾನೂನಿಗೆ ವಿರುದ್ಧವಾಗುತ್ತದೆ. ಆದ್ದರಿಂದ ಯುವಕರು ಭಾವಿ ಸಂಸಾರ ಹೇಗಿರಬೇಕು ಎಂದು ಚಿಂತನೆ ಮಾಡತಕ್ಕದ್ದು ಪ್ರಗತಿಯ ಕುರುಹು ಎಂದು ಭಾವಿಸಿಕೊಂಡಿದ್ದೇನೆ. ಇಂಥ ಚಿಂತಕರು ಹೆಚ್ಚಾದರೆ ಸಣ್ಣ ಸಣ್ಣ ಸಂಸಾರವನ್ನು ಹೂಡುವುದಕ್ಕೆ ಅನುಕೂಲವಾಗುತ್ತದೆ. ಚೈನಾ ದೇಶದಲ್ಲಿ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೇ ಅವರು ಚಿಂತನೆ ಮಾಡಿ ಇನ್ನೂ ಲಗ್ನ ಮಾಡಿಕೊಂಡಿಲ್ಲ. (ಶ್ರೀ ಪಟವುಕ್ಕಿ ರತ್ನಾಕರ್ ಅವರನ್ನು ಕುರಿತು)

ಶ್ರೀ ಬಿ. ರಾಚಯ್ಯ.—ಯುವಕರು ಈ ರೀತಿಯ ಚಿಂತನೆ ಮಾಡಿದರೆ ನಮ್ಮ ಗುರಿಸಾಧನೆ ಏನಿದೆ ಅದನ್ನು ಸಾಧಿಸಬಹುದು. ಬರ್ತ್ ರೇಟನ್ನು ಇಳಿಸಬಹುದು. ಸಾವಿರಕ್ಕೆ ೨೯ ಬರ್ತ್ ರೇಟ್ ಇರುವುದನ್ನು ೨೧ಕ್ಕೆ ಇಳಿಸಬೇಕೆಂದು ಯೋಚನೆ ಮಾಡಿದ್ದೇವೆ. ಕಳೆದ ೯ ವರ್ಷಗಳಲ್ಲಿ ನಾವು ಸಾಕಷ್ಟು ಗುರಿ ಸಾಧಿಸಿದ್ದೇವೆ. ಮತ್ತೆ ಸಾಂಪತ್ಯ ಸಂರಕ್ಷಣೆ ಏನು ಇದೆ, ಇದು ೩೯ ಇದ್ದದ್ದು ೬೯ಕ್ಕೆ ಹೆಚ್ಚಿಸಬೇಕೆಂದು ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಶಿಶುಗಳು ಈಗ ಏನು ಸಾಯುತ್ತಿವೆ, ಅದನ್ನು ಬೇರೆ ರಾಜ್ಯಗಳಲ್ಲಿ ಹೋಲಿಸಿ ನೋಡಿದರೆ ಇದು ಸ್ವಲ್ಪ ಮಟ್ಟಿಗೆ ನಮ್ಮಲ್ಲಿ ಕಡಿಮೆಯಾಗಿದೆ, ಅದನ್ನು ಶೇಕಡ ೭೪ರಿಂದ ೬೦ಕ್ಕೆ ಇಳಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಆ ದೃಷ್ಟಿಯಲ್ಲಿ ರಾಷ್ಟ್ರೀಯ ಕಾರ್ಯಕ್ರಮ ಏನು ಇದೆ, ಆ ಕಾರ್ಯಕ್ರಮಗಳಲ್ಲಿ ನಮ್ಮ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ ಈ ಯೋಜನೆ ಅಡಿಯಲ್ಲಿ ಜನಸಂಖ್ಯೆಯನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಹಲವರು ಕೌಟುಂಬಿಕ ಕಲ್ಯಾಣ ಮತ್ತು ತಾಯಿ-ಮಗು ಇಬ್ಬರ ಆರೋಗ್ಯವನ್ನು ನೋಡಿಕೊಳ್ಳುವುದಕ್ಕೆ ನಾವು ಸಾಕಷ್ಟು ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇವೆ. ಎಲ್ಲಾ ಜನರಿಗೂ ಕೂಡ ೨೦೦೦ನೇ ಇಸವಿಯ ಹೊತ್ತಿಗೆ ಆರೋಗ್ಯವನ್ನು ಕೊಡಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ಕೆಲವು ಮಾನ್ಯ ಸದಸ್ಯರು ತಮ್ಮ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಈಗ ನಮ್ಮಲ್ಲಿರತಕ್ಕ ಜಿಲ್ಲಾ ಆಸ್ಪತ್ರೆಗಳ ಜೊತೆಗೆ ಆರೋಗ್ಯ ಕೇಂದ್ರಗಳು ೧೨೩೩ ಇವೆ. ಆರೋಗ್ಯ ಘಟಕಗಳು ೭೬೭೭ ಇವೆ. ಇವುಗಳ ಜೊತೆಗೆ ಉಪ ಕೇಂದ್ರಗಳು, ಮತ್ತೆ ನಗರದಲ್ಲಿರತಕ್ಕ ಕುಟುಂಬ ಕಲ್ಯಾಣ ಯೋಜನೆಗಳ ಕೇಂದ್ರಗಳು ೧೧೦ ಇವೆ. ಈ ಎಲ್ಲ ವ್ಯವಸ್ಥೆಯ ಮುಖಾಂತರ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸಿ, ಆದ್ಧರ ಮುಖಾಂತರ ಜನತೆಗೆ ಅವಶ್ಯಕವಾಗಿ ಆರೋಗ್ಯ ಮತ್ತು ಅವರಿಗೆ ಬೇಕಾಗಿರತಕ್ಕ ಚಿಕಿತ್ಸೆ ಕಾರ್ಯಕ್ರಮಗಳನ್ನು ಮಾಡತಕ್ಕ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಈ ದೃಷ್ಟಿಯಲ್ಲಿ ಹೇಳುವುದಾದರೆ ನಮ್ಮ ಸಾಧನೆ ಬಹುಶಃ ಕೇಂದ್ರ ಸರ್ಕಾರ ಎರಡು ಸಲ ಕೊಟ್ಟಿರತಕ್ಕ ಬಹುಮಾನವನ್ನು ನೋಡಿದರೆ ನಮ್ಮ ಇಲಾಖೆ ಈ ಭಾಗದಲ್ಲಿ ಅತ್ಯಂತ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂಬುದಾಗಿ ಹೇಳಬಹುದು. ಇನ್ನೂ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಅವರಿಗೆ ಪ್ರೋತ್ಸಾಹ ನೀಡುವುದ

ಕೋಸ್ಕರ ಅನೇಕ ಬಹುಮಾನಗಳನ್ನೂ ಕೊಡುತ್ತೇವೆ. ಜಿಲ್ಲಾ ಮಟ್ಟದಲ್ಲೂ ಕೂಡ ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ಕೆಲವಾರು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಮೂಲಕ ಜನತೆಗೆ ತಿಳುವಳಿಕೆಯನ್ನು ಕೊಡತಕ್ಕ ಕೆಲಸವನ್ನೂ ಕೂಡ ನಾವು ಮಾಡುತ್ತಿದ್ದೇವೆ. ಅದರಲ್ಲೂ ಕೂಡ ನಮ್ಮ ಧಾರವಾಡ ಜಿಲ್ಲೆಯಲ್ಲಿ ಆಕಾಶವಾಣಿ ಮೂಲಕ ಕೆಲವು ಪಾಠಗಳನ್ನು ಜನರಿಗೆ ಹೇಳಿಸಿ, ಆ ಪಾಠಗಳನ್ನು ಯಾರ್‍ಯಾರು ಹೆಣ್ಣು ಮಕ್ಕಳು ಕೇಳಿದ್ದಾರೆ, ಅವರೆಲ್ಲೇ ಒಂದು ಸ್ಪರ್ಧೆಯನ್ನು ಏರ್ಪಾಡು ಮಾಡಿ ಅವರಲ್ಲಿ ಉತ್ತೀರ್ಣರಾದಂತಹವರಿಗೆ ಬಹುಮಾನವನ್ನು ಕೊಡತಕ್ಕಂತ ಕಾರ್ಯಕ್ರಮವನ್ನೂ ನಾವು ಇಟ್ಟುಕೊಂಡಿದ್ದೇವೆ. ನಾವು ಈ ರೀತಿಯಾಗಿ ರೇಡಿಯೋದಲ್ಲಿ ಹೇಳಿಕೊಡತಕ್ಕ ಪಾಠಗಳು ಯಾವುವೆಂದರೆ ಕುಟುಂಬ ಸಂರಕ್ಷಣೆ ವಿಷಯದಲ್ಲಿ ಮಕ್ಕಳಿಗೆ ಹಾಲನ್ನು ತಾಯಿ ಯಾವರೀತಿ ಕೊಡಬೇಕು. ಯಾವ್ಯಾವ ಕಾಲದಲ್ಲಿ ಮಕ್ಕಳಿಗೆ ಚಿಕಿತ್ಸೆಯನ್ನು ಕೊಡಿಸಬೇಕು ಎಂಬುದನ್ನೆಲ್ಲಾ ಹೇಳಿಕೊಡುತ್ತಿದ್ದೇವೆ. ಶಿಶು ಸಂರಕ್ಷಣೆಯ ಬಗ್ಗೆ ಹೇಳುವುದಾದರೆ, ಮಕ್ಕಳಿಗೆ ಹೆಚ್ಚಾಗಿ ೬ ರೋಗಗಳು ಪ್ರಾರಂಭದಲ್ಲಿ ಬರುತ್ತವೆ. ಆ ೬ ರೋಗಗಳನ್ನು ತಪ್ಪಿಸಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಯೋಚನೆಮಾಡಿ ಆ ಬಗ್ಗೆಯೂ ಕೂಡ ಜನರಿಗೆ ತಿಳುವಳಿಕೆಯನ್ನು ನೀಡುತ್ತಿದ್ದೇವೆ. ದಢಾರ್ ಆಗಲಿ, ಟಿಟೆನಸ್ ಆಗಲಿ, ನಾಯಿ ಕೆಮ್ಮು ಆಗಲೀ ಸಾಮಾನ್ಯವಾಗಿ ಮಕ್ಕಳಿಗೆ ಬರುತ್ತದೆ. ಇದಕ್ಕೆ ಪ್ರಾರಂಭದಲ್ಲೇ ಬಿ. ಸಿ. ಜಿ. ವ್ಯಾಕ್ಸಿನೇಷನ್ ಹಾಕಿಸಬೇಕು. ಇವೆಲ್ಲಾವನ್ನೂ ಯಾವ ಯಾವ ಕಾಲದಲ್ಲಿ ಮಾಡಬೇಕೆಂಬುದರ ಬಗ್ಗೆ ಅವರಿಗೆ ತಿಳಿಸಿ ಅವರ ಮುಖಾಂತರ ಜನರಿಗೆ ತಿಳುವಳಿಕೆಯನ್ನು ಕೊಟ್ಟು ಬಧುವಂತಹ ಕಾಯಿಲೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದರಲ್ಲೂ ಬಹಳ ಮುಖ್ಯವಾಗಿ ನಾಯಿ ಕೆಮ್ಮಿಗೆ ಔಷಧಿ ಸಿಕ್ಕುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ರೀ-ಕಾನಲೈಸೇಷನ್ ಮಾಡುತ್ತಿದ್ದಾರೆ. ರಾಣೇಬೆನ್ನೂರಿನಲ್ಲಿ ಹೊಸದಾಗಿ ಮದುವೆಯಾಗಿರತಕ್ಕ ದಂಪತಿಗಳಿಗೆ ಸಂತಾನ ಚಿಕಿತ್ಸೆ ಮಾಡಿದ್ದಾರೆಂದು ಪತ್ರಿಕೆಗಳಲ್ಲೂ ಕೂಡ ಆ ಬಗ್ಗೆ ಟೀಕೆ ಟಿಪ್ಪಣಿಗಳು ಬಂದಿವೆ. ಆದರೆ ಆ ಬಗ್ಗೆ ವೈದ್ಯರು ಪರಿಶೋಧನೆ ಮಾಡಿ ರಿ-ಕ್ಯಾನಲೈಜೇಷನ್ ಮಾಡತಕ್ಕಂತಹ ವ್ಯವಸ್ಥೆಯನ್ನು ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಮಾಡುತ್ತಿದ್ದೇವೆ. ಆದ್ದರಿಂದ ಜನರು ಭಯಪಡಬೇಕಾದ ಅಗತ್ಯ ಇಲ್ಲ. ಶಸ್ತ್ರ ಚಿಕಿತ್ಸೆ ಮಾಡುವಾಗ ಲ್ಯಾಪ್ರಸ್ಕೋಪ್ ಚಿಕಿತ್ಸೆ ಒಳ್ಳೆಯದಲ್ಲ ಎಂಬುದಾಗಿ ಜನರು ತಿಳಿದುಕೊಂಡಿದ್ದಾರೆ. ಅದನ್ನು ಕರೆಂಟಿನಿಂದ ಮಾಡುತ್ತಿದ್ದಾರೆ

೧೦–೩೦ ಪಿ. ಎಂ.

ಎನ್ನುವ ಭಯ ಜನರಲ್ಲಿ ಬಂದಿದೆ. ಕರೆಂಟ್‌ನಿಂದ ಆ ಆಪರೇಷನ್ ಮಾಡುವುದಿಲ್ಲ. ಅದು ಬರೀ ಸಣ್ಣ ಆಪರೇಷನ್ ಆಗಿದ್ದು ಆ ವೇಳೆಯಲ್ಲಿ ಸ್ವಲ್ಪ ಗ್ಯಾಸ್ ಹೊರಗೆ ಬರುವ ರೀತಿಯಲ್ಲಿ ಮಾಡುತ್ತಾರೆ. ಅದರಿಂದ ಶಬ್ದ ಬರುತ್ತದೆ. ಇದನ್ನೇ ಅವರು ಕರೆಂಟ್ ಎಂದು ತಿಳಿದಿದ್ದಾರೆ. ಆದರೆ ಅದು ಸರಿಯಲ್ಲ. ಇದು ಸಿಂಪಲ್ ಆಪರೇಷನ್ ಎಂದು ಹೇಳಿದ್ದೇವೆ. ಇವತ್ತು ಲೆಪ್ರೋಸ್ಕೋಪಿಕ್ ಆಪರೇಷನ್‌ಗೆ ಹೆಚ್ಚು ಜನರು ಬರುತ್ತಿದ್ದಾರೆ. ಇದು ಕರೆಂಟ್‌ನಲ್ಲಿ ಮಾಡುವುದು ಅಲ್ಲ ಎಂದು ನಾವು ಹೇಳುತ್ತೇವೆ.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ನೀವು ಆಪರೇಷನ್ ನೋಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ನಾನು ಆಪರೇಷನ್ ರೂಮಿಗೆ ಹೋಗೇ ಇಲ್ಲ. ಅಲ್ಲಿಗೆ ಹೋದರೆ ನಮ್ಮ ಡಾಕ್ಟರರು ಈ ರೀತಿ ಮಾಡುತ್ತಾರೆಂದು ಹೇಳಿರುವುದನ್ನು ಕೇಳಿದ್ದೇನೆ. ಇವತ್ತು ರೀ-ಕ್ಯಾನಲೈಸೇಷನ್ ಸೆಂಟರ್‌ಗಳು ಬೆಂಗಳೂರು, ಮೈಸೂರು. ಹುಬ್ಬಳ್ಳಿ ಹಾಗೂ ಬಳ್ಳಾರಿಯಲ್ಲಿ ಇವೆ. ಇಬ್ಬರು ಮಕ್ಕಳಾದ ಮೇಲೆ ಆಪರೇಷನ್ ಮಾಡಿಸಿಕೊಂಡಿದ್ದು ಅಕಸ್ಮಾತ್ ಆ ಮಕ್ಕಳು ದೈವಾಧೀನರಾದಮೇಲೆ ಮಕ್ಕಳು ಇಲ್ಲವಲ್ಲ ಎಂದು ಕೊರಗಬೇಕಾಗಿಲ್ಲ. ಮೊನ್ನೆತಾನೇ ನಮ್ಮ ಡಾಕ್ಟರು ಒಬ್ಬರಿಗೆ ಈ ರೀತಿಯಾಗಿ ಆದಮೇಲೆ ಅವರು ರೀ-ಕ್ಯಾನಲೈಸೇಷನ್ ಆಪರೇಷನ್ ಮಾಡಿಸಿಕೊಂಡಿದ್ದಾರೆ. ಆದುದರಿಂದ ಅವರಿಗೂ ಸಂತಾನ ವೃದ್ಧಿಗೊಳಿಸುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ನಮ್ಮ ತಜ್ಞರು ತಿಳಿಸಿದ್ದಾರೆ. ಅದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಇದರ ಮುಖಾಂತರ ಜನರಿಗೂ ಗೊತ್ತಾಗುತ್ತದೆ. ಇವತ್ತು ವ್ಯಾಸಕ್ಟಮಿ ಆಗಲೀ, ಟ್ಯೂಬೆಕ್ಟಮಿಯಾಗಲೀ ಅದ್ದರಿಂದ ಏನು ಒಂದು ಹೊರಗಡೆ ಬರತಕ್ಕದ್ದನ್ನು ತಪ್ಪಿಸಿರುತ್ತಾರೆ. ಮತ್ತೆ ಅದು ಬರುವುದಕ್ಕೆ ಏನು ಆಗಬೇಕೋ ಆರೀತಿ ಇದರಲ್ಲಿ ಕನೆಕ್ಟ್ ಮಾಡುತ್ತಾರೆ. ಅದಕ್ಕೆ ಇವತ್ತು ಅವಕಾಶ ಇದೆ. ಈ ನಾಲ್ಕು ಸೆಂಟರ್‌ಗಳಲ್ಲಿ ಈ ಬಗ್ಗೆ ಆಪರೇಷನ್ ಮಾಡಿಸಿಕೊಳ್ಳಬಹುದು. ನಾಯಕರೇನಾದರೂ ಆಪರೇಷನ್ ಮಾಡಿಸಿಕೊಂಡಿದ್ದಾರೆ ತೊಂದರೆ ಬಂದರೆ ರೀ-ಕ್ಯಾನಲೈಸೇಷನ್ ಮಾಡಿಸಿಕೊಳ್ಳಬಹುದು. ಏಕೆಂದರೆ ಅವರು ಈಗಾಗಲೇ...

ಶ್ರೀ ಆರ್. ಎನ್. ನಾಯಕ್.—ಆಪರೇಷನ್ ಬಗ್ಗೆ ನೀವು ಚೆನ್ನಾಗಿ ಹೇಳುತ್ತಿಲ್ಲ. ಬೇರೆ ವಿಷಯ ಹೇಳಿ.

ಶ್ರೀ ಬಿ. ರಾಚಯ್ಯ.—ಈಗ ಆಪರೇಷನ್ ಮಾಡದೇ ಇದ್ದರೂ ಕೂಡಾ ಹೆಣ್ಣುಮಕ್ಕಳಿರ ವಂಕಿದಾರಣೆ, ಓರಲ್ ಪಿಲ್ಸ್ ಮೂಲಕ ಮಕ್ಕಳಾಗುವುದನ್ನು ತಡೆಗಟ್ಟುವ ಬಗ್ಗೆ ಹೆಚ್ಚು ಪ್ರಚಾರ ಮಾಡಿದರೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ಇದನ್ನು ಜಾಸ್ತಿ ಪ್ರಚಾರ ಮಾಡಿದರೆ ಆಗುತ್ತದೆ. ಇವತ್ತು ನಾಲ್ಕು ರೀತಿಯಲ್ಲಿ ಸಂತಾನ ನಿಲ್ಲಿಸುವುದಕ್ಕೆ ಸಾಧ್ಯ ಇದೆ. ಹೆಚ್ಚು ವಿದ್ಯಾವಂತರು ಆದಂತೆಲ್ಲಾ ಈ ಬಗ್ಗೆ ಹೆಚ್ಚು ಪರಿಣಾಮವಾಗುತ್ತದೆ. ನಮ್ಮಲ್ಲಿ ಅವಿದ್ಯಾವಂತರೇ ಹೆಚ್ಚು ಇರುವುದರಿಂದ ಹೆಣ್ಣು ಮಕ್ಕಳು ಡಾಕ್ಟರುಗಳನ್ನು ಕೇಳಲು ನಾಚಿಕೆಪಟ್ಟುಕೊಳ್ಳುತ್ತಾರೆ. ಹೆಣ್ಣುಮಕ್ಕಳು ಡಾಕ್ಟರ್ ಇದ್ದರೆ ಸ್ವಲ್ಪ ಕೇಳುತ್ತಾರೆ. ಯಾರು ಇವತ್ತು ಆಪರೇಷನ್ ಮಾಡಿಸಿಕೊಂಡಿದ್ದಾರೋ ಅವರು ಇವರ ಜೊತೆ ಚರ್ಚೆ ಮಾಡಿದರೆ ಉತ್ತಮವಾಗುತ್ತದೆಂದು ತಿಳಿದುಕೊಂಡೇ ಆ ರೀತಿಯಲ್ಲಿ ಒಂದು ಚಲನಚಿತ್ರ ಕೂಡಾ ಮಾಡಿ ದೂರದರ್ಶನದ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಅದನ್ನು ನೋಡಿ ಜನರು ಹೆಚ್ಚು ಹೆಚ್ಚಾಗಿ ಇದರ ಬಗ್ಗೆ ಆಪರೇಷನ್ ಮಾಡಿಸಿಕೊಳ್ಳಲು ಬರುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಎಲ್ಲಾ ಕಡೆ ಲೇಡಿ ಡಾಕ್ಟರುಗಳನ್ನೇ ಹಾಕಿ.

ಶ್ರೀ ಬಿ. ರಾಚಯ್ಯ.—ಹೆಣ್ಣುಮಕ್ಕಳಾದರೂ ಅಷ್ಟೇ, ಗಂಡುಮಕ್ಕಳಾದರೂ ಅಷ್ಟೆ. ಹೆಣ್ಣುಮಕ್ಕಳಿಗೂ ಗಂಡುಮಕ್ಕಳಷ್ಟೆ ಹಕ್ಕು ಇದೆ ಎಂದು ಕಾನೂನು ಮಂತ್ರಿಗಳು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕಿಯವರು ಯಾರಿಗೂ ಕಡಿಮೆ ಇಲ್ಲದಂತೆ ಮುಖಂಡತ್ವ ವಹಿಸಿ ಕೆಲಸ ಮಾಡುತ್ತಿದ್ದಾರೆ. ಇಂದಿರಗಾಂಧಿಯವರು ಪ್ರಧಾನಮಂತ್ರಿಗಳಾಗಿ ಕೆಲಸ ಮಾಡಿದರು. ಥ್ಯಾಚರ್, ಸಿರಿಮಾವೋ ಎಲ್ಲರದ ಯಾವ ರೀತಿ ಸೇವೆ ಸಲ್ಲಿಸಿದ್ದಾರೆಂದು ತಮಗೆಲ್ಲಾ ಗೊತ್ತಿದೆ. ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ ಹೆಣ್ಣುಮಕ್ಕಳೇ ತಂದೆ ತಾಯಿಯರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುವವರು.

ಶ್ರೀ ಆರ್. ಎನ್. ನಾಯಕ್.—ವಯಸ್ಸಾದಮೇಲೆ ಇದೆಲ್ಲಾ ಅನುಭವಕ್ಕೆ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಇವತ್ತಿನ ದಿವಸ ಜನಸಂಖ್ಯಾಸ್ಫೋಟವನ್ನು ತಡೆಯದೇ ಹೋದರೆ 8ನೇ ಯೋಜನೆಗೆ ಏನೆಲ್ಲಾ ಮಾಡಿದ್ದೇವೆ ಅದೆಲ್ಲಾ ಉಪಯೋಗವಾಗುವುದಿಲ್ಲ. ಇವತ್ತು ಬಡತನದ ರೇಖೆಗಿಂತಾ ಕೆಳಗೆ ಏನು ೫೨ ಪರ್ಸೆಂಟ್ ಜನ ಇದ್ದಾರೆ, ಅವರು ಅಭಿವೃದ್ಧಿ ಹೊಂದಬೇಕಾಗಿದ್ದರೆ ಬೆಳೆಯುತ್ತಿರತಕ್ಕ ಜನಸಂಖ್ಯೆಯನ್ನು ತಡಗಟ್ಟಬೇಕು. ಇದರ ಕಡೆಗೆ ನಿಧಾನವಾದರೂ ಕೂಡಾ ಕೇಂದ್ರ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಸಂಜಯ ಗಾಂಧಿಯವರನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಬಹಳ ಸಂತೋಷದಿಂದ ಹೇಳುತ್ತೇನೆ. ಕುಟುಂಬ ನಿಯಂತ್ರಣ ಮಾಡಬೇಕೆಂದು ಅವರು ಕಡ್ಡಾಯ ಮಾಡಿದ್ದರು. ಅವರು ಆ ರೀತಿಯ ಕಡ್ಡಾಯ ಮಾಡದಿದ್ದರೆ ಜನಸಂಖ್ಯೆ ಜಾಸ್ತಿಯಾಗುತ್ತಿತ್ತು. ಕೆಲವು ವರ್ಗಗಳವರು ಈ ಪರಿಮಿತಿಗೆ ಬರುತ್ತಿಲ್ಲ. ಕೇಂದ್ರ ಸರ್ಕಾರದವರು ಈ ಬಗ್ಗೆ ಪುನಃ ಪರಿಶೀಲನೆ ಮಾಡಿದರೆ ಬಹಳ ಒಳ್ಳೆಯದೆಂದು ಈ ಸಂದರ್ಭದಲ್ಲಿ ಸೂಚನೆಯನ್ನು ಕೊಡುತ್ತಿದ್ದೇನೆ ಏರುತ್ತಿರುವ ಜನಸಂಖ್ಯೆಯನ್ನು ಸ್ಫೋಟವನ್ನು ತಡೆಗಟ್ಟಬೇಕಾದರೆ ಆರೋಗ್ಯ ಇಲಾಖೆಯಿಂದ ಮಾತ್ರವಲ್ಲ, ಕೇವಲ ಸರ್ಕಾರಿ ನೌಕರರು ಆಪರೇಷನ್ ಮಾಡಿಸಿಕೊಂಡರೆ ಅಲ್ಲ, ಇದು ಎಲ್ಲಾ ಕಡೆಗೂ ಪ್ರಚಾರವಾಗಬೇಕು. ಈ ಕಾರ್ಯವನ್ನು ಮಾಡುವುದಕ್ಕೆ ಸರ್ವರೂ ಪ್ರಯತ್ನ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಲಸಿಕೆ ಬಗ್ಗೆ ಮಾತನಾಡಿದರು. ೧೨ ಜಿಲ್ಲೆಗಳಲ್ಲಿ ಲಸಿಕೆಗಳ ಲಭ್ಯವಿದೆ. ಉಳಿದ ೮ ಜಿಲ್ಲೆಗಳ ಪೂರ್ಣವಾಗಿ ಲಸಿಕೆಗಳು ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಈವರ್ಷ ನಾವು ಕೇಂದ್ರಸರ್ಕಾರದ ಧನಸಹಾಯದಿಂದ ೫೦೦ ಉಪ ಆರೋಗ್ಯ ಕೇಂದ್ರಗಳನ್ನು ತೆರೆದಿದ್ದೇವೆ. ಇದಕ್ಕೆ ಕೇಂದ್ರಸರ್ಕಾರ ಪೂರ್ತಿ ಹಣವನ್ನು ಕೊಟ್ಟಿದೆ. ೮೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ಕುಷ್ಠರೋಗ ತಡೆಗಟ್ಟುವ ಬಗ್ಗೆ ಕೆಲವು ಸಾಧನೆಗಳನ್ನು ಮಾಡಿದ್ದೇವೆ. ಕ್ಷಯರೋಗ ಪರೀಕ್ಷಾಕೇಂದ್ರ ಹಾಗೂ ಕ್ರಿಮಿನಾಶಕ ಪ್ರಯೋಗಾಲಯವನ್ನು ಬೆಂಗಳೂರು ನಗರದಲ್ಲಿ ಸ್ಥಾಪನೆ ಮಾಡಿದ್ದೇವೆ. ಮತ್ತೆ, ಅನೇಕ ಡಾಕ್ಟರುಗಳು ಗೈರುಹಾಜರಾಗಿ ಹೊರಗಡೆ ಹಾಗೂ ಒಳಗಡೆ ಸ್ವಂತ ಕ್ಲಿನಿಕ್‌ಗಳನ್ನು ನಡೆಸುತ್ತಿದ್ದಾರೆ. ಅಂತಹವರು ೧೦೦ ಜನರು ಇದ್ದಾರೆ. ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಲೀಗಲ್ ಸೆಲ್ ಮುಖಾಂತರ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೊಸದಾಗಿ ಲೀಗಲ್ ಸೆಲ್ ಅನ್ನು ಈ ವರ್ಷ

ಮಾಡಿದ್ದೇವೆ. ೧೯೮೮-೮೯ನೇ ಸಾಲಿನಲ್ಲಿ ೧೧೬ ಉಪಕೇಂದ್ರಗಳನ್ನು ತೆರೆಯುತ್ತೇವೆ. ೩೦೦ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ಈ ವರ್ಷ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ೩೧ ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಾಡಬೇಕೆಂದು ಇದ್ದೇವೆ. ಕೇಂದ್ರ ಸರ್ಕಾರದ ಯೋಜನೆಯಂತೆ ಕುಷ್ಠರೋಗ, ಕ್ಷಯರೋಗ, ಅಂಧತ್ವ ನಿವಾರಣೆ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ನಿಗದಿತ ಗುರಿ ಸಾಧನೆ ಮಾಡಿದ್ದೇವೆ. ಆಹಾರ ಸೇವನೆಯಲ್ಲಿ ಅಯೋಡಿನ್ ಕಡಿಮೆಯಾಗಿ ಗಂಟಲು ಬೇನೆ ರೋಗ ಬರುತ್ತಿತ್ತು. ಅದನ್ನು ನಿಯಂತ್ರಣ ಮಾಡುವುದಕ್ಕೆ ಕಾರ್ಯಕ್ರಮವನ್ನು ಈ ವರ್ಷ ಹಾಕಿಕೊಂಡಿದ್ದೇವೆ. ಯಾವ ಭಾಗದಲ್ಲಿ ಗಂಟಲುಬೇನೆ ರೋಗ ಬರುತ್ತಿತ್ತು, ಅಲ್ಲಿ ಅಯೋಡಿನ್ ಉಪ್ಪನ್ನು ಹಂಚಿಕೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ವರ್ಷ ಆರೋಗ್ಯ ಇಲಾಖೆಯ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿದ್ದ ಹಣವನ್ನು ಜಿಲ್ಲಾ ಪರಿಷತ್‌ಗಳಿಗೆ ಕೊಟ್ಟಿದ್ದೇವೆ. ೧೯೮೭-೮೮ನೇ ಸಾಲಿನಲ್ಲಿ ೧೮.೭೪ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದು ಅದರಲ್ಲಿ ೧೧.೪೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೇವೆ. ಅದರಲ್ಲಿ ೬೦ ಪರ್ಸೆಂಟ್ ಹಣವನ್ನು ಕೊಟ್ಟಹಾಗೆ ಆಯಿತು. ಮಿನಿಮಮ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ಹೆಚ್ಚು ಸಹಾಯವಾಗಿದೆ. ಆದರಲ್ಲಿ ೧೯೮೮-೮೯ನೇ ಸಾಲಿನಲ್ಲಿ ೨೦.೭೦ ಕೋಟಿಯಲ್ಲಿ ೧೩.೫೦ ಕೋಟಿ ಹಣವನ್ನು ಜಿಲ್ಲಾ ಪರಿಷತ್‌ಗಳಿಗೆ ಈಗಾಗಲೇ ವರ್ಗಾಯಿಸಿದ್ದೇವೆ. ಅಂದರೆ ಶೇಕಡ ೬೫ರಷ್ಟು ಕೊಟ್ಟಹಾಗೆ ಆಯಿತು. ಗ್ರಾಮೀಣ ಆರೋಗ್ಯ—ಮಿನಿಮಮ್ ನೀಡ್ ಪ್ರೋಗ್ರಾಮ್ ಕಾರ್ಯಕ್ರಮದ ಒಟ್ಟು ೧೮೭೪ ಲಕ್ಷ ಹಣದಲ್ಲಿ ೧೦೬೯ ಲಕ್ಷ ರೂಪಾಯಿಗಳನ್ನು ಅಂದರೆ ೫೭ ಪರ್ಸೆಂಟ್ ಅಷ್ಟನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸುತ್ತಿದ್ದೇವೆ. ಹಾಗೆಯೇ ೨೦೭೦ ಲಕ್ಷ ಇದ್ದುದನ್ನು ೧೨೫೫ಕ್ಕೆ ಅಂದರೆ ೬೦ ಪರ್ಸೆಂಟ್‌ನ್ನು ಪ್ಲಾನ್‌ನಲ್ಲಿ ಕೂಡ ಅವರಿಗೆ ಕೊಡುತ್ತಿದ್ದೇವೆ. ಈಗ ಇರತಕ್ಕಂಥ ೭೬೭೭ ಉಪಕೇಂದ್ರಗಳು ಇನಿವೆ, ಇದರಲ್ಲಿ ಮತ್ತೆ ೧೧೬ ಅಷ್ಟು ಹೆಚ್ಚು ಮಾಡ ಬೇಕಾಗಿದೆ ಎಂದು ಹೇಳಿದ್ದೇವೆ. ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ೧೯೯೦ರ ವೇಳೆಗೆ ೧೧೩೯ ಪಿ.ಹೆಚ್.ಸಿ. ಬೇಕಾಗಿದೆ. ಇದರಲ್ಲಿ ಈಗ ೫೪೫ ಮಾತ್ರ ಇವೆ. ೧೯೮೮-೮೯ರಲ್ಲಿ ೩೦೦ ಪಿ.ಹೆಚ್.ಸಿ. ಗಳನ್ನಾಗಿ ಪರಿವರ್ತಿಸುತ್ತಿದ್ದೇವೆ. ಸಮುದಾಯ ಯೋಜನೆಯಲ್ಲಿ ೧೫೬ ಇದೆ. ಈ ವರ್ಷ ೩೧ನ್ನು ಹೆಚ್ಚು ಮಾಡಬೇಕೆಂದು ಮಾಡಿದ್ದೇವೆ. ಇದರಲ್ಲಿ ೯ ಸಬ್‌ಪ್ಲಾನ ನಲ್ಲಿ, ಇನ್ನೊಂದು ಟ್ರೈಬಲ್ ಪ್ಲಾನ್‌ನಲ್ಲಿ ಮಾಡುತ್ತಿದ್ದೇವೆ. ಆದ್ದರಿಂದ ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿರತಕ್ಕಂಥ ಹಣವನ್ನು ನಾವು ಲ್ಯಾಪ್ಸ್ ಮಾಡುತ್ತಿಲ್ಲ, ಹೆಚ್ಚಾಗಿಯೇ ಖರ್ಚು ಮಾಡಿದ್ದೇವೆ. ಇದರಲ್ಲಿ ಮಲೇರಿಯಾ ಏರಿಯಾದಲ್ಲಿ ೧೩೦ ರಷ್ಟು ಹಣ ಖರ್ಚು ಮಾಡಿದ್ದೇವೆ. ಈ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಕರ್ನಾಟಕ ಸರ್ಕಾರ ಈ ಕೇಂದ್ರ ಸರ್ಕಾರದ ಹಣವನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಿದರು. ಹಾಗೇನೂ ಆಗಿಲ್ಲ. ನಾವು ಹಣ ಉಪಯೋಗಿಸಿಕೊಂಡಿದ್ದೇವೆ. ನಮ್ಮ ಹಣಕಾಸಿನ ಇಲಾಖೆಯ ಮ್ಯಾಚಿಂಗ್ ಗ್ರಾಂಟ್ ಇರತಕ್ಕದ್ದರಲ್ಲಿ ಸ್ವಲ್ಪ ನಿಧಾನ ಆಗುತ್ತಿರುವುದರಿಂದ ವೇಗ ಎಷ್ಟು ಬೇಗ ಓಡಬೇಕಾಗಿತ್ತೋ ಅಷ್ಟರಮಟ್ಟಿಗೆ ಓಡಿಲ್ಲವೆಂದು ಹೇಳದೇ ವಿಧಿ ಇಲ್ಲ. ಈ ಕಾರಣಕ್ಕೋಸ್ಕರ ಆರೋಗ್ಯ ಇಲಾಖೆ ತನ್ನ ಕಾರ್ಯ ಮಾಡುವುದರಲ್ಲಿ ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಈಗ ಶ್ರೀ ಬೆಲ್ಲದ್‌ರವರು, ಶ್ರೀ ರತ್ನಾಕರ್‌ರವರು ಒಂದು ವಿಷಯವನ್ನು ಹೇಳಿದರು. ಪ್ರಪಂಚಕ್ಕೇ ಕೊಡುಗೆಯಾದಂಥ ಮಲೇರಿಯಾ ಮತ್ತು ಕ್ಯಾನ್ಸರ್ ಬಾರದಂತೆ ಮಾಡಲು ಒಂದೇ ಲಸಿಕೆಯನ್ನು ತಯಾರು ಮಾಡಿದ್ದನ್ನು ಬೇರೆ ದೇಶದವರು ಪ್ರಶಂಸಿಸಿದ್ದಾರೆ ಎಂದು ಡಾಕ್ಟರ್ ಬಸವರಾಜ್ ಅವರು ತಿಳಿಸಿದ್ದಾರೆ. ಇದು ಕರ್ನಾಟಕದವರೇ ಮಾಡಿರತಕ್ಕಂಥಾದ್ದು, ಈ ಸಂತೋಷಕ್ಕೋಸ್ಕರ ನಾನು ಅವರಿಗೆ ಅಭಿನಂದನೆ ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಸ್ವಲ್ಪ ವಿವರವಾಗಿ ಹೇಳಿಬಿಡಿ.

ಶ್ರೀ ಬಿ. ರಾಚಯ್ಯ.—ಇವರಲ್ಲಿ ಕುಟುಂಬ ಯೋಜನೆ, ಮಲೇರಿಯಾ ಮತ್ತು ಕ್ಯಾನ್ಸರ್ ಬಾರದಂತೆ ಮಾಡಲು ಈ ಮೂರು ರೋಗಕ್ಕೂ ಒಂದೇ ಲಸಿಕೆಯನ್ನು ತಯಾರು ಮಾಡಿರತಕ್ಕವರು ಕರ್ನಾಟಕದವರು. ಇದಕ್ಕೆ ಬೇರೆ ದೇಶದವರು ಪ್ರಶಂಸೆ ಮಾಡಿದ್ದಾರೆ ಎಂದು ಹೇಳಿದೆ. ಇನ್ನು ಮೆಡಿಕಲ್ ಎಜ್ಯುಕೇಶನ್ ವಿಷಯದಲ್ಲಿ ಶ್ರೀ ಪಟಮಕ್ಕಿ ರತ್ನಾಕರ್ ಅವರು ಮಾತನಾಡಿದ್ದಾರೆ. ಈ ಮೆಡಿಕಲ್ ಎಜ್ಯುಕೇಶನ್‌ನಲ್ಲಿ ೧೪ ಪ್ರೈವೇಟ್ ಕಾಲೇಜುಗಳು ಮತ್ತು ೪ ಸರ್ಕಾರಿ ಕಾಲೇಜುಗಳಿವೆ. ಇದರಲ್ಲಿ ಒಂಭತ್ತಕ್ಕೆ ಇನ್ನೂ ಎಂ. ಸಿ. ಐ. ಯಿಂದ ಮಾನ್ಯತೆ ಸಿಕ್ಕಿಲ್ಲ. ಇವುಗಳಲ್ಲಿ ಸೆಂಟ್ ಜೋನ್ಸ್ ಮೆಡಿಕಲ್ ಕಾಲೇಜು, ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಮತ್ತು ಮಣಿಪಾಲಿನ ಎಂ. ಎಂ. ಸಿ. ಮೆಡಿಕಲ್ ಕಾಲೇಜುಗಳು ತಮ್ಮ ಆಸ್ಪತ್ರೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಉಳಿದಿರತಕ್ಕಂಥವರು ಇದನ್ನು ಕಟ್ಟಿಸಿಕೊಂಡಿಲ್ಲ. ಎಂ. ಸಿ. ಐ. ಯವರು ಬಂದು ವಿಸಿಟ್ ಮಾಡಿದ್ದಾರೆ.

ನಮ್ಮ ಯೂನಿವರ್ಸಿಟಿ ಅಫಿಲಿಯೇಶನ್ ಕಮಿಟಿಯವರು ವಿಸಿಟ್ ಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ನಮ್ಮ ಸ್ಟ್ಯಾಂಡರ್ಡ್ ಇನ್ ಮೆಡಿಕಲ್ ಕಾಲೇಜ್‌ಸ್ ಏನಿದೆ, ಅದನ್ನು ಸಾಕಷ್ಟು ಅಪ್‌ಗ್ರೇಡ್ ಮಾಡುವುದಕ್ಕೆ ಮೇಯಿಂಟೇನ್ ಮಾಡುವುದಕ್ಕೆ ಯಾವರೀತಿ ಮಿನಿಮಮ್ ಸ್ಟ್ಯಾಂಡರ್ಡ್ ಇರಬೇಕೆಂದು ಗೊತ್ತುಮಾಡಿದ್ದಾರೆ ಅದನ್ನು ಕಟ್ಟುನಿಟ್ಟಾಗಿ ಮಾಡಬೇಕೆಂದು ಈ ವರ್ಷ ಪ್ರಯತ್ನ ಮಾಡಿದ್ದೇವೆ. ಅವಕ್ಕೋಸ್ಕರ ಈ ಸೀಟುಗಳನ್ನು ಯೂನಿವರ್ಸಿಟಿಯವರೇ ನಿಗದಿ ಮಾಡಬೇಕೆಂದು ಹೇಳಿದ್ದೇವೆ. ಕಳೆದ ವರ್ಷ ಅದರ ಹಿಂದಿನ ವರ್ಷ ಏನು ಸೀಟ್‌ಗಳನ್ನು ನಿಗದಿ ಮಾಡಿದ್ದೆವು ಅದಕ್ಕಿಂತ ಹೆಚ್ಚು ಅವರು ಮಾಡಿಕೊಂಡರು. ೧೯೮೬-೮೭ ರಲ್ಲಿ ೨೩೮ ಹೆಚ್ಚುವರಿ ಸೀಟುಗಳನ್ನು ತೆಗೆದುಕೊಂಡಿದ್ದಾರೆ. ಮತ್ತೆ ಅದೇರೀತಿಯಲ್ಲಿ ೧೪೫ ಹೆಚ್ಚುವರಿ ಸೀಟ್‌ಗಳನ್ನು ತೆಗೆದುಕೊಂಡರು. ಇದಕ್ಕೆ ಕಾರಣಗಳನ್ನು ಹೇಳುತ್ತೇನೆ. ಪ್ರೈವೇಟ್ ಕಾಲೇಜುಗಳವರು ಏನಿದ್ದಾರೆ ಇವರು ತಮ್ಮದೇ ಆದಂಥ ಆಸ್ಪತ್ರೆ ಸೌಲಭ್ಯಗಳನ್ನು ಮಾಡಿಕೊಂಡಿದ್ದಾರೆ. ಅದರಲ್ಲಿ ಕೆಲವರು ೪೫೦ ಹಾಸಿಗೆಗಳನ್ನು ಮಾಡಿಕೊಂಡಿರತಕ್ಕ ಆಸ್ಪತ್ರೆಗಳೂ ಇವೆ, ಕೆಲವು ಮುನ್ನೂರು ಹಾಸಿಗೆಗಳನ್ನು ಮಾಡಿಕೊಂಡಿದ್ದಾರೆ, ಇನ್ನು ಕೆಲವರು ಇನ್ನೂರು ಮಾಡಿಕೊಂಡಿದ್ದಾರೆ. ಒಬ್ಬ ವಿದ್ಯಾರ್ಥಿಗೆ ೭ ಬೆಡ್‌ಗಳು ಇರಬೇಕೆಂದು ನಿಯಮ ಮಾಡಿಕೊಂಡಿರುವುದಕ್ಕೆ ಅನುಗುಣವಾಗಿ ಈ ಸೀಟುಗಳು ಇರಬೇಕೆಂದೂ ಆ ಪ್ರಕಾರ ಲೆಕ್ಕ ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ಸರ್ಕಾರ ಇದರ ಮೇಲೆ ಈ ರೀತಿಯಾಗಿ ಅಡ್ಮಿಷನ್ ಕೊಡಬಹುದೆಂದು ಒಪ್ಪಿದೆ. ಆದ್ದರಿಂದ ಇನ್ನು ಮುಂದೆ ಈ ರೀತಿಯಾಗಿ ವಿಶ್ವವಿದ್ಯಾನಿಲಯಗಳು ಈ ಅಡ್ಮಿಷನ್ ಎಷ್ಟಿರಬೇಕೆಂದು ನಿಗದಿ ಮಾಡಿ......

ಶ್ರೀ ಕೆ. ಬಿ. ಶಾಣಪ್ಪ.—ಕ್ಯಾಪಿಟೇಷನ್ ಫೀ ಯಾವರೀತಿಯಾಗಿ ನಿಲ್ಲಿಸುತ್ತೀರಿ ಎಂಬುದನ್ನೂ ಹೇಳಬೇಕು. You have not said anything about capitation fee.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಈಗ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಂಡಿದ್ದಕ್ಕೆ ಪರ್ಮಿಷನ್ ಕೊಟ್ಟಿದ್ದೀರಾ? ಇದಕ್ಕೆ ಕಾರಣ ಏನು? ಇದರ ಉದ್ದೇಶ ಏನು? ಅವರು ಮೊದಲೇ ಏಕೆ ನಿಮ್ಮನ್ನು ಕೇಳುವುದಿಲ್ಲ......

ಶ್ರೀ ಬಿ. ರಾಚಯ್ಯ.—ಇದಕ್ಕೆಲ್ಲಾ ಉತ್ತರ ಹೇಳುತ್ತೇನೆ. ೧೯೮೬-೮೭ರಲ್ಲಿ ೨೩೮ ಸೀಟುಗಳನ್ನು ಹೆಚ್ಚು ಕೊಟ್ಟಿದ್ದೇವೆ. ಇದಕ್ಕೆ ಕಾರಣ ಏನು ಎಂದರೆ, ಕೆಲವು ಸೀಟುಗಳನ್ನು ನಾವು ಇನ್‌ಸಿಸ್ಟ್ ಮಾಡಬೇಕಾಗಿ ಬಂತು. ರಿಸರ್ವೇಷನ್ ಇರಲಿಲ್ಲ, ಕೆಲವುಕಡೆ ಎಸ್‌ಸಿ ಎಸ್‌ಟಿ ಮತ್ತು ಬಿಸಿ ಗುಂಪಿನವರು ಬರುತ್ತಾ ಇರಲಿಲ್ಲ. ಈ ರೀತಿಯಾಗಿ ಕೊಡಬೇಕೆಂದು ಹೇಳಿದಾಗ, ಹೆಚ್ಚುವರಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ೧೯೮೭-೮೮ರಲ್ಲಿ ಇದನ್ನು ೧೩೫ಕ್ಕೆ ಇಳಿಸಿದೆ. ಹೆಚ್ಚುವರಿ ಸೀಟುಗಳನ್ನು ಅವರು ಆಸ್ಪತ್ರೆಗಳನ್ನು ಕಟ್ಟಿಕೊಂಡಿರುವುದರಿಂದ ಕೊಡಬೇಕಾಯಿತು. ರಾಜ್ಯಾಂಗಬದ್ಧವಾಗಿ ಕೊಡಬೇಕಾಗಿ ಬಂತು, ಈ ದೃಷ್ಟಿಯಿಂದ ಈ ರೀತಿಯಾಗಿ ಇನ್ನು ಮುಂದೆ ಮಾಡಕೂಡದೆಂದು ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಮತ್ತೆ ಅವರಿಗೆ ಇನ್‌ಟೇಕ್ ಫಿಕ್ಸ್ ಮಾಡತಕ್ಕಂಥ ಸಂದರ್ಭದಲ್ಲಿ ನೀವು ಯೂನಿವರ್ಸಿಟಿಯಿಂದ ಫಿಕ್ಸ್ ಮಾಡಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಮುಂದೆ ಈ ರೀತಿ ಆಗುವುದಕ್ಕೆ ಅವಕಾಶ ಆಗುವುದಿಲ್ಲವೆಂದು ತಿಳಿಸಿದ್ದೇವೆ ಡಾಕ್ಟರ್ ನಂಜುಂಡಪ್ಪ ಕಮಿಟಿ ರಿಪೋರ್ಟ್ ಬಂದಮೇಲೆ, ಪ್ರೈವೇಟ್ ಕಾಲೇಜುಗಳಿಗೆ ಎರವಲಾಗಿ ಕೊಟ್ಟ ಪ್ರೊಫೆಸರ್ಸ್, ಟೀಚರ್ಸ್ ಇವರನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ ಎರಡು ಕಾಲೇಜುಗಳನ್ನು ಬಿಟ್ಟು ಮಿಕ್ಕ ಎಲ್ಲಾ ಕಾಲೇಜ್‌ಗಳಲ್ಲಿ ಇದ್ದ ಅಧ್ಯಾಪಕರನ್ನು ನಾವು ವಾಪಸ್ ತೆಗೆದುಕೊಂಡಿದ್ದೇವೆ. ಆದಿಚುಂಚನಗಿರಿ ಮತ್ತು ಎಸ್. ಆರ್. ಎನ್. ಆಸ್ಪತ್ರೆ, ದೇವರಾಜ ಅರಸು ಕಾಲೇಜು—ಈ ಕಾಲೇಜುಗಳು ಹೊಸದಾಗಿ ಪ್ರಾರಂಭ ಮಾಡಿರುವುದರಿಂದ, ಬೆರಯುವರಿಗೆ ಕೊಟ್ಟ ಹಾಗೆ ಸಮಾಗೂ ಕೊಡಬೇಕೆಂದು ಅವರು ಕೇಳಿದ್ದಾರೆ. ಕ್ರಮೇಣ ಇವರೂ ತಮ್ಮ ಅಧ್ಯಾಪಕರನ್ನು ನೇಮಿಸಿಕೊಂಡ ಮೇಲೆ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಇನ್ನು ಕಮಿಟಿಯವರು ಸರ್ಕಾರಿ ಕಾಲೇಜುಗಳಲ್ಲಿ ಎಷ್ಟು ಸಿಬ್ಬಂದಿ ಇರಬೇಕು, ಯಾವ ರೀತಿಯಾಗಿ ಎಕ್ವಿಪ್‌ಮೆಂಟ್ ಇರಬೇಕು, ಎನ್ನತಕ್ಕಂಥ ಎಲ್ಲಾ ವಿಷಯಗಳ ಬಗ್ಗೆ ಒಂದು ಸ್ಟ್ಯಾಂಡರ್ಡ್ ಫಿಕ್ಸ್ ಮಾಡಿದರು. ಅದರಂತೆ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ ಯಾವ ರೀತಿ ಉಪಕರಣಗಳನ್ನು ಒದಗಿಸಬೇಕು, ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ ಯಾವರೀತಿ ಮಾಡಬೇಕು, ಬಳ್ಳಾರಿ ಕಾಲೇಜಿಗೆ ಯಾವ ರೀತಿ ಮಾಡಬೇಕೆಂಬುದನ್ನು ಚಿಂತನೆ ಮಾಡಿದ್ದೇವೆ. ಅದಕ್ಕೋಸ್ಕರ ಹೊಸದಾಗಿ sophisticated ಉಪಕರಣಗಳನ್ನು ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಎಂ. ರಾಮಪ್ಪ.—ನೀವು ನೇಮಕಾತಿ ಮಾಡುವಾಗ, ಕಣ್ಣಿನ ಡಾಕ್ಟರ್ ಪೋಸ್ಟ್ ಇರುವ ಕಡೆ ಚರ್ಮದ ಡಾಕ್ಟರನ್ನು ಹಾಕುತ್ತೀರಿ, ಚರ್ಮದ ಡಾಕ್ಟರು ಇರುವ ಜಾಗಕ್ಕೆ ಕಣ್ಣಿನ ಡಾಕ್ಟರನ್ನು ಪೋಸ್ಟ್ ಮಾಡುತ್ತೀರಿ. ಇಂತಹ ಪೋಸ್ಟ್‌ಗಳು ಎಷ್ಟಿದೆ ಎಂದು ನಿಮ್ಮಲ್ಲಿ ಮಾಹಿತಿ ಇದೆಯೋ ನೋಡಿ ಹೇಳಿ. ಈ ರೀತಿ ಬಹಳ ಮಂದಿ ಇದ್ದಾರೆ. ಇಂತಹದನ್ನು ಏತಕ್ಕೆ ಪೋಸ್ಟ್ ಮಾಡುತ್ತೀರಿ ? ಯಾರೋ ಒಬ್ಬರಿಗೆ ಪ್ರೀತಿ ಮಾಡುವುದಕ್ಕೆ ಈ ರೀತಿ ವ್ಯವಹಾರ ಮಾಡಿಕೊಂಡು ಹೋದರೆ ನಿಮ್ಮ ಪ್ರೊಫೆಸರ್ಸ್ ಎಲ್ಲಿರುತ್ತಾರೆ ? ನಿಮಗೆ ಹಾಗೂ ನಮಗೆ ಇಬ್ಬರಿಗೂ ವಯಸ್ಸಾಗಿದೆ. ನನಗೂ ೬೦ ವರ್ಷ ಆಯಿತು, ನಾವು, ನೀವು ಮಾಡುವುದು ಇದೇ ಕೆಲಸ. ಅಲ್ಲಿದು ಇಲ್ಲಿಗೆ, ಇಲ್ಲಿದು ಅಲ್ಲಿಗೆ.

ಶ್ರೀ ಬಿ. ರಾಚಯ್ಯ.—ಅವರಿಗೆ ಅರವತ್ತು ವರ್ಷವಾಗಿದೆ ಎನುತ್ತಾರೆ. ಆದರೆ ಇನ್ನೂ ನಲವತ್ತು ವರ್ಷದ ಯುವಕರ ಹಾಗೆ ಎದ್ದು ನಿಂತು ಮಾತನಾಡುತ್ತಿದ್ದಾರೆ.

ಸ್ವಾಮಿ, ಟೀಚರ್ಸ್, ಪ್ರೊಫೆಸರ್ಸ್, ಅಸಿಸ್ಟೆಂಟ್ ಪ್ರೊಫೆಸರ್ಸ್, ಲೆಕ್ಚರರ್ಸ್ ಹುದ್ದೆಗಳು ಎಷ್ಟು ಖಾಲಿ ಇದೆ, ಎಷ್ಟು ಭರ್ತಿ ಮಾಡಲಾಗಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಸ್ವಲ್ಪ ಹೊತ್ತಾದ ಮೇಲೆ ವಿವರಗಳನ್ನು ಕೊಡುತ್ತೇನೆ. ಸಪ್ಲೈ ಆಫ್ ಸೊಫಿಸ್ಟಿಕೇಟೆಡ್ ಎಕ್ವಿಪ್‌ಮೆಂಟ್ಸ್ ಬಗ್ಗೆ ಹೇಳಿರುತ್ತಾರೆ. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು, ಕೆ. ಆರ್. ಆಸ್ಪತ್ರೆ, ಮೈಸೂರು ಮತ್ತು ಕೆ.ಎಂ.ಸಿ. ಆಸ್ಪತ್ರೆ ಹುಬ್ಬಳ್ಳಿ, ಈ ಮೂರು ಈ ಮೂರು ಕಡೆಗೂ ಕೂಡಾ ಇದನ್ನು ಕೊಡುವುದಕ್ಕೆ ಈ ವರ್ಷ ಪ್ರಾವಿಜನ್ ಮಾಡಿಕೊಂಡಿದ್ದೇವೆ. ವಿಕ್ಟೋರಿಯಾ ಹಾಸ್ಪಿಟಲ್, ಕೆ.ಆರ್. ಹಾಸ್ಪಿಟಲ್, ಬೌರಿಂಗ್ ಹಾಸ್ಪಿಟಲ್, ಕೆ ಎಂ.ಸಿ. ಹಾಸ್ಪಿಟಲ್‌ಗಳಲ್ಲಿ, Endoscopy system with Video ಇರತಕ್ಕಂಥಾದ್ದು, ಅಲ್ಲಿಗೆ ಇದನ್ನು ಕೊಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ೧೯ ಪೋರ್ಟಬಲ್ ಎಲೆಕ್ಟ್ರಿಕ್ ಫ್ರಿಕ್ಷನ್ ಯೂನಿಟ್ ಏನಿದೆ ಅದನ್ನು ಕೊಂಡುಕೊಳ್ಳುವುದಕ್ಕೆ ಪ್ರಾವಿಜನ್ ಮಾಡಿದ್ದೇವೆ. ಆಪರೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಕರೆಂಟ್ ಹೋಗುತ್ತದೆ ಎಂದು ಹೇಳಿ, ೧೦ ಕಿಲೋವಾಟ್‌ನ ಹತ್ತು ಜನರೇಟರ್ಸ್‌ನ್ನು ಈ ವರ್ಷ ಸಪ್ಲೈ ಮಾಡುವುದಕ್ಕೆ ಏರ್ಪಾಡು ಮಾಡಿಕೊಂಡಿದ್ದೇವೆ. In addition to Cancer Equipment, which is already working one Opthalmic Ultrasound and one Refractionist will be Supplied to Minto Hospital. ಈ ವರ್ಷ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಮತ್ತು ಆಸ್ಪತ್ರೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಎಕ್ವಿಪ್ ಮಾಡಿಕೊಳ್ಳುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಆಸ್ಪತ್ರೆಗಳಲ್ಲಿ ಎಷ್ಟು ಜನ ವೈದ್ಯರಿದ್ದಾರೆ, ಎಷ್ಟು ಜನ ಪ್ರಾಧ್ಯಾಪಕರಿದ್ದಾರೆ ಎಂದು ಮಾನ್ಯ ಸದಸ್ಯರಾದ ಬೆಲ್ಲದ್‌ರವರಿಗೆ ಹೇಳುವುದಾದರೆ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹುಬ್ಬಳ್ಳಿ ಇಲ್ಲಿಗೆ ಮಂಜೂರಾಗಿರುವ ಪ್ರಾಧ್ಯಾಪಕರ ಹುದ್ದೆ ೪೯, ಭರ್ತಿ ಆಗಿರುವುದು ೩೪, ಖಾಲಿ ಇರುವುದು ೧೫, ಸಹಾಯಕ ಪ್ರಾಧ್ಯಾಪಕರ ಹುದ್ದೆ ಮಂಜೂರಾಗಿರುವುದು ೫೬, ಇದರಲ್ಲಿ ೨೯ ಜನ ಕೆಲಸ ಮಾಡುತ್ತಿದ್ದಾರೆ. ಹಾಗೂ ೨೭ ಹುದ್ದೆಗಳು ಖಾಲಿ ಇದೆ. ಉಪನ್ಯಾಸಕರ ಹುದ್ದೆ ಸ್ಯಾಂಕ್ಷನ್ ಆಗಿರತಕ್ಕಂಥಾದ್ದು ೧೦೨, ೪೯ ಜನ ಕೆಲಸ ಮಾಡುತ್ತಿದ್ದಾರೆ, ೪೧ ಹುದ್ದೆಗಳು ಖಾಲಿ ಇದೆ. ಈಗ ಕೇಡರ್ ಚೇಂಜ್ ಮಾಡಿ ಸುಮಾರು ೭೪ ಜನಕ್ಕೆ ಕೊಟ್ಟಿದ್ದೇವೆ. ಕಳೆದ ನಾಲ್ಕು ವರ್ಷದಿಂದ ಡೈರೆಕ್ಟ್ ಆಗಿ ಲೆಕ್ಚರರ್ಸ್‌ನ್ನು ಅಪಾಯಿಂಟ್ ಮಾಡಿಕೊಂಡಿಲ್ಲ. 50% of the Assistant Professors could not be appointed. ಅವರನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಸುಪ್ರೀಂ ಕೋರ್ಟ್ ಸ್ಟೇ ಆರ್ಡರ್ ಕೊಟ್ಟಿರುವುದರಿಂದ ನಾಲ್ಕು ವರ್ಷದಲ್ಲಿ ಡೈರೆಕ್ಟ್ ಆಗಿ ರಿಕ್ರೂಟ್‌ಮೆಂಟ್ ಆಗಿಲ್ಲ. ಲೆಕ್ಚರರ್ಸ್ ಅಸಿಸ್ಟೆಂಟ್ ಪ್ರೊಫೆಸರ್ಸ್ ಡೈರೆಕ್ಟ್ ಆಗಿ ರಿಕ್ರೂಟ್ ಆಗಿರುವುದರಿಂದ ಈ ವೇಕೆನ್ಸಿಗಳು ಉಳಿದುಕೊಳ್ಳುವುದಕ್ಕೆ ಅವಕಾಶವಾಯಿತು. ಇನ್ನು ೫೦ ಪರ್ಸೆಂಟ್‌ನ್ನು ನಾವೇ ನೇರವಾಗಿ ಭರ್ತಿ ಮಾಡಬೇಕಾಗಿತ್ತು. ಅಸಿಸ್ಟೆಂಟ್ ಸರ್ಜನ್ಸ್ ಯಾರು ಪೋಸ್ಟ್ ಗ್ರ್ಯಾಜುಯೇಷನ್ ಓದಿದ್ದಾರೆ, ಎಂ. ಎಸ್, ಎಂ. ಡಿ. ಪೀಡಿಯಾಟ್ರಿಕ್ಸ್, ಗೈನೆಕಾಲಜಿ ಈ ರೀತಿ ಬೇರೆ ಬೇರೆ ಸಬ್ಜೆಕ್ಟ್‌ಗಳಲ್ಲಿ ಯಾರು ಪೋಸ್ಟ್‌ಗ್ರ್ಯಾಜುಯೇಷನ್ ಮಾಡಿಕೊಂಡಿದ್ದಾರೆ, ಯಾರು ಟೀಚಿಂಗ್ ಕೇಡರ್‌ಗೆ ಬರಬೇಕೆಂದು ಇದ್ದಾರೆ ಅವರಿಗೆ ಈ ವರ್ಷ ೭೪ ಜನಕ್ಕೆ ಕೇಡರ್ ಚೇಂಜ್ ಮಾಡಿ ಕೊಟ್ಟಿದ್ದೇವೆ. ಹುಬ್ಬಳ್ಳಿ ಮತ್ತು ಬಳ್ಳಾರಿ ಕಾಲೇಜುಗಳಲ್ಲಿ ಐದು ವರ್ಷ ಕಡ್ಡಾಯವಾಗಿ ಸೇವೆ ಮಾಡಬೇಕೆಂಬ ಕಂಡೀಷನ್ ಮೇಲೆ ಚೇಂಜ್ ಕೊಟ್ಟಿದ್ದೇವೆ. ಅದರಲ್ಲಿ ಕೆಲವರು ಒಪ್ಪಿಕೊಂಡರು. ಇನ್ನು ಕೆಲವರು ಒಪ್ಪಿಕೊಂಡರೆ ಹೋಗಬೇಕಾಗುತ್ತದೆ ಎಂದು ಒಪ್ಪಿಕೊಳ್ಳಲಿಲ್ಲ. ಅವರಿಗೆ ಕೇಡರ್ ಚೇಂಜ್ ಕೊಟ್ಟಿದ್ದನ್ನು ಕ್ಯಾನ್ಸಲ್ ಮಾಡಿರುತ್ತೇವೆ. ಹೀಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಂಡು, ಅಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡುವ ಸಲುವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆಮೇಲೆ ಯಾರ್ಯಾರು ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೋ ಅಂದರೆ ಡೆಪ್ಯುಟೇಷನ್ ಮೇಲೆ ಹೋಗಿರುವವರನ್ನು ನಾವು ವಾಪಸ್ ಕರೆಯಿಸಿಕೊಂಡು ಅವರನ್ನು ಸಹ ತೈನಾತಿಸಲಾಗುವುದು, ಅವರನ್ನು ತೈನಾತಿಸಿದ ಜಾಗಗಳಿಗೆ ಅವರು ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕಾಗುತ್ತದೆ. ಆಮೇಲೆ ಬಳ್ಳಾರಿಯಲ್ಲಿ ಪ್ರಾಧ್ಯಾಪಕರ ೪೩ ಹುದ್ದೆಗಳು ಇದ್ದು ಅಲ್ಲಿ ಸುಮಾರು ೨೫ ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಸುಮಾರು ೧೯ ಹುದ್ದೆಗಳು ಖಾಲಿ ಇವೆ. ಇನ್ನು ಉಪನ್ಯಾಸಕರ ಹುದ್ದೆಗಳು ಅಲ್ಲಿ ಸುಮಾರು ೮೫ ಇದ್ದು ಕೆಲಸ ಮಾಡುತ್ತಿರುವವರು ಸುಮಾರು ೪೬ ಜನ ಮಾತ್ರ. ಇನ್ನು ಅಲ್ಲಿ ಸುಮಾರು ೪೮ ಹುದ್ದೆಗಳು ಖಾಲಿ ಇವೆ. ನನಗನಿಸಿದ ಮಟ್ಟಿಗೆ ಅಲ್ಲಿ ೪೦ ಹುದ್ದೆಗಳು ಮಾತ್ರ ಖಾಲಿ ಇವೆ. ಇನ್ನು ಬೆಂಗಳೂರು......

ಶ್ರೀ ಎಂ. ರಾಮಪ್ಪ.—ಸ್ವಾಮಿ ಉಳಿದವರು ಎಷ್ಟು ದಿವಸಗಳಲ್ಲಿ ಅಲ್ಲಿಗೆ ಕೆಲಸಕ್ಕೆ ಬರುತ್ತಾರೆ ?

ಶ್ರೀ ಬಿ. ರಾಚಯ್ಯ.—ಅವರು ಜಾಯಿನ್ ಆಗುವುದಕ್ಕೆ ಎಷ್ಟು ದಿವಸ ಕೊಟ್ಟಿದ್ದೇವೆಯೋ ಅಷ್ಟರಲ್ಲಿ ಬಂದು ಡ್ಯೂಟಿ ಜಾಯಿನ್ ಆಗಬೇಕು. ಆಮೇಲೆ ಬಂದರೆ ಅವರಿಗೆ ಲೀವ್ ಕೊಡುವುದಿಲ್ಲ.

ಶ್ರೀ ಎಂ. ರಾಮಪ್ಪ.—ಅವರ ಪೋಸ್ಟಿಂಗ್ಸ್ ಆರ್ಡರ್ ಕ್ಯಾನ್ಸಲ್ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಲ್ಲ ಮಾಡುವುದಿಲ್ಲ.

ಶ್ರೀ ಎಂ. ರಾಮಪ್ಪ.—ಬೇರೆಯವರು ಮಾಡಿದರೆ ?

ಶ್ರೀ ಬಿ. ರಾಚಯ್ಯ.—ಅವರು ಮಾಡಿದರೂ ನಾನು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಎಂ. ರಾಮಪ್ಪ.—ಅದು ನನಗೆ ಬೇಕಾಗಿತ್ತು

ಶ್ರೀ ಬಿ. ರಾಚಯ್ಯ.—ಇನ್ನು ಬೆಂಗಳೂರು ಮಹಾವಿದ್ಯಾಲಯದಲ್ಲಿ ಸುಮಾರು ೮೬ ಪ್ರಾಧ್ಯಾಪಕರ ಹುದ್ದೆಗಳು ಇದ್ದು ಅಲ್ಲಿ ಸುಮಾರು ೮೪ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಮಂಜೂರಾತಿಗಿಂತ ೮ ಮಂದಿ ಅಧಿಕವಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಸುಮಾರು ೯೫ ಅಸಿಸ್ಟೆಂಟ್ ಪ್ರೊಫೆಸರ್ಸ್ ಹುದ್ದೆಗಳು ಇದ್ದು ಸುಮಾರು ೬೫ ಜನ ಕೆಲಸ ಮಾಡುತ್ತಿದ್ದಾರೆ. ಮತ್ತು ಉಪನ್ಯಾಸಕರ ಹುದ್ದೆಗಳು ಸುಮಾರು ೧೫೮ ಇದ್ದು ಇಲ್ಲಿ ಸುಮಾರು ೯೮ ಜನ ಕೆಲಸ ಮಾಡುತ್ತಿದ್ದಾರೆ. ಇನ್ನು ಸುಮಾರು ೬೦ ಹುದ್ದೆಗಳು ಖಾಲಿ ಇವೆ. ಇಲ್ಲಿ ಲೀವ್‌ನಲ್ಲಿರುವವರನ್ನು ಸಹ ತೋರಿಸುತ್ತಿದ್ದಾರೆ. ಅಷ್ಟು ಹುದ್ದೆಗಳು ಖಾಲಿ ಇಲ್ಲವೆಂದು ನನಗನಿಸುತ್ತದೆ. ಆಮೇಲೆ ಮೈಸೂರು ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರ ಹುದ್ದೆಗಳು ಸುಮಾರು ೫೧ ಇದ್ದು ಅಲ್ಲಿ ಸುಮಾರು ೪೫ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯೂ ಸಹ ಸುಮಾರು ನಾಲ್ಕು ಜನ ಅಧಿಕ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಉಪನ್ಯಾಸಕರ ಹುದ್ದೆಗಳು ೧೧೭ ಇದ್ದು ಇದರಲ್ಲಿ ಸುಮಾರು ೪೫ ಜನರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಏನಾಗಿದೆ ಸುಮಾರು ಎಂದರೆ, ಕರ್ನಾಟಕ ಲೋಕಸೇವಾ ಆಯೋಗದವರು ಇತ್ತೀಚಿಗೆ ಈ ಉಪನ್ಯಾಸಕರ ಹುದ್ದೆಗಳ ನೇಮಕಾತಿ ಯನ್ನು ಮಾಡಿಲ್ಲ. ಇವರು ಈ ಹುದ್ದೆಗಳ ನೇಮಕಾತಿಯನ್ನು ಮಾಡಿ ಸುಮಾರು ೪ ವರ್ಷಗಳಾದವು. ಈ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡದೆ ಇರುವುದರಿಂದ ಅಸಿಸ್ಟೆಂಟ್ ಪ್ರೊಫೆಸರ್ಸ್ ಹುದ್ದೆಗಳಿಗೆ ಲೆಕ್ಚರರ್ಸ್ ಹುದ್ದೆಗಳಲ್ಲಿರುವವರು ಯಾರಾದರೂ ಅರ್ಹತೆಯನ್ನು ಪಡೆದುಕೊಂಡಿದ್ದರೆ ಮತ್ತು ಬಡ್ತಿಗೆ ಅರ್ಹತೆ ಇದ್ದರೆ ಅಂತಹವರನ್ನು ಕೂಡಾ ನಾವು ಪ್ರಮೋಟ್ ಮಾಡತಕ್ಕಂಥ ಕೆಲಸವನ್ನು ಶೀಘ್ರವಾಗಿ ಮಾಡುತ್ತಿದ್ದೇವೆ. ಮತ್ತೇ ಅಸಿಸ್ಟೆಂಟ್ ಪ್ರೊಫೆಸರ್ಸ್ ಹುದ್ದೆಗಳಿಂದ ಪ್ರೊಫೆಸರ್ ಹುದ್ದೆಗಳಿಗೆ ಸಹ ನಿಗದಿತ ವಿದ್ಯಾರ್ಹತೆ ಪಡೆದುಕೊಂಡಿದ್ದರೆ ಅವರನ್ನು ಸಹ ಪ್ರಮೋಟ್ ಮಾಡತಕ್ಕ ಕೆಲಸ ಮಾಡುತ್ತಿದ್ದೇವೆ. ಮೆಡಿಕಲ್ ಕಾಲೇಜುಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ನಾವು ನಿಗದಿತ ಪ್ರಮಾಣಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರಬಾರದೆಂದು ಸಾಕಷ್ಟು ರೀತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ರೀತಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಈ ಮೆಡಿಕಲ್ ಕಾಲೇಜುಗಳಿಗೆ ಬೇಕಾಗಿರತಕ್ಕ ಎಕ್ವಿಪ್‌ಮೆಂಟ್ಸ್ ಮತ್ತು ಇತರೇ ಸಾಮಗ್ರಿಗಳು ಏನಿವೆ ಇವುಗಳನ್ನು ಸಾಧ್ಯವಾದ ಮಟ್ಟಿಗೆ ಈ ವರ್ಷ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಜೊತೆಗೆ ಈ ವರ್ಷ ನಾವು ಅಟ್ಯಾಚ್ ಮಾಡಿರತಕ್ಕ ಮೆಡಿಕಲ್ ಕಾಲೇಜುಗಳಿಗೆ ಅವರಿಗೆ ಬೇಕಾದ ಎಕ್ವಿಪ್‌ಮೆಂಟ್ಸ್‌ನ್ನು ಸಹ ಕೊಡುತ್ತೇವೆ. ನಮಗೆ ಈ ವರ್ಷ ಬಹುಮಾನ ಬಂದಿರತಕ್ಕಂಥ ಒಂದು ಕೋಟಿ ರೂಪಾಯಿ ಹಣದಲ್ಲಿ ಅರ್ಧ ಭಾಗದ ಹಣವನ್ನು ಈ ಮೆಡಿಕಲ್ ಕಾಲೇಜುಗಳಿಗೆ ಬೇಕಾಗಿರತಕ್ಕಂಥ ಜನರೇಟರ್ಸ್ ಕೊಳ್ಳಲು ಮತ್ತು ಕುಡಿಯುವ ನೀರು ಒದಗಿಸಿಕೊಡಲು ವಿನಿಯೋಗಿಸಲಾಗುವುದು. ಈ ದೃಷ್ಟಿಯಲ್ಲಿ

೧೧. ೦೦ ಪಿ. ಎಂ.

ಆರೋಗ್ಯ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲಾಗುತ್ತಿದೆಯೆಂದು ಈ ಸಂಧರ್ಭದಲ್ಲಿ ಹೇಳುತ್ತೇನೆ. ಆಮೇಲೆ. ನರ್ಸಿಂಗ್ ಕಾಲೇಜುಗಳು, ನರ್ಸಿಂಗ್ ಸ್ಕೂಲುಗಳು, ಫಾರ್ಮಸಿ ಕಾಲೇಜುಗಳು ಹಾಗೂ ಸ್ಕೂಲುಗಳನ್ನು ಆದಷ್ಟು ಮಟ್ಟಿಗೆ ಹೊಸದಾಗಿ ಓಪನ್ ಮಾಡುವುದನ್ನು ತಡೆಗಟ್ಟಿದ್ದೇವೆ ಈ ರೀತಿ ಕಾಲೇಜುಗಳನ್ನು ಹೆಚ್ಚು ಮಾಡುವುದರಿಂದ ನಿರುದ್ಯೋಗಗಳು ಹೆಚ್ಚಾಗುತ್ತವೆ. ಇವತ್ತಿನ ದಿವಸಗಳಲ್ಲಿ ಡಾಕ್ಟರುಗಳಾಗಲೀ ನರ್ಸ್‌ಗಳಾಗಲೀ ನಿರುದ್ಯೋಗಿಗಳಾಗಿ ಇರುವುದಕ್ಕೆ ಅವಕಾಶ ಇಲ್ಲ. ಅವರುಗಳಿಗೆ ಯಾವುದಾದರೊಂದು ಕಡೆ ಉದ್ಯೋಗ ಸಿಗುತ್ತವೆ. ಹೊಸದಾಗಿ ೮೦೦ ಎ.ಎನ್.ಎಂ. ಗಳನ್ನು ನಮ್ಮ ಸರ್ಕಾರ ನೇಮಿಸಿದೆ. ಈ ದೃಷ್ಟಿಯಲ್ಲಿ ಹೇಳುವುದಾದರೆ, ಈ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿ ಬಿದ್ದಿದ್ದುವು. ನಮ್ಮ ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ಒಟ್ಟು ೨೩೪ ಜನ ಡಾಕ್ಟರುಗಳ ಜಾಗ ಖಾಲಿ ಇವೆ. ಅವುಗಳಲ್ಲಿ ಈ ವರ್ಷ ೧೫೦ ಜಾಗಗಳಿಗೆ ಡಾಕ್ಟರುಗಳನ್ನು ನೇಮಕ ಮಾಡುತ್ತೇವೆ. ಈ ತಿಂಗಳು ಅವರುಗಳನ್ನು ನೇಮಕ ಮಾಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆ ಮೇಲೆ ಆಸ್ಪತ್ರೆಗಳಿಗೆ ಬೇಕಾಗಿರತಕ್ಕ ಕಟ್ಟಡಗಳು, ಆಸ್ಪತ್ರೆಗೆ ಬೇಕಾಗಿರತಕ್ಕಂಥ ಸಿಬ್ಬಂದಿ ವರ್ಗ ಆಸ್ಪತ್ರೆಗಳಿಗೆ ಬೇಕಾಗಿರತಕ್ಕ ಔಷಧಗಳು ಹಾಗೂ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಸರಿಪಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆಮೇಲೆ ಭಾರತೀಯ ವೈದ್ಯಕೀಯ ಪದ್ಧತಿ ಬಗ್ಗೆ ಮಾತ್ರ ಮಾನ್ಯ ಸದಸ್ಯರು ಒಬ್ಬರು ಮಾತನಾಡಿದ್ದಾರೆ. ಭಾರತೀಯ ವೈದ್ಯ ಪದ್ಧತಿಯಲ್ಲಿ ಬರುವ ಆಯುರ್ವೇದ, ಯುನಾನಿ, ಹೋಮಿಯೋಪತಿಗಳಿಗೆ ಸರ್ಕಾರ ಹೆಚ್ಚು ಗಮನವನ್ನು ಕೊಟ್ಟು ಗಿಡ ಮೂಲಿಕೆಗಳನ್ನು ಹೆಚ್ಚು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಬೆಲ್ಲದ್‌ರವರು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿಗಳಿಗೆ ಬೇಕಾಗುವ ಎಲ್ಲಾ ಮೂಲಿಕೆಗಳನ್ನು ಬೆಳೆಸುವ ಕಡೆ ಸರ್ಕಾರ ಹೆಚ್ಚಿನ ಗಮನವನ್ನು ಕೊಡುತ್ತಿದೆ. ಗಿಡ ಮೂಲಿಕೆಗಳನ್ನು ಬೆಳೆಸುವುಧಕ್ಕೆ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗೆ ನಿರ್ದೇಶನವನ್ನು ಕೊಡಲಾಗಿದೆ. ಈ ಕಾರ್ಯಕ್ರಮದಲ್ಲಿ ಸರ್ಕಾರ ಹೆಚ್ಚಿನ ಸಾಧನೆಯನ್ನು ಮಾಡಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಯುರ್ವೇದ ಹೋಮಿಯೋಪತಿ. ಯೂನಾನಿ ರೀತಿಯ ವೈದ್ಯಕೀಯ ಸೌಲಭ್ಯಗಳಿಗೆ ಉತ್ತೇಜನ ಕೊಡುವುದಕ್ಕೋಸ್ಕರ, ಯಾರು ಈ ಮೇಲ್ಕಂಡ ವೈದ್ಯಕೀಯದಲ್ಲಿ ಪರಿಣಿತರಾಗಿದ್ದಾರೋ ಅವರುಗಳಿಗೆ ಮಾಸಿಕ ೨೫೦ ರೂಪಾಯಿಗಳನ್ನು ಮಾಸಾಶನವಾಗಿ ನೀಡಲಾಗುತ್ತಿದೆ. ಅದೂ ಅಲ್ಲದೆ ಆಯುರ್ವೇದ. ಹೋಮಿಯೋಪತಿ ಮತ್ತು ಯುನಾನಿ ವೈದ್ಯಕೀಯದಲ್ಲಿ ಹೆಚ್ಚು ಸಾಧನೆ ಮಾಡಿರುವ ೪ ಜನರಿಗೆ ತಲಾ ೨೦೦೦ ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟಿದ್ದೇವೆ. ಆಯುರ್ವೇದವನ್ನು ಉತ್ತೇಜಪಡಿಸುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಬರುವ ಎರಡು ಸಾವಿರದ ಇಸವಿಯೊಳಗೆ ಕೇವಲ ಅಲೋಪತಿ ಡಾಕ್ಟರುಗಳಿಂದ ಅಲ್ಲದೆ ಬೇರೆ ಬೇರೆ ಸಿದ್ಧಾಂತಗಳ ಮೇಲೆ ಇರುವ ವೈದ್ಯಕೀಯ ಪದ್ಧತಿಯಿಂದಲೂ ಎಲ್ಲಾ ಜನರಿಗೆ ಆರೋಗ್ಯವನ್ನು ಕೊಡಬೇಕೆನ್ನುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ನಮ್ಮ ಸಾಧನ ಆಮೆ ವೇಗದಿಂದ ಮಾತ್ರ ನಡೆಯುತ್ತಿಲ್ಲ. ಮೊಲದ ವೇಗದಲ್ಲೂ ನಡೆಯುತ್ತಿಲ್ಲ. ಎಷ್ಟು ವೇಗದಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ವೇಗದಲ್ಲಿ ಕೆಲಸವನ್ನು ಮಾಡಲಾಗುತ್ತಿದೆ. ವೈದ್ಯಕೀಯ ರಂಗದಲ್ಲಿ ರಾಷ್ಟ್ರೀಯ ಗುರಿ ಏನು ಇದೆಯೋ ಆ ಗುರಿಯನ್ನು ನಾವು ಸಾಧನೆ ಮಾಡುತ್ತಿದ್ದೇವೆ. ಒಂದೊಂದು ಸಾರಿ ಕೇಂದ್ರ ಸರ್ಕಾರವು ನಮಗೆ ಹೆಚ್ಚಿನ ಗುರಿಯನ್ನು ಗೊತ್ತು ಮಾಡುತ್ತದೆ. ಆದರೆ ವಾಸ್ತವಿಕ ಅಂಶವನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ತಯಾರು ಮಾಡಿ ಗುರಿಯನ್ನು ನಿಗದಿ ಮಾಡಬೇಕೆಂದು ಈಗಾಗಲೇ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಮೇಲೆ ಮಾನ್ಯ ವೀರಯ್ಯ ಸ್ವಾಮಿಯವರು ವೈದ್ಯಕೀಯ ಇಲಾಖೆಯ ಬಗ್ಗೆ ಎಸ್ಟಿಮೇಟ್ಸ್ ಕಮಿಟಿಯವರು ಮಾಡಿರುವ ಆರೋಪಗಳ ಬಗ್ಗೆ ಮಾತನಾಡಿದ್ದಾರೆ. ಹಾಸ್ಪಿಟಲ್‌ಗಳಿಗೆ ಕೊಡತಕ್ಕ ಬೆಡ್‌ಶೀಟುಗಳು, ರಗ್ಗುಗಳು ಹಾಗೂ ಮತ್ತಿತರ ವಸ್ತುಗಳನ್ನು ಕೊಂಡುಕೊಂಡಿರುವ ಬೆಲೆಗೂ ಮಾರ್ಕೆಟ್ ಬೆಲೆಗೂ ಬಹಳ ವ್ಯತ್ಯಾಸ ಇದೆಯೆಂದು, ಈ ಎಲ್ಲಾ ವಸ್ತುಗಳನ್ನು 'ಹಳೇಪಾಳ್ಯ'ದ ಒಂದು ಕಡೆಯೇ ಕೊಂಡು ಕೊಳ್ಳತಕ್ಕ ವ್ಯವಸ್ಥೆ ನಡೆದಿದೆ ಎಂದು ಹೇಳಿದ್ದಾರೆ. ಎಸ್ಟಿಮೇಟ್ ಕಮಿಟಿಯವರು ಆ ಬಗ್ಗೆ ರಿಪೋರ್ಟ್ ಕೊಟ್ಟ ತಕ್ಷಣ, ನಾನು ಆ ರಿಪೋರ್ಟ್‌ನ್ನು ಲೋಕಾಯುಕ್ತಕ್ಕೆ ಕಳುಹಿಸಿ ವಿಚಾರಣೆ ಮಾಡಬೇಕೆಂದು ತಿಳಿಸಿದ್ದೇನೆ. ಯಾರು ಇದರಲ್ಲಿ ತಪ್ಪು ಮಾಡಿದ್ದಾರೋ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಲೋಕಾಯುಕ್ತಕ್ಕೆ ಆ ರಿಪೋರ್ಟ್‌ನ್ನು ಕಳುಹಿಸಲಾಗಿದೆ. ಈ ಇಲಾಖೆಯಲ್ಲಿ ನೇಮಕಾತಿ ಮಾಡುವುದರಲ್ಲಾಗಲೀ, ಔಷಧಗಳನ್ನು ಕೊಂಡುಕೊಳ್ಳುವುದರಲ್ಲಾಗಲೀ ಮತ್ತಿತರ ವಸ್ತುಗಳನ್ನು ಖರೀದಿ ಮಾಡತಕ್ಕ ಸಂದರ್ಭದಲ್ಲಿ

ಎಲ್ಲವೂ ಸರಿಯಾಗಿದೆ ಯೆಂದು ನಾನು ಹೇಳುವುದಿಲ್ಲ. ನಾನು ಇದರ ಬಗ್ಗೆ ತೀಕ್ಷ್ಣವಾಗಿ ನೋಡುತ್ತಿದ್ದೇನೆ. ಯಾರು ಲೋಪದೋಷಗಳನ್ನು ಮಾಡಿದ್ದಾರೂ ಅವರ ಮೇಲೆ ಎಲ್ಲಾ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ದೃಷ್ಟಿಯಲ್ಲಿ ಅಕ್ರಮಕ್ಕೆ ಅವಕಾಶ ಮಾಡಿರತಕ್ಕ ಯಾರೇ ಅಧಿಕಾರಿ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮತ್ತೊಮ್ಮೆ ಹೇಳುತ್ತೇನೆ. ಇಂಥ ಅವ್ಯವಹಾರಕ್ಕೆ ಅವಕಾಶ ಮಾಡಿಕೊಟ್ಟಂಥ ಅಧಿಕಾರಿಯಾರೇ ಇರಲಿ, ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈಗಾಗಲೇ ಸಂಬಂಧ ಪಟ್ಟವರಿಗೆ ಆ ಪ್ರಕರಣವನ್ನು ಕಳುಹಿಸಿ ಕೊಟ್ಟಿದ್ದೇನೆ. ಇನ್ನು ಮಾನ್ಯಸದಸ್ಯರೊಬ್ಬರು ಮಾತನಾಡುತ್ತಾ, ನನ್ನ ಇಲಾಖೆಯ ಜವಾಬ್ದಾರಿಯನ್ನು ನಾನು ನಿರ್ವಹಿಸುತ್ತಿರುವಾಗ ಅನ್ಯರು ಕೈಹಾಕಿ ಅಡ್ಡಿ ಬರತಕ್ಕ ಸಂದರ್ಭಗಳಲ್ಲಿಯೂ ಕೂಡ ಸುಮ್ಮನೆ ಕುಳಿತಿದ್ದೀರಿ ಎಂದ ಹೇಳಿದ್ದಾರೆ. ಹಾಗೇನೂ ಇಲ್ಲ. ನಾನು ನನ್ನ ಇಲಾಖೆಯ ಕರ್ತವ್ಯವನ್ನು ಸೂಕ್ತವಾಗಿ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದೇನೆ. ಅದಕ್ಕೆ ಯಾರೂ ಅಡ್ಡಿಪಡಿಸ ಬೇಕಾದ ಪ್ರಮೇಯ ಬಂದಿಲ್ಲ. ಒಂದರೂ ಕೂಡ ಅಂಥ ಸಂದರ್ಭದಲ್ಲಿ ನಾನು ಈ ಸ್ಥಾನದಲ್ಲಿ ಇರುವುದಿಲ್ಲ ಎಂದು ಹೇಳಬಯಸುತ್ತೇನೆ. ನಾನು ನನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡುತ್ತಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲಾಖೆಯ ಕಾರ್ಯವನ್ನು ಚೆನ್ನಾಗಿ ಮಾಡಿತೋರಿಸಿ ಎಂದು ತಮಗೆ ಹೇಳಿದರೆ, ಯಾವಾಗ ಆ ಕೆಲಸವನ್ನು ನಿರ್ವಹಿಸುವುದಕ್ಕೆ ಆಗುವುದಿಲ್ಲವೋ ಆಗ ಬಿಟ್ಟು ಹೋಗುತ್ತೇನೆ ಎಂದು ಹೇಳಿದರೆ ಹೇಗೆ ? ನಾವು ನಿಮಗೆ ಒಳ್ಳೆಯ ಕೆಲಸವನ್ನು ಮಾಡಿತೋರಿಸಿ ಎಂದು ಹೇಳಿದ್ದೇವೆಯೇ ವಿನಹ ಬಿಟ್ಟು ಹೋಗಿ ಎಂದು ಕೇಳಲಿಲ್ಲ

ಶ್ರೀ ಬಿ. ರಾಚಯ್ಯ.—ಇಲಾಖೆಯ ಕೆಲಸವನ್ನು ಸೂಕ್ತ ರೀತಿಯಲ್ಲಿ ಮಾಡುವುದಕ್ಕೆ ಆಗದಿದ್ದ ಸಂದರ್ಭದಲ್ಲಿ ಆ ಸ್ಥಾನದಲ್ಲಿ ಇರುವುದಿಲ್ಲ ಎಂದು ಹೇಳುತ್ತಾ ಇದ್ದೇನೆ,

ಶ್ರೀ ಎಂ. ರಾಮಪ್ಪ.—ಮಾನ್ಯ ದೇವೇಗೌಡರು ನೀರಾವರಿಗೆ ಹಣ ಕೊಡದಿದ್ದುದಕ್ಕಾಗಿ ಬಿಟ್ಟು ಹೋಗುತ್ತಿದ್ದೇನೆ ಎಂದು ಹೇಳಿ ಬಿಟ್ಟು ಹೋದರು. ನೀವು ಯಾವ ಕಾರಣವನ್ನು ತೋರಿಸಲು ನೋಡುತ್ತಿದ್ದೀರಿ ?

ಶ್ರೀ ಬಿ. ರಾಚಯ್ಯ.—ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಐಪಿಪಿ ಪ್ರೋಗ್ರಾಂ ನಲ್ಲಿ ಏನು ಒಳ್ಳೆಯ ಕಾರ್ಯ ನಡೆಯುತ್ತಿತ್ತು, ಆ ಸಂದರ್ಭದಲ್ಲಿ ಆರು ಜಿಲ್ಲೆಗಳಲ್ಲಿ ಎಷ್ಟು ಕಟ್ಟಡಗಳು ಆಗ ಬೇಕಾಗಿತ್ತೋ ಅಷ್ಟು ಕಟ್ಟಡಗಳು ಆಗಿಲ್ಲ. ಆ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಕೆಲವಾರು ಕಾರಣಗಳೂ ಕೂಡ ಇವೆ. ಸಾಂಬದಲ್ಲಿ ಕೆಲವು ಕಡೆಗಳಲ್ಲಿ ಜಾಗಗಳು ಸರಿಯಾಗಿ ಸಿಗಲಿಲ್ಲ, ಜಾಗ ಸಿಕ್ಕ ಮೇಲೆ ಕೆಲಸವನ್ನು ತೆಗೆದುಕೊಂಡ ಕಂಟ್ರಾಕ್ಟರುಗಳು ಬೆಲೆ ಏರಿಕೆಯ ಕಾರಣ ಇಟ್ಟು ಕೆಲಸವನ್ನು ನಿಲ್ಲಿಸಿದರು. ಈಗ ಆ ಕೆಲಸಕಾರ್ಯಗಳನ್ನು ನಿರ್ವಹಿಸುವ ಇಲಾಖೆಯು ನನ್ನದಲ್ಲ, ಆ ಕೆಲಸವನ್ನು ಪಿಡಬ್ಲ್ಯುಡಿಯವರಿಗೆ ಕೊಟ್ಟಿದ್ದೇವೆ. ಅವರು ಮಾಡುತ್ತಾ ಇದ್ದಾರೆ. ಅವರಿಗೆ ಸ್ವಲ್ಪ ತಿಳುವಳಿಕೆ ಕೊಟ್ಟು ಆದಷ್ಟು ಜಾಗ್ರತೆ ಆ ಕೆಲಸವನ್ನು ಮಾಡಿಸಬೇಕಾಗಿದೆ. ಒಟ್ಟು ೨,೪೫೧ ಕಟ್ಟಡಗಳಲ್ಲಿ ೧,೫೭೧ ಕಟ್ಟಡಗಳ ಈಗಾಗಲೆ ಪೂರೈಸುವ ಹಂತದಲ್ಲಿ ಇವೆ. ಆ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಕೆಲಸ ಪ್ರಗತಿಯಲ್ಲಿದೆ, ಅದರ ವಿವರಗಳನ್ನು ನಾನು ತಮಗೆ ಕೊಡುತ್ತಿದ್ದೇವೆ. ಬೀದರ್, ಬೆಳಗಾಂ, ಧಾರವಾಡ, ಬಿಜಾಪುರ, ರಾಯಚೂರು, ಭಾಗಗಳಲ್ಲಿ ಈ ಕಟ್ಟಡಗಳ ಕೆಲಸವು ನಡೆಯುತ್ತಾ ಇದೆ. ಬೆಳಗಾಂ ಜಿಲ್ಲೆಯಲ್ಲಿ ೪೭೭ ಕಟ್ಟಡಗಳು ಮಂಜೂರು ಆಗಿದ್ದು ಅವುಗಳಲ್ಲಿ ೨೫೬ ಕಟ್ಟಡಗಳ ಕೆಲಸ ಪೂರೈಸುವ ಹಂತದಲ್ಲಿವೆ. ಬೀದರ್‌ನಲ್ಲಿ೨೪೭ಕಟ್ಟಡಗಳು ಮಂಜೂರಾಗಿ ಅವುಗಳಲ್ಲಿ ೧೯೬ ಕಟ್ಟಡಗಳ ಕೆಲಸವನ್ನು ಪೂರೈಸಲಾಗಿದೆ. ಬಿಜಾಪುರ ಜಿಲ್ಲೆಗೆ ೩೯೭ ಕಟ್ಟಡಗಳು ಮಂಜೂರಾಗಿದ್ದು, ಅವುಗಳಲ್ಲಿ ೨೨೫ ಕಟ್ಟಡಗಳ ಕೆಲಸ ಪೂರೈಸುವ ಹಂತದಲ್ಲಿವೆ. ಧಾರವಾಡದಲ್ಲಿ೫೨೩ ಕಟ್ಟಡಗಳು ಮಂಜೂರು ಆಗಿದ್ದು ಅವುಗಳ ಪೈಕಿ ೩೬೯ ಕಟ್ಟಡಗಳು ಕಟ್ಟಿ ಪೂರೈಸುವ ಹಂತದಲ್ಲಿವೆ. ಗುಲ್ಬರ್ಗಾದಲ್ಲಿ ೪೪೭ ಕಟ್ಟಡಗಳ ಪೈಕಿ ೨೩೮ ಕಟ್ಟಡಗಳು ಕಟ್ಟಿ ಪೂರೈಸುವ ಹಂತದಲ್ಲಿವೆ. ರಾಯಚೂರು ಜಿಲ್ಲೆಗೆ ಮಂಜೂರಾದ ೩೭೮ ಕಟ್ಟಡಗಳಲ್ಲಿ ೨೯೬ ಕಟ್ಟಡಗಳು ಪೂರೈಸುವ ಹಂತದಲ್ಲಿವೆ. ಉತ್ತರಕನ್ನಡ ಜಿಲ್ಲೆಯಲ್ಲಿ ಎರಡು ಕಡೆಗಳಲ್ಲಿ ಮಾತ್ರ ಎರಡು ಕಟ್ಟಡಗಳನ್ನು ಕಟ್ಟಿ ಪೂರೈಸಲಾಗಿದೆ ಆ ದೃಷ್ಟಿಯಲ್ಲಿ ನೋಡುವುದಾದರೆ, ನಾವು ಏನು ಗುರಿಯನ್ನು ಸಾಧಿಸ ಬೇಕಾಗಿತ್ತೊ ಅದು ಕೆಲವು ಕಾರಣಗಳಿಂದಾಗಿ ಆಗಲಿಲ್ಲ. ೧೯೮೮ರ ಒಳಗಾಗಿ ನಾವು ಆ ಗುರಿಯನ್ನು ಸಾಧಿಸ ಬೇಕಾಗಿತ್ತು. ಮುಖ್ಯವಾಗಿ ಕೆಲವು ಕಡೆಗಳಲ್ಲಿ ಸ್ಥಳ ಸಿಗಲಿಲ್ಲ. ಮತ್ತು ಟೆಂಡರ್ ಕರೆದಾಗ ಕಂಟ್ರಾಕ್ಟರ್ಸ್

ಮುಂದೆ ಬರಲಿಲ್ಲ. ಕೆಲವರು ಟೀಕ್ ವುಡ್ ಹಾಕುವ ಬದಲು ಬೇರೆಯ ಮರ ಉಪಯೋಗಿಸುತ್ತೇವೆ ಎಂದು ಅದಕ್ಕೆ ಅನುಮತಿಯನ್ನು ಕೇಳಿದ್ದಾರೆ. ಆ ಒಂದು ದೃಷ್ಟಿಯಲ್ಲಿ ಕೇಂದ್ರ ಸರಕಾರದವರು ಒಪ್ಪಿಕೊಂಡು ೧೯೭೮ನೇ ಇಸವಿಯ ಏಪ್ರಿಲ್ ತಿಂಗಳೊಳಗಾಗಿ ಮಾಡಿ ಪೂರೈಸಬೇಕೆಂದು ಒಪ್ಪಿಕೊಂಡಿದ್ದಾರೆ. ಈ ವಿಚಾರಗಳನ್ನು ಮಾನ್ಯ ವೀರಯ್ಯಸ್ವಾಮಿಯವರಿಗೆ ಹೇಳ ಬಯಸುತ್ತೇನೆ. ಕೆಲವರು ವೇಕೆನ್ಸೀಸ್ ಪೊಜಿಷನ್ ಹೇಳಿ ಅಂದರು. ಹೆಲ್ತ್ ಆಫೀಸರ್ಸ್ ಕಮ್ ಅಸಿಸ್ಟೆಂಟ್ ಸರ್ಜನ್ಸ್ ೩೫೦೮ ಮಂಜೂರಾಗಿದ್ದು ಅದರಲ್ಲಿ ೩೩೪೮ ಜನ ಕೆಲಸ ಮಾಡುತ್ತಿದ್ದು ೧೬೦ ಖಾಲಿ ಇವೆ. ಡೆಂಟಲ್ ಅಸಿಸ್ಟೆಂಟ್ ಸರ್ಜನ್ಸ್ ೧೦೨ ಹುದ್ದೆ ಇದ್ದು ೮೪ ಭರ್ತಿಯಾಗಿದ್ದು ೧೮ ಖಾಲಿ ಇವೆ. ಡೆಂಟಲ್ ಸರ್ಜನ್ಸ್ ಸೀನಿಯರ್ ಗ್ರೇಡ್ ೩ ಹುದ್ದೆ ಇದ್ದು ೨ ಭರ್ತಿಯಾಗಿದ್ದು ೧ ಖಾಲಿ ಇದೆ ಚೀಫ್ ಫಾರ್ಮಸಿಸ್ಟ್ಸ್ ೧೭-೧೨-೫, ಗ್ರಾಜುಯೇಟ್ ಫಾರ್ಮಸಿಸ್ಟ್ಸ್ ೩೯-೨೦-೧೯ ಸ್ಟಾಫ್ ನರ್ಸಸ್ ೩೭೪೪-೩೬೩೪-೭೦ ಸ್ಟಾಫ್ ನರ್ಸಸ್(ಮೇಲ್)೪೦೪-೩೬-೫೩ ಹೆಲ್ತ್ ಸೂಪರ್‌ವೈಸರ್ಸ್ ಗೆಜೆಟೆಡ್ ೨೧-೧೨-೯ ಹೆಲ್ತ್ ಸೂಪರ್‌ವೈಸರ್ಸ್ ನಾನ್ ಗೆಜೆಟೆಡ್ ೭೬-೬೫-೧೧, ಹೆಲ್ತ್ ಅಸಿಸ್ಟೆಂಟ್ಸ್ ಮೇಲ್ ೯೪೩-೯೩೯-೪ ಲೇಡಿ ಹೆಲ್ತ್ ವಿಜಿಟರ್ಸ್ ೧೨೧೯-೧೧೫೪-೬೫, ಲ್ಯಾಬೊರೇಟರಿ ಟೆಕ್ನಿಶಿಯನ್ಸ್-೨೮೦-೨೫೫-೨೫ ರೆಫ್ರಾಕ್ಷನಿಸ್ಟ್ಸ್ ೨೮೮-೨೪೩-೪೫, ಜೂನಿಯರ್ ಲ್ಯಾಬೊರೇಟರಿ ಟೆಕ್ನಿಶಿಯನ್ಸ್ ೭೮೭-೫೩೨-೨೫೫ ಎಕ್ಸರೇ ಟೆಕ್ನಿಶೀಯನ್ಸ್ ೨೦೭-೨೦೦-೭, ಹೆಲ್ತ್ ವರ್ಕರ್ಸ್ ಮೇಲ್ ೫೫೧೭, ಫಿಮೇಲ್ ೧೦೧೦ ಇವರ ಪೈಕಿ ಮೇಲ್ ೫೧೧೦ ಸಂಖ್ಯೆ ಕೆಲಸ ಮಾಡುತ್ತಿದ್ದು. ಫೀಮೇಲ್ ೬೭೭ ಇದ್ದಾರೆ ಫಸ್ಟ್ ಡಿವಿಜನ್ ಅಸಿಸ್ಟೆಂಟ್ಸ್ ೧೧೩೭-೧೦೬೩-೭೪,-ಫಾರ್ಮಸಿಸ್ಟ್ಸ್ ೨೩೧೭-೨೧೨೪-೧೯೩ ಎಸ್‌ಡಿಸಿ ೧೪೯೮-೧೨೯೬-೧೯೬, ಕ್ಲರ್ಕ್ ಕಮ್ ಟೈಪಿಸ್ಟ್ಸ್ ೨೫೯-೨೦೫-೫೪-ಇದನ್ನೆಲ್ಲಾ ಒಟ್ಟಿನಲ್ಲಿ ತೆಗೆದುಕೊಂಡಾಗ ಕೇವಲ ೧೦ ಪರ್ಸೆಂಟ್ ಮಾತ್ರ ಭರ್ತಿಯಾಗಿಲ್ಲ. ಆ ಸಂಖ್ಯೆ ಅಷ್ಟೇನು ದೊಡ್ಡದೇನಲ್ಲ. ಸಣ್ಣ ಘಟಕದಲ್ಲೂ ಕೂಡ ಒಬ್ಬ ಲ್ಯಾಬೊರೇಟರಿ ಅಸಿಸ್ಟೆಂಟ್ ರಿಸಿಪ್ಷನಿಸ್ಟ್ ಮತ್ತು ಒಬ್ಬ ಡಾಕ್ಟರನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮತ್ತು ಖಾಲಿ ಉಳಿದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ವೇಕೆಂಟ್ ಪೋಸ್ಟ್ ಸಹ ಕಳೆದ ವರ್ಷಕ್ಕಿಂತ ಈ ವರ್ಷ ಸುಧಾರಿಸಿದೆ ಈ ವರ್ಷ ಉಳಿದ ಜಾಗಗಳಿಗೂ ಭರ್ತಿ ಮಾಡಲು ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಸರ್ಕಾರದ ಎಲ್ಲಾ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಎಷ್ಟಿರಬೇಕು ಎಂಬ ಬಗ್ಗೆ ಪ್ರತಿ ಪಿ. ಹೆಚ್. ಸಿ. ಯಲ್ಲೂ ಒಂದು ಜೀಪು, ಒಬ್ಬ ಲೇಡಿ ಡಾಕ್ಟರ್, ಮತ್ತು ಒಬ್ಬ ಮೇಲ್ ಡಾಕ್ಟರನ್ನು ಕೊಡಲು ಪ್ರಯತ್ನಿಸುತ್ತಿದ್ದೇವೆ. ಈಗ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಸ್ವಲ್ಪಮಟ್ಟಿಗೆ ಉನ್ನತೀಕರಿಸಿ ಅಲ್ಲಿ ಎಲ್ಲಾ ಸ್ಪೆಷಲಿಸ್ಟ್‌ಗಳು ಇರುವುದಕ್ಕೆ ಏನು ವ್ಯವಸ್ಥೆಯಾಗಬೇಕೋ ಅದನ್ನು ಮಾಡುತ್ತೇವೆ. ಪ್ರತೀ ತಾಲ್ಲೂಕು ಆಸ್ಪತ್ರೆಯಲ್ಲಿ ೩೦ ಬೆಡ್‌ಗಳು ಇರಬೇಕೆಂಬ ತೀರ್ಮಾನ ಏನು ಹಿಂದೆ ಆಗಿದೆಯೋ ಅದರ ಪ್ರಕಾರವಾಗಿ ಇನ್ನೂ ಕೆಲವು ತಾಲ್ಲೂಕುಗಳಲ್ಲಿ ೩೦ ಬೆಡ್‌ಆಸ್ಪತ್ರೆಗಳಲ್ಲಿ ಇಲ್ಲ ಮತ್ತು ಸಬ್‌ಡಿವಿಜನ್ ನಲ್ಲಿ ೫೦ ಬೆಡ್ ಆಸ್ಪತ್ರೆಗಳು ಇರಬೇಕೆಂದು ಏನು ತೀರ್ಮಾನವಾಗಿತ್ತು, ಅದು ಇನ್ನೂ ಕೆಲವು ಕಡೆಗಳಲ್ಲಿ ಜಾರಿ ಆಗಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲು ಏನು ಕಮಿಟ್‌ಮೆಂಟ್ ಸರಕಾರ ಮಾಡಿದೆಯೋ ಅಂದರೆ ಸಬ್‌ಡಿವಿಜನ್ ಮಟ್ಟದಲ್ಲಿ ೫೦ ಬೆಡ್ ಆಸ್ಪತ್ರೆ ಇರಬೇಕು ತಾಲ್ಲೂಕು ಮಟ್ಟದಲ್ಲಿ ೩೦ ಬೆಡ್ ಆಸ್ಪತ್ರೆ ಇರಬೇಕು ಎಂದು ಅದನ್ನು ಪ್ರಾಯಶಃ ಜಾರಿಗೆ ತಂದಿದ್ದು ಕೆಲವು ಕಡೆ ೩೦ ಕ್ಕಿಂತ ಹೆಚ್ಚು ಬೆಡ್‌ಗಳನ್ನು ಹೊಂದಿದ್ದು ೫೦ ಬೆಡ್ ಇರಬೇಕಾಗಿರುವ ಕಡೆಗಳಲ್ಲಿ ನೂರು ಬೆಡ್ ಮಾಡಿದ್ದೇವೆ. ನಾವು ಏನು ನಾರ್ಮ್ಸ್ ಇಟ್ಟುಕೊಂಡಿದ್ದೇವೆ ಅದರ ಪ್ರಕಾರವಾಗಿ ಜಿಲ್ಲಾ ಮಟ್ಟದಲ್ಲಿರತಕ್ಕಂತಹ ಜನರಲ್ ಆಸ್ಪತ್ರೆಗಳು ಏನು ಇವೆ ಮತ್ತು ಡಿವಿಜನ್ ಮಟ್ಟದಲ್ಲಿರತಕ್ಕಂತಹ ಆಸ್ಪತ್ರೆಗಳಲ್ಲಿ ಕೂಡಾ ಅಲ್ಲಿ ಏನೇನು ಎಕ್ವಿಪ್‌ಮೆಂಟ್ಸ್ ಬೇಕೋ ಯಾವ್ಯಾವ ಸ್ಪೆಷಲಿಸ್ಟ್‌ಗಳು ಬೇಕೋ, ತಾಲ್ಲೂಕು ಮಟ್ಟದಲ್ಲಿ ೫೦ ಬೆಡ್‌ಗಳನ್ನು ಹಾಕಬೇಕೆಂಬ ಯೋಜನೆ ಏನು ಇದೆ ಇದೆಲ್ಲಕ್ಕೂ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಬೇಕೆಂದು ಈ ದಿಶೆಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ಪೂರೈಸುವುದಕ್ಕೋಸ್ಕರ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಸ್ಟೇಟ್ ನರ್ಸಿಂಗ್ ಯೂನಿವರ್ಸಿಟಿ ಮಾಡಬೇಕೆಂದು.. ......

ಶ್ರೀ ಎಂ. ರಾಮಪ್ಪ.—ಮುನ್ಸಿಪಲ್ ಆಯುರ್ವೇದಿಕ್ ಆಸ್ಪತ್ರೆಗಳು ಏನು ಇವೆ ಇವು ಇವತ್ತು ಯಾರ ಕೈಯಲ್ಲಿದೆಯೋ ಗೊತ್ತಿಲ್ಲ. ಇದಕ್ಕೆ ಅಲೋಪತಿಕ್ ಅನ್ನು ಕೂಡ ಇನ್‌ಕ್ಲೂಡ್ ಮಾಡಿದ್ದಾರೆ. ಇದಕ್ಕೆ ಧೊರೆಗಳು ಯಾರು ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ಬರತಕ್ಕಂತಹ ಜಿಲ್ಲಾ ಆಸ್ಪತ್ರೆಗಳನ್ನು ಬಿಟ್ಟು ಮಿಕ್ಕಿದ ಆಸ್ಪತ್ರೆಗಳನ್ನು ದಿನಾಂಕ ೧-೪-೭೭ರಿಂದ ಜಿಲ್ಲಾಪರಿಷತ್ತಿಗೆ ವಹಿಸಿಕೊಟ್ಟಿದ್ದೇವೆ.

ಶ್ರೀ ಎಂ. ರಾಮಪ್ಪ.—ಸಿಟಿ ಮುನಿಸಿಪಲ್‌ಲಿಮಿಟ್‌ನಲ್ಲಿರುವುದು ಯಾರಿಗೆ ಸೇರುತ್ತದೆ ? ಡಿ. ಹೆಚ್. ಓ. ಅನ್ನು ಕೇಳಿದರೆ ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಅಲ್ಲಿ ಸ್ಟಾಫ್‌ಡಾಕ್ಟರ್ ಇರುವುದಿಲ್ಲ. ಅವನ್ನು ಯಾರು ನೋಡುತ್ತಾರೆ ? ಅವಕ್ಕೆ ಯಾರು ದೊರೆಗಳು ? ಗುಲ್ಬರ್ಗದಲ್ಲಿ ಕೇಳಿದರೆ ಆ ರೀತಿ ಹೇಳುತ್ತಾರೆ. ಬೆಂಗಳೂರಿಗೆ ಬಂದು ಇವನ್ನೆಲ್ಲಾ ಕೇಳಬೇಕಾಗಿದೆ ?

ಶ್ರೀ ಬಿ. ರಾಚಯ್ಯ.—ಮುನಿಸಿಪಲ್ ಏರಿಯಾದಲ್ಲಿರತಕ್ಕಂಥಾದ್ದು ಕಾರ್ಪೋರೇಷನ್ ಏರಿಯಾದಲ್ಲಿ ರತಕ್ಕಂಥಾದ್ದನ್ನು ಅವರೇನಡೆಸುತ್ತಾರೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ಮಹಾ ನಗರಸಭೆ ಮೈಸೂರು ನಗರಸಭೆಯವರು ಅವರೇ ನಡೆಸುತ್ತಿದ್ದಾರೆ. ನಿಮ್ಮ ಮುನಿಸಿಪಾಲಿಟಿಗೆ ಈ ಬಗ್ಗೆ ಏನು ಬೇಕೋ ಅದನ್ನು ಕೊಡಿಸಲು ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಗ್ರಾಂಟ್ ಕೊಡಿಸಿ.

ಶ್ರೀ ಬಿ. ರಾಚಯ್ಯ.—ಗ್ರಾಂಟ್ ಅನ್ನು ಕೂಡ ಕೊಡೋಣ. ಆಸ್ಪತ್ರೆಯನ್ನು ಅವರಿಗೆ ವರ್ಗಾಯಿಸಿದ ಮೇಲೆ ಏನು ಖರ್ಚು ಮಾಡುತ್ತೇವೋ ಅದನ್ನು ಕೂಡ ಅವರಿಗೆ ವರ್ಗಾಯಿಸಬೇಕಾಗುತ್ತದೆ. ಅದೇ ರೀತಿಯಾಗಿ ಜಿಲ್ಲಾ ಪರಿಷತ್ತಿಗೆ ಸಹಾಯ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿರತಕ್ಕಂಥಹ ಕಾರ್ಪೋರೇಷನ್ ಒಳಗಡೆ ಇರತಕ್ಕಂತಹ ಆಸ್ಪತ್ರೆಗಳು ಏನು ಇವೆ ಅವು ಜಿಲ್ಲಾ ಪರಿಷತ್ತಿಗೆ ಹೇಗೆ ಬರುತ್ತದೆ. ಎಂದರೆ ಅವನ್ನು ಕಾನೂನು ಪ್ರಕಾರ ಕೊಟ್ಟಿದ್ದೇವೆ. ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಜನರಲ್ ಆಸ್ಪತ್ರೆಗಳು ಏನು ಇವೆ ಅವುಗಳನ್ನು ನಮ್ಮ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಒತ್ತಾಯ ಇದೆ. ಈ ಬಗ್ಗೆ ಪುನಃ ಇದನ್ನು ಪರಿಶೀಲನೆ ಮಾಡುತ್ತೇನೆಂದು ತಿಳಿಸುತ್ತಿದ್ದೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ನಾನು ನಿನ್ನೆ ಮಾತನಾಡುತ್ತಾ ಆರೋಗ್ಯ ಕೇಂದ್ರಗಳ ಬಗ್ಗೆ ತಾವು ಸ್ಪಷ್ಟವಾಗಿ ಇರತಕ್ಕಂತಹ ಕಲ್ಪನೆಯನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದ್ದೆ ಆರೋಗ್ಯ ಕೇಂದ್ರ ಅಂದರೆ ಡಾಕ್ಟರ್, ಒಬ್ಬ ಲೇಡಿ ಡಾಕ್ಟರ್, ಜೀಪ್ ಮತ್ತು ಶೈತ್ಯಾಗಾರ, ಸಿಬ್ಬಂದಿ ವರ್ಗ ಮತ್ತು ಆಸ್ಪತ್ರೆಗೆ ಸಂಬಂಧಪಟ್ಟಂತೆ ಹಾಸಿಗೆಗಳ ಸೌಲಭ್ಯವನ್ನು ಏಕೆ ಮಾಡಬೇಕೆಂದರೆ ಒಂದು ತಾಲ್ಲೂಕಿನಲ್ಲಿ ತಾಲ್ಲೂಕು ಆಸ್ಪತ್ರೆಗಳು ಇರುತ್ತವೆ ಒಂದು ತಾಲ್ಲೂಕಿನಲ್ಲಿ ೨-೩ ಆರೋಗ್ಯ ಕೇಂದ್ರಗಳು ಕೂಡ ಇರುತ್ತವೆ ಹಾಗೂ ಇದಕ್ಕೆ ಹೊಂದಿಕೊಂಡಂತೆ ೫-೬ ಆರೋಗ್ಯ ಘಟಕಗಳು ಇರುತ್ತವೆ ಒಂದು ಆರೋಗ್ಯ ಕೇಂದ್ರ ಸುಮಾರು ೫-೬ ಘಟಕಗಳನ್ನು ಹೊಂದಿರುವುದರಿಂದ ವಿಶೇಷ ಸೌಲಭ್ಯಗಳನ್ನೊಳಗೊಂಡ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ ಇದನ್ನು ನಾನು ನಿನ್ನೆ ನನ್ನ ಭಾಷಣದಲ್ಲಿ ಕೂಡ ಹೇಳಿದ್ದೇನೆ. ಆರೋಗ್ಯ ಘಟಕವೆಂದು ಹೆಸರು ಕೊಟ್ಟಿದ್ದೀರಿ, ಆರೋಗ್ಯ ಕೇಂದ್ರಗಳೆಂದು ಹೆಸರು ಕೊಟ್ಟಿದ್ದೀರಿ, ಉಪ ಕೇಂದ್ರಗಳೆಂದು ಹೆಸರು ಕೊಟ್ಟಿದ್ದೀರಿ. ಬರೀ ಹೆಸರು ಕೊಡುವುದರಿಂದ ಏನೂ ಪ್ರಯೋಜನವಿಲ್ಲ ಎಲ್ಲಾ ಸವಲತ್ತು ಸೌಲಭ್ಯ, ಉಪಕರಣ ಸಿಬ್ಬಂದಿ ಇದ್ದರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಬಿ. ರಾಚಯ್ಯ.—೫ ಸಾವಿರ ಜನ ಸಂಖ್ಯೆ ಇರತಕ್ಕಂತಹ ಮೈದಾನ ಪ್ರದೇಶದಲ್ಲಿ ಅಂದರೆ ಆ ಭಾಗಗಳಿಗೆ ಒಂದು ಉಪಕೇಂದ್ರ ಕೊಡುತ್ತೇವೆ ಆ ಉಪಕೇಂದ್ರದಲ್ಲಿ ೨ ಸಾವಿರ ರೂಪಾಯಿ ಬೆಲೆಬಾಳುವ ಔಷಧಿ ಇರುತ್ತದೆ. ಡಾಕ್ಟರ್ ಇರುತ್ತಾರೆ, ನರ್ಸ್ ಕೂಡಾ ಇರುತ್ತಾರೆ. ಮತ್ತೆ ಫಾರ್ಮಾಸಿಸ್ಟ್ ಕೂಡಾ ಇರುತ್ತಾರೆ. ಹಿಂದಿನ ನಮ್ಮ ಹಳೆಯ ಮೈಸೂರಿನಲ್ಲಿ ಇದ್ದುದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಇದನ್ನು ಮಾಡಲಾಗಿದೆ. ಕೇಂದ್ರ ಸರ್ಕಾರದ ನೀತಿಯ ಪ್ರಕಾರ ೩ ಟೈರ್ ಸಿಸ್ಟಂನ್ನು ಜಾರಿ ಮಾಡುತ್ತಿದ್ದೇವೆ. ಉಪಕೇಂದ್ರಗಳು, ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಎಂದು ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಆಸ್ಪತ್ರೆಗಳು ಏನಿವೆ ಅವುಗಳನ್ನು ರೆಫರಲ್ ಆಸ್ಪತ್ರೆಯನ್ನಾಗಿ ಮಾಡಬೇಕು. ತಾಲ್ಲೂಕಿನಿಂದ ಕೆಳಗಡೆ ಇರತಕ್ಕಂಥ ಈ ಆರೋಗ್ಯ ಕೇಂದ್ರಗಳು ಏನಿವೆ. ಈ ನಾಲ್ಕು ಘಟಕಗಳನ್ನು ಸೇರಿಸಿ ಒಂದು ಆರೋಗ್ಯ ಕೇಂದ್ರವನ್ನು ಮಾಡಬೇಕು ಎಂದು ಹೇಳಿದ್ದೇವೆ ಅಥವಾ ಮೂವತ್ತು ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಕೇಂದ್ರ ಬೇಕು ಎಂದು ಮಾಡಿದ್ದೇವೆ. ಅವರಲ್ಲಿ ಮೇಲ್ ಡಾಕ್ಟರ್ ಇರುತ್ತಾರೆ, ಅದಕ್ಕೆ ಒಬ್ಬರು ಫಾರ್ಮಾಸಿಸ್ಟ್ ಇರುತ್ತಾರೆ ಮತ್ತು ಇಬ್ಬರೋ ಮೂವರೋ ನರ್ಸ್‌ಗಳು ಇರುತ್ತಾರೆ, ಲ್ಯಾಬೋರೇಟರಿಗೆ ಸಂಬಂಧಪಟ್ಟವರು ಇರುತ್ತಾರೆ. ಯೂರಿನ್ ಟೆಸ್ಟ್ ಮಾಡತಕ್ಕಂಥ, ಬ್ಲಡ್ ಟೆಸ್ಟ್ ಮಾಡತಕ್ಕಂಥದ್ದಕ್ಕೂ ಕೂಡಾ ಅಲ್ಲಿ ಸಾಧ್ಯ ಇದೆ. ಅದು ಇಲ್ಲದಿದ್ದರೆ ತಾಲ್ಲೂಕು ಮಟ್ಟದಲ್ಲಿ ಎಕ್ಸ್‌ರೇ ಯೂನಿಟ್ಸ್ ಏನು ಇದೆ, ಎಕ್ಸ್‌ರೇ ಯೂನಿಟ್ಸ್

ಗಳಾಗಲೀ ಆರ್ಥೋಪೆಡಿಕ್ಸ್‌ಗೆ ಸಂಬಂಧಪಟ್ಟ ರತಕ್ಕಂಥ ಕೆಲವು ಆಪರೇಷನ್ಸ್ ಮತ್ತು ಇತರೆ ಖಾಯಿಲೆಯನ್ನು ಸರಿಪಡಿಸತಕ್ಕಂಥದ್ದಾಗಲಿ ರೆಫರಲ್ ಆಸ್ಪತ್ರೆ ಎಂದು ಮಾಡಿದಾಗ ನಾಲ್ಕಾರು ಫ್ಯಾಕಲ್ಟೀಸ್‌ಗಳು ಇರಬೇಕಾಗುತ್ತದೆ. ಕಣ್ಣಿಗೆ ಸಂಬಂಧಪಟ್ಟರತಕ್ಕಂಥದ್ದು, ಮೆಡಿಸಿನ್‌ಗೆ ಸಂಬಂಧಪಟ್ಟರತಕ್ಕಂಥದ್ದು, ಸರ್ಜರಿಗೆ ಸಂಬಂಧಪಟ್ಟರತಕ್ಕಂಥದ್ದು, ಹೀಗೆ ಬೇರೆ ಬೇರೆ ಏನು ವ್ಯವಸ್ಥೆಗಳಿವೆ, ಅವುಗಳನ್ನು ತಾಲ್ಲೂಕು ಮಟ್ಟದಲ್ಲಿ ಕೊಡುವುದರಿಂದ ಹತ್ತಿರದಲ್ಲಿರತಕ್ಕಂಥವರು ರೆಫರ್ ಮಾಡಿದರೆ ಆ ಖಾಯಿಲೆಗಳನ್ನು ಕಂಡುಹಿಡಿಯುವುದಕ್ಕೆ ಮತ್ತು ಚಿಕಿತ್ಸೆಯನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಅದನ್ನು ಆ ರೀತಿಯಲ್ಲಿ ಸೃಷ್ಟಿ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿರತಕ್ಕ ಆಸ್ಪತ್ರೆಯನ್ನು ಸುಸಜ್ಜಿತವಾಗಿ ಮಾಡಬೇಕೆಂದಿದ್ದೇವೆ. ಆರೋಗ್ಯ ಕೇಂದ್ರಗಳ ಬಗ್ಗೆ ಹೇಳುವುದಾದರೆ ಹೆರಿಗೆಗೆ ಸಂಬಂಧಪಟ್ಟಹಾಗೆ ಅಲ್ಲಿ ಒಬ್ಬ ಲೇಡಿ ಡಾಕ್ಟರನ್ನು ಅಟ್ಯಾಚ್ ಮಾಡಬೇಕೆಂಬ ಬಗ್ಗೆಯೂ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಪಂಪಾಪತಿ.—ಕಿದ್ವಾಯಿ ಆಸ್ಪತ್ರೆಯಲ್ಲಿ ರೋಗಿಗಳನ್ನು ನೋಡುವುದಕ್ಕೆ......

ಛೇರ್ಮನ್.—ಚನ್ನಪ್ಪನವರು ಕೇಳಲಿ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಪಂಪಾಪತಿ.—ನಾನು ಒಂದು ವಿಷಯದ ಬಗ್ಗೆ ಹೇಳಿದ್ದೆ. ಏನೆಂದರೆ, ಕಿದ್ವಾಯಿ ಆಸ್ಪತ್ರೆಯಲ್ಲಿ ರೋಗಿಗಳ ಜೊತೆಯಲ್ಲಿ ಬರತಕ್ಕಂಥವರು ಉಳಿದುಕೊಳ್ಳುವುದಕ್ಕೆ ಅವಕಾಶ ಮಾಡುವ......

ಶ್ರೀ ಬಿ. ರಾಚಯ್ಯ.—ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ಉತ್ತರವನ್ನು ಅರ್ಧಕ್ಕೇ ನಿಲ್ಲಿಸಬೇಕಾಗುತ್ತದೆ. ದಯಮಾಡಿ ಅವಲ್ಲೇ ಕೇಳಿ. ಕಿದ್ವಾಯಿ ಆಸ್ಪತ್ರೆಯಲ್ಲಿ ಧರ್ಮಶಾಲೆಯನ್ನು ಕಟ್ಟಿಸಿದ್ದಾರೆ. ಅದನ್ನು ನಿನ್ನೆ ಕೂಡಾ ಹೇಳಿದ್ದೇನೆ. ಅದನ್ನು ಸಾರ್ವಜನಿಕರ ವಂತಿಗೆಯಿಂದ ಕಟ್ಟಿಸಿ, ಪ್ರತಿನಿತ್ಯ ಒಬ್ಬೊಬ್ಬ ಮೆಂಬರ್ ಊಟವನ್ನು ಹಾಕಿಸತಕ್ಕಂಥ ವ್ಯವಸ್ಥೆ ಮಾಡುತ್ತಿದ್ದಾರೆ. ಈ ರೀತಿಯಾಗಿ ಒಂದು ವಿನ್‌ಲಿಸ್ಟನ್ನು ಮಾಡಿಕೊಂಡಿದ್ದಾರೆ. ಅವರು ಯಾವ ರೀತಿ ಮಾಡಿದ್ದಾರೆ ಎನ್ನುವ ಬಗ್ಗೆ ತಮಗೆ ಅದರ ಒಂದು ಕಾಪಿಯನ್ನು ಕಳುಹಿಸಿ ಕೊಡುತ್ತೇನೆ. ದಾವಣಗೆರೆಯಲ್ಲಿಯೂ ಕೂಡಾ ನಿಮ್ಮ ಎಫರ್ಟ್ಸ್‌ನಿಂದ ಇದೇ ರೀತಿ ಕಟ್ಟಡವನ್ನು ಕಟ್ಟಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಪ್ರತಿನಿತ್ಯ ಸರ್ಕಾರದ ಖರ್ಚಿಲ್ಲದೆ ಅವರೇ ಊಟ ಹಾಕಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಆಸ್ಪತ್ರೆ ಪರಿಸರ ಶುದ್ಧವಾಗಿರುವುದಕ್ಕೆ ಮತ್ತು ರೋಗಿಗಳನ್ನು ಬಂದು ನೋಡಿಕೊಳ್ಳುವುದಕ್ಕೆ ತಂಗುದಾಣ ಮಾಡಬೇಕೆಂದು ಅದನ್ನು ಮಾಡಿದ್ದೇವೆ. ಆದ್ದರಿಂದ ಇವತ್ತು ಕಿದ್ವಾಯಿ ಆಸ್ಪತ್ರೆಯಲ್ಲಿ ಆ ಒಂದು ಒಳ್ಳೆಯ ವ್ಯವಸ್ಥೆ ಇದೆ. ಧರ್ಮಶಾಲೆಯನ್ನು ಮಾಡಬೇಕಾಗಿದ್ದರೆ ಸಾರ್ವಜನಿಕ ವಂತಿಗೆಯಿಂದ ಮಾಡಬೇಕಾಗಿದ್ದರೆ ಸರ್ಕಾರದಿಂದ ಏನಾದರೂ ೫೦ ಪರ್ಸೆಂಟ್‌ನ್ನು ಕೊಡುತ್ತೀರಾ ಎಂದು ನೀವು ಕೇಳಿದ್ದೀರಿ. ಅವೆಲ್ಲವುಗಳಿಗೂ ಸರ್ಕಾರದಿಂದ ಕೊಟ್ಟಿದ್ದು ಅಲ್ಲ. ಅದನ್ನು ಸಾರ್ವಜನಿಕರಿಂದ ವಂತಿಗೆಯನ್ನು ಎತ್ತಿ ಮಾಡಿರತಕ್ಕಂಥದ್ದು. ಲೋಕಲ್ ಆಗಿ ಏನಾದರೂ ಕೊಡುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಮತ್ತೆ ನರ್ಸಿಂಗ್ ಯೂನಿವರ್ಸಿಟಿ ಮಾಡಬೇಕು ಎಂದು ಮಾನ್ಯ ಸದಸ್ಯರಾದ ರತ್ನಾಕರ್‌ರವರು ಹೇಳಿದರು. ಈ ವರ್ಷ ನರ್ಸಿಂಗ್ ಯೂನಿವರ್ಸಿಟಿಯನ್ನು ಮಾಡುವ ಪರಿಸ್ಥಿತಿಯಲ್ಲಿಲ್ಲ. ಇಲ್ಲಿರತಕ್ಕಂಥ ನರ್ಸಿಂಗ್ ಕಾಲೇಜುಗಳನ್ನು, ನರ್ಸಿಂಗ್ ಸ್ಕೂಲ್‌ಗಳನ್ನೆಲ್ಲಾ ನೋಡಿದಾಗ ಈ ಬಗ್ಗೆ ಇನ್ನೂ ಬಹಳ ದೂರ ಹೋಗಬೇಕಾಗುತ್ತದೆ. ನಾವು ಹೆಲ್ತ್ ಸೈನ್ಸ್ ಯೂನಿವರ್ಸಿಟಿಯನ್ನು ಮಾಡಬೇಕು ಎಂದು ಹೇಳಿ ಒಂದು ಸಮಿತಿಯನ್ನು ಮಾಡಿದ್ದೇವೆ. ಈ ರೀತಿ ಮಾಡುವುದರಿಂದ ಮೆಡಿಕಲ್ ಕಾಲೇಜಿನಲ್ಲಿರತಕ್ಕಂಥ ಸ್ಟಾಂಡರ್ಡನ್ನು ಇಂಪ್ರೂವ್ ಮಾಡುವುದಕ್ಕೆ ಯೂನಿಫಾರಂ ಆದ ಸ್ಟ್ಯಾಂಡರ್ಡ್ ಬರುವುದಕ್ಕೆ ಹಾಗೂ ಕ್ವಾಲಿಟೇಟಿವ್ ಎಜುಕೇಷನ್ ಸಿಗಬೇಕು ಎನ್ನುವ ದೃಷ್ಟಿಯಿಂದ ನಾವು ಹೆಲ್ತ್ ಸೈನ್ಸ್ ಯೂನಿವರ್ಸಿಟಿಯನ್ನು ಮಾಡಬೇಕು ಎಂದು ಹೇಳಿ ವಿಶೇಷಜ್ಞರಾಗಿ ಡಾ|| ಹೆಚ್. ಎನ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅದನ್ನು ಮಾಡಬೇಕು ಎಂದು ಸರ್ಕಾರ ತೀವ್ರತೆಯಿಂದ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನರ್ಸಿಂಗ್ ಯೂನಿವರ್ಸಿಟಿಗೆ ಸಂಬಂಧಪಟ್ಟಹಾಗೆ ಬಿಎಸ್‌ಸಿ, ಎಂಎಸ್‌ಸಿ ಮಾಡುವುದಕ್ಕೆ ಅವಕಾಶ ಇದೆ. ಇದರಿಂದ ಎಂ. ಡಿ. ಮತ್ತು ಅದರಿಂದ ಮುಂದಕ್ಕೆ ಹೋಗಬೇಕಾದರೆ ಬಿ. ಎಸ್. ಸಿ. ಮಾಡಬೇಕಾಗುತ್ತದೆ. ಅದಕ್ಕೆ ಡೆಪ್ಯುಟೇಷನ್ ಕಳಿಸಿಕೊಡಲು ಕೇಂದ್ರ ಸರ್ಕಾರಕ್ಕೆ ಕೇಳುತ್ತಿದ್ದೇವೆ. ಅವರು ಪರವಾನಗಿ ಕೊಟ್ಟಮೇಲೆ ಹೊರಗಡೆ ಕಳಿಸಿಕೊಡುತ್ತೇವೆ. ನರ್ಸಿಂಗ್ ಯೂನಿವರ್ಸಿಟಿಯನ್ನು ಈ ವರ್ಷ ಅಥವಾ ಮುಂದಿನ ವರ್ಷ ಮಾಡು

ವುದಕ್ಕೆ ಅವಕಾಶ ಇಲ್ಲ. ಆದರೆ ಹೆಲ್ತ್ ಯೂನಿವರ್ಸಿಟಿ ಮಾಡಬೇಕೆಂಬುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ. ನಿಮ್‌ಹಾನ್ಸ್ ಬಗ್ಗೆ ಹೇಳುವಾಗ ಪ್ರತಿ ಜಿಲ್ಲೆಯಲ್ಲಿಯೂ ಕೂಡ, ಒಂದು ಮಾನಸಿಕ ಆರೋಗ್ಯ ಕೇಂದ್ರವನ್ನು ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇದಕ್ಕೆ ಸಂಬಂಧ ಪಟ್ಟಂತೆ ಕೆಲವು ಎಕ್ಸ್‌ಪರ್ಟ್ಸ್ ಇದ್ದಾರೆ, ಅವರು ಪರೀಕ್ಷೆ ಮಾಡಿ ಮಾನಸಿಕ ಕೇಂದ್ರಕ್ಕೆ ರೆಫರ್ ಮಾಡುವ ಕೆಲಸ ಮಾಡುತ್ತಿದ್ದಾರೆ. ಅದೂ ಅಲ್ಲದೇ ಬಳ್ಳಾರಿ ಮತ್ತು ಬೇರೆ ಜಿಲ್ಲೆಗಳಲ್ಲಿ ಶಾಲಾ ಮಕ್ಕಳು ಮತ್ತು ಇತರರನ್ನು ಪರೀಕ್ಷೆ ಮಾಡತಕ್ಕ ಡಾಕ್ಟರ್‌ಗಳು ಆರೋಗ್ಯ ಕೇಂದ್ರದಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಹೆಚ್ಚಿನ ಟ್ರೈನಿಂಗ್ ಕೊಟ್ಟರೆ, ಮಾನಸಿಕವಾಗಿ ತೊಂದರೆ ಪಡತಕ್ಕ ಜನ ಯಾರು ಇದ್ದಾರೆ, ಅದನ್ನು ಕಂಡು ಹಿಡಿದು, ಅಂತಹವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಬಹುಶಃ ಇಡೀ ರಾಷ್ಟ್ರದಲ್ಲಿ ಅತ್ಯಂತ ಹೆಚ್ಚಿನ ಕೀರ್ತಿಯನ್ನು ಪಡೆದಿರತಕ್ಕ ನಮ್ಮ ಮಾನಸಿಕ ಆರೋಗ್ಯ ಕೇಂದ್ರ ಬೆಂಗಳೂರಿನಲ್ಲಿದೆ, ಅದು ಕೇಂದ್ರ ಸರ್ಕಾರದ ಸಹಾಯದಿಂದ ಮತ್ತು ನಮ್ಮ ರಾಜ್ಯ ಸರ್ಕಾರದ ಸಹಾಯದಿಂದ ನಡೆಯುತ್ತಿದೆ. ಅದರಲ್ಲಿ ನಾನ್ ಪ್ಲಾನ್‌ನಲ್ಲಿ ೫೫ ಪರ್ಸೆಂಟ್ ಹಣವನ್ನು ನಾವು ಕೊಡುತ್ತಿದ್ದೇವೆ. ಅವರು ಕೇವಲ ೨೫ ಪರ್ಸೆಂಟ್ ಹಣ ಕೊಡುತ್ತಿದ್ದಾರೆ. ಅವರಿಗಿಂತ ಹೆಚ್ಚು ಹಣವನ್ನು ನಮ್ಮ ಸರ್ಕಾರದವರು ಕೊಡುತ್ತಿದ್ದೇವೆ. ಎಲ್ಲಾ ಕೆಲಸ ಕಾರ್ಯಗಳು ಉತ್ತಮವಾಗಿ ನಡೆದಿದೆ. ನಿಮಾನ್ಸ್ ಅನ್ನು ಒಂದು ರೆಫರಲ್ ಹಾಸ್ಪಿಟಲ್ ಎಂದು ಟ್ರೀಟ್ ಮಾಡಿ, ಈಗ ಅನೇಕ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಹೊರಗಡೆ ಹೋಗಿ ತರಬೇತಿ ಪಡೆಯುತ್ತಿದ್ದಾರೆ. ಅದಕ್ಕೆ ಬದಲು ಈ ಮಾನಸಿಕ ಆರೋಗ್ಯ ಕೇಂದ್ರದಲ್ಲಿಯೇ ಪಡೆಯಲು ಒಪ್ಪಿಕೊಂಡಿದ್ದಾರೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ನಮ್ಮ ಡಾಕ್ಟರ್‌ಗಳು ಕೂಡ ಉತ್ತಮವಾಗಿರತಕ್ಕ ಸೇವೆಯನ್ನು ಅಲ್ಲಿ ಸಲ್ಲಿಸುತ್ತಿದ್ದಾರೆ. ಅಲ್ಲಿ ಇರುವಂತಹ ರೋಗಿಗಳ ದೇಹ ಸ್ವಾಸ್ಥ್ಯ ಹಾಗೂ ಮಾನಸಿಕ ಸ್ವಾಸ್ಥ್ಯ ಸರಿಯಾಗಿರಬಹುದು ಅಥವಾ ಇತರೇ ಬೇರೆ ಯಾವುದೇ ಕಾರಣಗಳಿಗಾಗಿ ತೊಂದರೆಗೆ ಒಳಗಾಗಿರಬಹುದು, ಅಂತವರು ಹುಚ್ಚರಲ್ಲ ಎಂದು ಆ ರೋಗಿಗಳಿಗೆ ತಿಳುವಳಿಕೆ ಕೊಡಿ ಎಂದು ಮಾನ್ಯ ಸದಸ್ಯರಾದ ಶ್ರೀ ರತ್ನಾಕರ್ ಅವರು ಹೇಳಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ಪರೀಕ್ಷೆ ಮಾಡಿದಾಗ, ೧೦೦ಕ್ಕೆ ೬೦ ಜನರು ಏನು ಚಿಂತನೆಗೆ ಒಳಗಾಗಿದ್ದಾರೆ ಅವರು ಹುಚ್ಚರಲ್ಲ, ಅವರುಗಳು ಒಂದು ಚಿಂತೆಗೆ ಒಳಗಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಮಾನಸಿಕ ಆಸ್ಪತ್ರೆಗೆ ಸೇರಿದ ಮಾತ್ರಕ್ಕೆ ಅವರು ಹುಚ್ಚರು ಆಗುವುದಿಲ್ಲ. ಅವರು ಆಸ್ಪತ್ರೆಗೆ ಸೇರಿದ ತಕ್ಷಣ ಹುಚ್ಚರು ಎನ್ನುವ ಭಾವನೆ ಏನು ಇದೆ ಅದನ್ನು ತಪ್ಪಿಸಬೇಕು ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಸಣ್ಣ ಮಕ್ಕಳು ಹುಟ್ಟುವಾಗಲೇ ಅವರಿಗೆ ಟಿಟಾನಸ್ ಫಿಟ್ಸ್ ಬಂದಾಗ ಅವರ ಕೈಗೆ ಕಬ್ಬಿಣ ಕೊಡುವ ಒಂದು ಪದ್ಧತಿ ಸಾಮಾನ್ಯವಾಗಿ ಹಳ್ಳಿಯಲ್ಲಿ ಇರುತ್ತದೆ. ತಾಯಿ ಗರ್ಭದಲ್ಲಿ ಮಗು ಇರುವಾಗ ಕೆಲವು ಗುಳಿಗೆಗಳನ್ನು ಕೊಡುತ್ತಾ ಇದ್ದರೆ, ಈ ರೀತಿ ಆಗುತ್ತದೆ. ಅದು ಫಿಟ್ಸ್ ಅಲ್ಲ, ಕೆಲವು ಡಿಫಿಷಿಯೆನ್ಸಿ ಇರುತ್ತದೆ. ಅದನ್ನು ಪತ್ತೆ ಹಚ್ಚುವಲ್ಲಿ ತರಬೇತಿ ಪಡೆದಂತಹ ಡಾಕ್ಟರ್‌ಗಳು ಆರೋಗ್ಯ ಕೇಂದ್ರದಲ್ಲಿದ್ದರೆ ಇಂತಹದ್ದನ್ನು ಕಂಡುಹಿಡಿಯುವುದಕ್ಕೆ ಸಾಧ್ಯ ಇದೆ. ಪ್ರಥಮವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಇಂತಹ ತರಬೇತಿ ಪಡೆದ ಡಾಕ್ಟರ್ ಅನ್ನು ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ನಮ್ಮ ಮೈಸೂರು ಜಿಲ್ಲೆಯ ಮಾಗೂರ್ ಕೇಂದ್ರದಲ್ಲಿ ಮಾನಸಿಕ ಆರೋಗ್ಯದ ತಜ್ಞರು ಇದ್ದಾರೆ. ಅಲ್ಲಿ ಬಂದ ರೋಗಿಗಳನ್ನು ಅವರ ರೋಗಗಳನ್ನು ನೇರವಾಗಿ ಹೇಗೆ ಕಂಡುಹಿಡಿಯಬೇಕೆಂಬ ಬಗ್ಗೆ ಅವರಿಗೆ ತರಬೇತಿ ಕೊಟ್ಟಿದ್ದೇವೆ. ಈ ರೀತಿ ಮಾನಸಿಕವಾಗಿ ಬರುವ ರೋಗಗಳಿಗೆ ಒಂದು ಚಿಕಿತ್ಸೆ ಮಾಡುವುದಕ್ಕೆ ಮೊದಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಕೆಲವು ಸಂದರ್ಭಗಳಲ್ಲಿ ಸುಸೈಡ್ ಮಾಡಿಕೊಳ್ಳುವ ಯತ್ನಗಳು, ಡೌರಿ ಡೆತ್ಸ್‌ಗಳು ಮತ್ತು ಕೆಲವು ಸಂದರ್ಭಗಳಲ್ಲಿ ಮದುವೆ ಆಗಿಲ್ಲವೆಂದು ಯುವಕರು ನೇಣು ಹಾಕಿಕೊಂಡಿರುತ್ತಾರೆ. ಅಥವಾ ಬೇರೆ ಬೇರೆ ರೀತಿಯ ಹವ್ಯಾಸಗಳೂ ಇರುತ್ತವೆ. ಈ ರೀತಿಯ ಹಲವಾರು ಕಾರಣಕ್ಕಾಗಿ ಮಾನಸಿಕ ಚಿಂತನೆಗೆ, ಖಾಯಿಲೆಗೆ ಒಳಗಾಗಿರತಕ್ಕ ವ್ಯಕ್ತಿಗಳಿಗೆ, ಅವರ ಚಿಂತನೆಯ ಕಾರಣವನ್ನು ಕಂಡುಹಿಡಿದು ಅವರಿಗೆ ಸೂಕ್ತ ಅಡ್ವೈಸ್ ಕೊಡತಕ್ಕ ವ್ಯವಸ್ಥೆ ಸಹ ನಡೆಯುತ್ತಿದೆ. ಮನುಷ್ಯನ ಆರೋಗ್ಯಕ್ಕೆ ಕೇವಲ ಭೌತಿಕ ಕಾರಣ ಅಲ್ಲದೆ ಮಾನಸಿಕ ಕಾರಣವೂ ಇರುವುದರಿಂದ ಈ ಕಾರ್ಯಕ್ರಮವನ್ನು ಹಾಕಿಕೊಂಡು ಅವರ ಚಿಂತನೆಗೆ ಪರಿಹಾರವನ್ನು ಕಲ್ಪಿಸುವ ದಿಶೆಯಲ್ಲಿ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ. ಈಗ ನಮ್ಮಲ್ಲಿ......

ಆರ್-೩ರ ಬಿ.ಎಂ.

ಶ್ರೀ ಪಟವಾಕ್ಕಿ ರತ್ನಾಕರ್.—ತಾಲ್ಲೂಕ್ ಮಟ್ಟದಲ್ಲಿಯೂ ಸಹ ಇಂತಹ ವ್ಯವಸ್ಥೆಯನ್ನು ಜಾರಿಗೆ ತರುವುದು ಒಳ್ಳೆಯದು.

ಶ್ರೀ ಬಿ. ರಾಚಯ್ಯ.—ಇದನ್ನು ತಾಲ್ಲೂಕ್ ಮಟ್ಟದಲ್ಲಿ ಜಾರಿಗೆ ತರುವುದು ಕಷ್ಟವಾಗುತ್ತದೆ. ಏಕೆಂದರೆ, ನಮಗೆ ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ತಜ್ಞರು ಸಿಗುತ್ತಿಲ್ಲ. ಈಗ ಜಿಲ್ಲಾ ಮಟ್ಟದಲ್ಲಿ ನ್ಯೂರೋ ಸರ್ಜರಿ ಮತ್ತು ಸೈಕ್ಯಾಟ್ರಿ ಯೂನಿಟ್ಸ್ ಇವೆ. ಕೆಲವು ಸಂದರ್ಭಗಳಲ್ಲಿ ಈ ಸೈಕ್ಯಾಟ್ರಿಗೆ ಸಂಬಂಧಪಟ್ಟ ವೈದ್ಯರುಗಳು ನ್ಯೂರೋ ಸರ್ಜನ್ಸ್ ಆಗಿರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂತಹವರಿಗೆ ಬೆಂಗಳೂರಿನ ಮಾನಸಿಕ ಕೇಂದ್ರದಲ್ಲಿ ತರಬೇತಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇಲ್ಲಿ ತರಬೇತಿ ಪಡೆದ ನಂತರ ಅವರು ಮಾನಸಿಕ ರೋಗಿಗಳಿಗೆ ಅಡ್ವೈಜ್ ಕೊಡಲು ಸಾಧ್ಯವಾಗುತ್ತದೆ. ಈ ರೀತಿಯಿಂದ ನಾವು ಮಾನಸಿಕ ರೋಗಗಳನ್ನು ತಡೆಗಟ್ಟಲು ಮತ್ತು ಸೂಕ್ತ ಚಿಕಿತ್ಸೆಯನ್ನು ನೀಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ಆರ್ಥೋಪೆಡಿಕ್ಸ್‌ಗೆ ಸಂಬಂಧಪಟ್ಟಂತೆ ಚಿಕಿತ್ಸೆ ನೀಡಲು ಸಂಜಯ್‌ಗಾಂಧಿ ಆಸ್ಪತ್ರೆಯಲ್ಲಿ ಒಳ್ಳೆ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ. ನಮ್ಮ ಸರ್ಕಾರದ ಬಸ್‌ಗಳಿಂದಲೇ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ ಇದಕ್ಕೆ ಆಗುವಂತಹ ಖರ್ಚಿನಲ್ಲಿ ಅರ್ಧ ಭಾಗವನ್ನು ಸಾರಿಗೆ ಸಂಸ್ಥೆಯ ಮೂಲಕ ಕೊಡುತ್ತೇವೆಂದು ಮತ್ತು ಇದಕ್ಕೆ ಅಗತ್ಯವಾದ ಕೆಲವು ಉಪಕರಣಗಳನ್ನು ಮತ್ತು ಸಲಕರಣೆಗಳನ್ನು ತರಿಸಿಕೊಡುವುದಾಗಿ ಮಾನ್ಯ ಸಾರಿಗೆ ಮಂತ್ರಿಗಳು ನಮಗೆ ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಈ ಸಭೆಯ ಸದಸ್ಯರ ಪರವಾಗಿ ವಂದಿಸುತ್ತೇನೆ.

ಇನ್ನು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಒಳ್ಳೆಯ ಕೆಲಸ ನಡೆಯುತ್ತಿದೆ. ಈ ಮುಂಚೆ ಯಾರಿಗಾದರೂ ಹೃದಯಕ್ಕೆ ಸಂಬಂಧಪಟ್ಟ ತೊಂದರೆಗಳಿದ್ದರೆ ಮತ್ತು ಓಪನ್ ಹಾರ್ಟ್ ಸರ್ಜರಿ ಆಗಬೇಕಾಗಿದ್ದರೆ ಅಂತಹವರು ಮದ್ರಾಸ್‌ನ ಅಪೆಲೋ ಆಸ್ಪತ್ರೆಗೆ ಇಲ್ಲವೇ ಮುಂಬೈಗೆ ಹೋಗಬೇಕಾಗಿತ್ತು. ಆದರೆ ಈಗ ಇದೆಲ್ಲಾ ರೋಗಗಳಿಗೆ ಸಂಬಂಧಪಟ್ಟಂತೆ ಚಿಕಿತ್ಸೆ ಮಾಡುವಂತಹ ಕೆಲಸ ಈ ನಮ್ಮ ಸಂಸ್ಥೆಯಲ್ಲಿಯೇ ನಡೆಯುತ್ತಿದೆ. ಇದು ಬಹಳ ಸಂತೋಷದ ಸುದ್ದಿ ಎಂದು ಮಾನ್ಯ ಸಭೆಗೆ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ನಮ್ಮ ಆರೋಗ್ಯ ಇಲಾಖೆಯ ಮೊದಲನೆಯ ಕರ್ತವ್ಯವೆಂದರೆ, ರೋಗ ಬರದಿರುವುದಕ್ಕೆ ಏನೇನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದು ಮತ್ತು ಬಂದಂಥ ರೋಗಗಳನ್ನು ವಾಸಿ ಮಾಡಲು ಅಲೋಪತಿಕ್ ವೈದ್ಯ ಪದ್ಧತಿಯ ಮೂಲಕ ಮತ್ತು ನಮ್ಮ ಇನ್ನಿತರ ಭಾರತೀಯ ವೈದ್ಯ ಪದ್ಧತಿಗಳ ಮೂಲಕ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ಭಾರತೀಯ ವೈದ್ಯ ಪದ್ಧತಿಗೆ ನಾವು ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ಅನೇಕ ರೋಗಗಳನ್ನು ತಡೆಗಟ್ಟಬಹುದೆಂದು ತಿಳಿದುಕೊಂಡು ನಾವು ಪ್ರೋತ್ಸಾಹ ಕೊಡುತ್ತಿದ್ದೇವೆ. ಭಾರತೀಯ ವೈದ್ಯ ಪದ್ಧತಿಯಲ್ಲಿ ಕೆಲವರು ಅನೇಕ ಸಿದ್ಧೌಷಧಗಳನ್ನು ಕಂಡುಹಿಡಿದಿದ್ದಾರೆ. ಕೆಲವರು ಇದನ್ನು ವಂಶಪಾರಂಪರ್ಯವಾಗಿ ತಯಾರು ಮಾಡುತ್ತಾರೆ ಮತ್ತೆ ಕೆಲವರು ಅಭ್ಯಾಸ ಮಾಡಿ ತಯಾರು ಮಾಡುತ್ತಾರೆ. ಇಂತಹವರಿಗೆ ನಾವು ಪ್ರೋತ್ಸಾಹ ಕೊಡುತ್ತಿದ್ದೇವೆ. ಒಟ್ಟಿನಲ್ಲಿ ಈ ಅಲೋಪತಿ, ಹೋಮಿಯೋಪತಿ, ಯುನಾನಿ, ಆಯುರ್ವೇದ ಪದ್ಧತಿಗಳೆಲ್ಲವೂ ಒಟ್ಟಾಗಿ ಸೇರಿದಾಗ ಮತ್ತು ಈ ಎಲ್ಲ ಪದ್ಧತಿಗಳ ಮೂಲಕ ಕೆಲಸ ಮಾಡುತ್ತಿರುವ ಖಾಸಗಿ ವೈದ್ಯರುಗಳು ಮತ್ತು ನಮ್ಮ ಸರ್ಕಾರದ ವೈದ್ಯರುಗಳು ಒಟ್ಟಾಗಿ ಸೇರಿಕೊಂಡು ಕೆಲಸ ಮಾಡಿದಾಗ ಮಾತ್ರ ಎರಡು ಸಾವಿರದ ಇಸವಿಯ ಹೊತ್ತಿಗೆ ಪ್ರತಿಯೊಬ್ಬರಿಗೂ ಆರೋಗ್ಯಭಾಗ್ಯವನ್ನು ಕೊಡುವಂತಹ ಕಲ್ಪನೆಯನ್ನು ನಾವು ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಈಗಾಗಲೇ ವಿಶ್ವಸಂಸ್ಥೆಯವರು ಮತ್ತು ಆರೋಗ್ಯ ಸಂಸ್ಥೆಯವರು ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದರ ಪ್ರಕಾರ ಎಲ್ಲರೂ ನಡೆದುಕೊಳ್ಳಬೇಕೆಂದು ನಮ್ಮ ಪ್ರಧಾನ ಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ಈ ಒಂದು ಹೊಸ ಪದ್ಧತಿಯ ಪ್ರಕಾರ ನಾವು ವೇಗದಲ್ಲಿ ಹೋಗಬೇಕಾದರೆ ಕೇಂದ್ರದವರು ನಮಗೆ ಹಣಕಾಸಿನ ಸಹಾಯ ಮಾಡಬೇಕಾಗುತ್ತದೆ. ಕಟ್ಟಡಗಳು ಇಲ್ಲದ ಕಡೆ ಕಟ್ಟಡಗಳನ್ನು ಕಟ್ಟಿಸಲು ಮತ್ತು ಸಿಬ್ಬಂದಿಗೆ ಆಗುವಂತಹ ಖರ್ಚನ್ನು ೫ ವರ್ಷಗಳ ಕಾಲ ಕೇಂದ್ರದವರು ಕೊಟ್ಟರೆ ಈ ಕಾರ್ಯಕ್ರಮಗಳನ್ನು ಬಹಳ ಯಶಸ್ವಿಯಾಗಿ ನಡೆಸಲು ಸಾಧ್ಯವಾಗುತ್ತದೆ. ಇಷ್ಟು ಹೇಳಿ......

ಶ್ರೀ ಪಟವಾಕ್ಕಿ ರತ್ನಾಕರ್.—ನಾನು ನೆನ್ನೆದಿವಸ ಮಾತನಾಡುವಾಗ ಕೆಲವು ಡಾಕ್ಟರ್‌ಗಳು ಸರ್ಕಾರದ ಆಸ್ಪತ್ರೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಕೆಲಸ ಮಾಡಿ ಬೆಳಗ್ಗೆ ಮತ್ತು ಸಂಜೆ ಹೊತ್ತಿನಲ್ಲಿ

ಪ್ರೈವೇಟ್ ಕ್ಲಿನಿಕ್ ನಡೆಸುತ್ತಾರೆ, ಇದನ್ನು ತಪ್ಪಿಸಬೇಕು ಎಂದು ನಾನು ಹೇಳಿದ್ದೆ. ಆಮೇಲೆ ಹಳ್ಳಿಗಳಲ್ಲಿ ಡಾಕ್ಟರ್‌ಗಳ ಸೇವೆಯನ್ನು ಕಡ್ಡಾಯ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದೆ. ಆಮೇಲೆ ಭ್ರೂಣಹತ್ಯೆ ಏನು ಮಾಡುತ್ತಾ ಇದ್ದಾರೆ ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದೆ. ಈ ಮೂರು ಪಾಯಿಂಟ್‌ಗಳನ್ನು ತಾವು ಬಿಟ್ಟಿದ್ದೀರಿ.

ಶ್ರೀ ಬಿ. ರಾಚಯ್ಯ.—ಈ ಭ್ರೂಣಹತ್ಯೆಯನ್ನು ನಿಲ್ಲಿಸಬೇಕು ಎಂದು ಮಹಾರಾಷ್ಟ್ರದಲ್ಲಿ ಒಂದು ಮಸೂದೆಯನ್ನು ತಂದಿದ್ದಾರೆ. ಬಹುಶಃ ಅದೇ ರೀತಿಯಲ್ಲಿ ಕೇಂದ್ರಸರ್ಕಾರದವರೂ ಕೂಡ ಮಸೂದೆಯನ್ನು ನಾವೇ ತರುತ್ತೇವೆ ಎಂದು ಹೇಳಿದ್ದಾರೆ. ಅದರಂತೆ ನಾವೂ ಕೂಡ ಆ ನಿಟ್ಟಿನಲ್ಲಿ ಯೋಚನೆ ಮಾಡಿದ್ದೇವೆ. ಇವತ್ತು ಈ ಬಗ್ಗೆ ಮಸೂದೆ ತಯಾರಾಗುತ್ತಾ ಇದೆ. ಈ ಭ್ರೂಣಹತ್ಯೆ ಎಂದು ಏನು ಹೇಳುತ್ತಿದ್ದೀರಿ ಅದು ಅತ್ಯಂತ ಪಾಪಕಾರ್ಯವಾಗಿರತಕ್ಕಂಥಾದ್ದು, ಅದನ್ನು ತಪ್ಪಿಸಬೇಕು ಎಂದು ಹೇಳಿದ್ದೀರಿ. ಆದುದರಿಂದ ಅದನ್ನು ತಪ್ಪಿಸುವುದಕ್ಕೆ ನಾವು ಈಗಾಗಲೇ ಚಿಂತನೆ ಮಾಡಿದ್ದೇವೆ ಎಂದು ತಮಗೆ ತಿಳಿಸುತ್ತಾ ಇದ್ದೇನೆ. ಈ ಬಗ್ಗೆ ಮಸೂದೆ ತರುತ್ತೇವೆ. ಆಮೇಲೆ ಕೆಲವು ಡಾಕ್ಟರುಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲ ಕಾಲ ಮಾತ್ರ ಹಾಜರಿದ್ದು ಉಳಿದ ವೇಳೆಯಲ್ಲಿ ಬೇರೆ ನರ್ಸಿಂಗ್‌ಹೋಂಗಳಲ್ಲಿ ಕೆಲಸ ಮಾಡುತ್ತಾರೆ, ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಇಲ್ಲ, ಬೇರೆ ಕಡೆಯಿಂದ ಔಷಧಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾ ಇದ್ದಾರೆಂದು ಹೇಳಿದರು, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದೇನೆ, ನರ್ಸಿಂಗ್‌ಹೋಂಗಳಿಗೆ ವೈದ್ಯಾಧಿಕಾರಿಗಳು ಹೋಗಿ ಕೆಲಸ ಮಾಡತಕ್ಕಂಥಾದ್ದು ಏನಿದೆ ಅದನ್ನು ತಪ್ಪಿಸುವುದಕೋಸ್ಕರ ಒಂದು ಮಸೂದೆ ಇದೆ. ಆ ಮಸೂದೆ ನಮ್ಮ ಲಾ ಡಿಪಾರ್ಟ್‌ಮೆಂಟನಿಂದ ನಿನ್ನೂ ನಮಗೆ ಬರಲಿಲ್ಲ. ಆದುದರಿಂದ ಯಾರ್‍ಯಾರು ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾ ಇದ್ದಾರೆ, ಆರೀತಿ ಪ್ರೈವೇಟ್ ಪ್ರಾಕ್ಟೀಸ್ ಮಾಡತಕ್ಕವರಿಗೆ ನಾವು ಕೆಲಸ ಕಡೆ ರೂರಲ್ ಸರ್ವೀಸ್ ಮಾಡತಕ್ಕವರಿಗೆ ಹಿಂದೆ ಅವರಿಗೆ ಕೆಲವು ಅಲೋಯನ್ಸ್ ಕೊಡುತ್ತಿದ್ದೆವು, ನಾನ್ ಪ್ರಾಕ್ಟೀಸ್ ಅಲೋಯನ್ಸ್ ಎಂದು ಕೊಡುತ್ತಿದ್ದೆವು ಮತ್ತು ವಸತಿ ಸೌಕರ್ಯ ಏನಿದೆ-ಈ ಮೂರನ್ನು ಕೊಟ್ಟರೆ ಬಹುಶಃ ಆ ಡಾಕ್ಟರುಗಳು ೧೦ ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎನ್ನುವಂಥ ವಿಚಾರದ ಬಗ್ಗೆ ಕೂಡ ಯೋಚನೆ ಮಾಡುತ್ತಾ ಇದ್ದೇವೆ ಈ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ತಪ್ಪಿಸುವುದಕ್ಕೆ ಒಂದು ಬಿಲ್ ತಯಾರಾಗಿದೆ. ಅದು ಕಾಯಿದೆ ಆದ ಮೇಲೆ ಅದನ್ನು ಎನ್‌ಫೋರ್ಸ್ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಪಟವಂಕ್ಕಿ ರತ್ನಾಕರ್.—ಪೇ ವಾರ್ಡ್ಸ್ ಬಗ್ಗೆ ಹೇಳಿ.

ಅಧ್ಯಕ್ಷರು.—ತಾವೂ ಕೂತಿ, ಆಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಆಮೇಲೆ ಸರ್ಕಾರಿ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಹಾಜರಿರಬೇಕಾದ ಕಾಲದಲ್ಲಿ ಹಾಜರಿಲ್ಲದೆ ಅವರು ಬೇರೆ ಕಡೆ ಹೋಗುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ಈ ಬಗ್ಗೆ ಸ್ವಲ್ಪ ಇನ್ಸ್‌ಪೆಕ್ಷನ್ ಜಾಸ್ತಿಮಾಡಿ ಅಂತಹ ಡಾಕ್ಟರುಗಳು ಯಾರ್‍ಯಾರು ಇದ್ದಾರೆ ಅಂಥವರ ಮೇಲೆ ಹೆಚ್ಚು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಬಹುಶಃ ನಮ್ಮ ಎಸ್ಟಿಮೇಟ್ಸ್ ಕಮಿಟಿಯವರು ಬೆಂಗಳೂರಿನಲ್ಲಿರತಕ್ಕಂಥ ಚಿನ್ನಸಂದ್ರ ಆಸ್ಪತ್ರೆಗೆ ಹೋದಂಥ ಕಾಲದಲ್ಲಿ ಡಾಕ್ಟರ್ ಇಲ್ಲದೆ ಅವರು ಲೀವ್ ಲೆಟರ್‌ನ್ನು ಜೂನಿಯರ್‌ಗೆ ಕೊಟ್ಟು ಹೊರಗಡೆ ಬೇರೆ ಕಾರ್ಯಗಳಿಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ಅಂತಹವರನ್ನು ಈಗಾಗಲೇ ವರ್ಗ ಮಾಡಿದ್ದಾರೆ, ಬಹುಶಃ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಸ್ವಲ್ಪ ಸೀರಿಯಸ್ಸಾಗಿ ತಮ್ಮ ಕರ್ತವ್ಯವನ್ನು ಮಾಡದೇ ಇರತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದಿದೆ. ಆರು ತಿಂಗಳಾಯಿತು, ಎನ್‌ಕ್ವೈರಿ ಮಾಡಲೇ ಇಲ್ಲ, ಮತ್ತೆ ರೀಇನ್‌ಸ್ಟೇಟ್ ಮಾಡಿ ಎನ್ನತಕ್ಕಂಥಾದ್ದು, ಮತ್ತೆ ಟ್ರಾಪ್ ಮಾಡತಕ್ಕಂಥ ಕೇಸ್‌ನಲ್ಲೂ ಕೂಡ ಇವತ್ತು ಎನ್‌ಕ್ವೈರಿಯಾಗಿ ವರದಿ ಬಂದಿಲ್ಲ, ೨ ವರ್ಷವಾಗಿದೆ ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದಾರೆ. ಅಂಥವೆಲ್ಲ ಸ್ವಲ್ಪಮಟ್ಟಿಗೆ ಕಡಿಮೆಯಾದರೆ ಈ ಡಾಕ್ಟರ್‌ಗಳು ಸರ್ಕಾರಿ ಸಂಬಳ ತೆಗೆದುಕೊಂಡು ತಮ್ಮ ಕೆಲಸವನ್ನು ಮಾಡದೆ ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡದೇ ಇರುವುದಕ್ಕೂ ಏನಾದರೂ ತೀಕ್ಷ್ಣವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ನಿಮ್ಮೆಲ್ಲರ ಸಹಕಾರವನ್ನು ನಾನು ಕೇಳುತ್ತಾ ಇದ್ದೇನೆ. ಸರ್ಕಾರಿ ದವಾಖಾನೆಗಳು ಕೇವಲ ಹೆಸರಿಗೆ ಮಾತ್ರ ಇಲ್ಲದೆ ಉತ್ತಮವಾಗಿರತಕ್ಕಂಥ ಸೇವೆಯನ್ನು ಹಳ್ಳಿಗಾಡಿನ ಜನರಿಗೆ ಒದಗಿಸಲಿ ಎನ್ನುವ ದೃಷ್ಟಿಯಿಂದ ಇದನ್ನು ವಿಕೇಂದ್ರೀಕರಣ ಮಾಡಿ ಇದಕ್ಕೆ ಹೆಚ್ಚಿನ ಹಣವನ್ನು ಔಷಧಿಗಳನ್ನು ಹೆಚ್ಚಿನ ಸಿಬ್ಬಂದಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತಾ ಇದ್ದೇವೆ.

ಜೊತೆಗೆ ಜಿಲ್ಲಾ ಪರಿಷತ್ತಿನವರು, ಮಂಡಲ ಪಂಚಾಯಿತಿಯವರು ಇವರ ಮೇಲೆ ಕಣ್ಣಿಡುತ್ತಾ ಇದ್ದಾರೆ ಎಲ್ಲಿ ಆಬ್ಸೆಂಟ್ ಆಗುತ್ತಾ ಇದ್ದಾರೆ, ಅವರ ಮೇಲೆ ಬರೆಯುತ್ತಾ ಇದ್ದಾರೆ ಆ ದಿಶೆಯಲ್ಲಿ ನಮ್ಮ ಕೆಲಸ ಸ್ವಲ್ಪಮಟ್ಟಿಗೆ ಹಗುರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವರು ಅದನ್ನು ದುರುಪಯೋಗ ಮಾಡಿಕೊಂಡು ತಮಗೆ ಬೇಕಾಗಿರತಕ್ಕಂಥ ಡಾಕ್ಟರ್ಸನ್ನು ತೆಗೆದುಕೊಳ್ಳಬೇಕು ಎಂತಲೂ, ಹಾಲಿ ಇರುವ ಡಾಕ್ಟರ್ಸ್ ಮೇಲೆ ಅಪಪ್ರಚಾರಗಳನ್ನೂ ಕೂಡ ಮಾಡತಕ್ಕದ್ದು ನಡೆದಿದೆ. ಇವೆರಡನ್ನೂ ನೋಡಿದಾಗ ನಾವು ಸ್ವಲ್ಪ ಮಟ್ಟಿಗೆ ಇದಕ್ಕೆ ಒಳಗಾಗದೆ ನಮ್ಮ ನಿತ್ಯ ಕರ್ತವ್ಯವನ್ನು ಮಾಡತಕ್ಕದ್ದರಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಈ ಇಲಾಖೆಯಲ್ಲಿ ಕೆಲಸಮಾಡತಕ್ಕಂಥ ಎಲ್ಲಾ ವರ್ಗದವರೂ ಸೇರಿಕೊಂಡರೆ ಸುಮಾರು ೩೨ ಸಹಸ್ರ ಜನ ಇದ್ದಾರೆ. ಪ್ರತಿಯೊಬ್ಬ ವೈದ್ಯರಿಗೂ ಸಂಬಂಧಪಟ್ಟವರು ಇಲ್ಲಿ ಇದ್ದೇ ಇರುತ್ತಾರೆ. ಅವರಿಂದ ಔಷಧಿ ತೆಗೆದುಕೊಂಡಿರುತ್ತಾರೆ. ಕೆಲವು ಸಂದರ್ಭದಲ್ಲಿ ನಾನು ಬಹಳ ಕಠಿಣವಾದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಕೆಲವರಿಗೆ ನಿಷ್ಠೂರವಾಗಿ ಮಾತನಾಡಬೇಕಾದ ಸಂದರ್ಭ ಬಂದಿದೆ. ಕೆಲವರಿಗೆ ಸ್ವಲ್ಪ ಕೋಪದಲ್ಲಿ ಮಾತನಾಡಿರುವುದು ಉಂಟು. ವೈಯಕ್ತಿಕವಾಗಿ ಯಾರ ಮೇಲೂ ನಾನು ಮಾತನಾಡಿಲ್ಲ. ಚೆನ್ನಾಗಿ ಕೆಲಸವಾಗಬೇಕೆಂಬ ಇಚ್ಛೆಯಿಂದ ಈ ರೀತಿ ನಡೆದುಕೊಂಡಿದ್ದೇನೆ. ವೈದ್ಯರುಗಳು ಉತ್ತಮವಾಗಿ ಕೆಲಸ ಮಾಡಬೇಕಾದರೆ, ನಾವು ಆ ನಿರೀಕ್ಷೆಯನ್ನು ಇಟ್ಟುಕೊಳ್ಳಬೇಕಾದರೆ ಇಂಥ ಒಂದು ಕಠಿಣ ನಿಲುವು ಇರಬೇಕಾಗುತ್ತದೆ. ಮನೆಗೆ ಬಂದವರನ್ನು ಆಫೀಸಿಗೆ ಬನ್ನಿ ಎಂದು ಹೇಳಿದ್ದೇನೆ. ಮನೆಯಲ್ಲಿ ಇಂಟರ್‌ವ್ಯೂಗಳನ್ನು ನಡೆಸುವುದಿಲ್ಲ. ನಾನು ಬೆಳ್ಳಿಗೆ ೯–೧೦ಕ್ಕೇ ಕಛೇರಿಗೆ ಬರುತ್ತೇನೆ. ಮನೆಯಲ್ಲಿ ಯಾರನ್ನೂ ಮಾತನಾಡಿಸುವುದಿಲ್ಲ, ಅವರ ವಿಚಾರಗಳನ್ನು ಕೇಳುವುದಿಲ್ಲ. ಇದರಿಂದ ಯಾರೂ ತಪ್ಪು ತಿಳಿದುಕೊಳ್ಳಬಾರದು. ಮನೆಯವರು ಕೂಡ ಆಸ್ಪತ್ರೆಯಲ್ಲಿರುತ್ತಾರೆ. ಅವರನ್ನು ಮುಂದೆ ಮಾಡಿಕೊಂಡು ನೋಡುವುದಕ್ಕೆ ಬರುವವರು ಇರುತ್ತಾರೆ. ಈ ದೃಷ್ಟಿಯಿಂದ ನಾನು ಆಫೀಸಿನಲ್ಲಿಯೇ ನೋಡಲು ಹೇಳಿರುತ್ತೇನೆ. ಮಾನ್ಯ ಸದಸ್ಯರುಗಳು ವೈಯಕ್ತಿಕವಾಗಿ ಹೆಚ್ಚಿನ ಆರೋಪಗಳನ್ನು ಮಾಡದೇ ಇರುವುದರಿಂದ ಲೋಪದೋಷಗಳು ಇಲ್ಲವೆಂದು ನಾನು ತಿಳಿದುಕೊಂಡಿಲ್ಲ. ಇರುವಂಥ ಲೋಪದೋಷಗಳನ್ನು ನನ್ನ ಗಮನಕ್ಕೆ ತಂದಕೂಡಲೇ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತೇನೆ. ಸಾರ್ವಜನಿಕರಿಗೆ ಆರೋಗ್ಯ ಕೊಡುವ ದೃಷ್ಟಿಯಿಂದ ನಾವು ನೀವು ಎಲ್ಲರೂ ಸೇರಿ ಕೆಲಸ ಮಾಡಬೇಕಾಗಿದೆ. ಜನಸಂಖ್ಯೆ ಸ್ಫೋಟವನ್ನು ಕಡಿಮೆ ಮಾಡಬೇಕು. ಹುಟ್ಟತಕ್ಕ ಮಕ್ಕಳು, ದಷ್ಟಪುಷ್ಟವಾಗಿ ಬೆಳೆಯುವುದಕ್ಕೆ ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಬೇಕು. ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ ಸುತ್ತಮುತ್ತ ಇರತಕ್ಕ ಪರಿಸರವನ್ನು ಶುದ್ಧಿ ಮಾಡುವ ಬಗ್ಗೆ ಕಾರ್ಪೊರೇಷನ್ನವರಿಗೆ ತಿಳಿಸಿದ್ದೇನೆ. ನಾನು ಸಾಧ್ಯವಾದಷ್ಟು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ ವಿಚಾರಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಬಿಟ್ಟು ಹೋಗಿರುವ ವಿಷಯಗಳ ಬಗ್ಗೆ ಜ್ಞಾಪಿಸಿಕೊಂಡು, ಉತ್ತರವನ್ನು ಕೂಡ ಬಯಸುತ್ತೇನೆ. ಆದ್ದರಿಂದ ನನ್ನ ಇಲಾಖೆಯ ಬೇಡಿಕೆಗಳಲ್ಲಿ ಅನುಮೋದನೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಆರೋಗ್ಯ ಇಲಾಖೆಯ ಚರ್ಚೆಯಲ್ಲಿ ಪಾಲ್ಗೊಂಡಿರತಕ್ಕ ಎಲ್ಲರೂ ಕೂಡ ಮಾನ್ಯ ರಾಚಯ್ಯನವರು ಏನಾದರೂ ಹೊಸ ಹೆಜ್ಜೆಗಳನ್ನು ನಮಗೆ ತೋರಿಸಬಹುದೆಂಬ ಭಾವನೆ ಇಟ್ಟುಕೊಂಡು, ಆಸೆಯಿಂದ ಉತ್ತರಕ್ಕಾಗಿ ಕಾಯುತ್ತಿದ್ದೆವು. ಆದರೆ, ಅವರು ತಣ್ಣೀರು ಹಾಕಿದಂತೆ ಮಾಡಿದ್ದಾರೆ, ಅನುಭವಿಗಳು, ಹಿರಿಯರೂ ಆದಂಥ ರಾಚಯ್ಯನವರು ಕ್ರಾಂತಿಕಾರಕವಾದ ಮಾರ್ಪಾಡುಗಳನ್ನು ಸಮಾಜದಲ್ಲಿ ತರಬಹುದು, ಅವರು ಸೋಷಿಯಲಿಸ್ಟ್ ಪರಂಪರೆಯಿಂದ ಬಂದವರು ಎಂದು ನಾನು ಹೇಳಿದ್ದೆ. ಅವರು ಯಥಾವತ್ತಾದ ಚಿತ್ರಣಗಳನ್ನು ನಮ್ಮ ಮುಂದೆ ಇಟ್ಟುಕೊಂಡು ಹೋಗಿದ್ದಾರೆ. ಗುಂಪಿನಲ್ಲಿ ಗೋವಿಂದ ಎನ್ನುವ ರೀತಿಯಲ್ಲಿ ಹೇಳಿಕೊಂಡು ಹೋಗಿದ್ದಾರೆ. ನಾನು ಕೆಲವು ವಿಚಾರಗಳನ್ನು ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಚುನಾವಣೆಯಿಂದ ಹಿಡಿದು ಇಲ್ಲಿಯವರೆಗೂ ಹೇಳಿಕೊಂಡು ಬಂದರೂ ಇದುವರೆಗೂ ರದ್ದುಮಾಡಿದಂತೆ ಕಾಣುವುದಿಲ್ಲ. ಆ ಕೆಲಸ ಅವ್ಯಾಹತವಾಗಿ ನಡೆಯುತ್ತಾ ಹೋಗುತ್ತಿದೆ. ಇತ್ತೀಚೆಗೆ ಇದರ ಬಗ್ಗೆ ನಿಖರವಾದ ಮಾರ್ಗಗಳನ್ನು ಹಾಕಿಕೊಟ್ಟಿದ್ದೀರಿ. ಹೆಚ್ಚುವರಿ ಸೀಟುಗಳನ್ನು ಇಟ್ಟುಕೊಂಡವರು ವಿಚಾರದಲ್ಲಿ ಯಾವುದೇ ರೀತಿಯ ಕ್ರಮ ಜರುಗಿಸದೇ, ಮೌನವೇ ಸಮ್ಮತಿ ಎನ್ನುವ ರೀತಿಯಲ್ಲಿ ಇದ್ದೀರಿ. ಇನ್ನು ಮುಂದೆ ೨೦ ಪರ್ಸೆಂಟ್ ಮಾತ್ರ ಹಾಗೆ ಇಟ್ಟುಕೊಂಡು ೮೦ ಪರ್ಸೆಂಟ್ ಸೀಟು ಹಂಚತಕ್ಕ ಅಧಿಕಾರವನ್ನು ಮ್ಯಾನೇಜ್‌ಮೆಂಟಿಗೆ ಕೊಡಬೇಕೆನ್ನುವ ವಿಷಯ ಸರ್ಕಾರದ ಗಮನದಲ್ಲಿದೆ ಎಂದು

ನಮಗೆ ಗೊತ್ತಾಗಿದೆ, ಈ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು ಇನ್ನು ಮಾದಕ ವಸ್ತುಗಳ ಸೇವನೆ ಮಾಡತಕ್ಕವರಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಜಿಲ್ಲಾಮಟ್ಟದಲ್ಲಿ ಇದಕ್ಕೆ ಒಂದು ಕೇಂದ್ರವನ್ನು ಮಾಡಬೇಕೆಂದು ಹೇಳಿದ್ದೆವು. ಆ ಬಗ್ಗೆಯೂ ಸಹ ತಾವು ಏನೂ ತಿಳಿಸಲಿಲ್ಲ. ಇನ್ನು ಹೆಣ್ಣು ಭ್ರೂಣ ಹತ್ಯೆ ಮಾಡತಕ್ಕ ಕೆಲಸ ಗುಪ್ತವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ ಎನ್ನುವ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೆ, ಆ ಬಗ್ಗೆ ತಾವು ತನಿಖೆಯನ್ನು ಮಾಡಿದ್ದೀರಾ ? ಅಂತಹ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆದಿದೆಯೇ ? ಈ ವಿಷಯ ಸುಳ್ಳೆ, ಅಥವಾ ಸತ್ಯವೇ, ಇದು ಯಾವ ಮಟ್ಟದಲ್ಲಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮಹಾರಾಷ್ಟ್ರದಲ್ಲಿ ಯಾವ ಮಟ್ಟದಲ್ಲಿದೆ ಎಂದು ಹೇಳಿದ್ದೆವು ಹಾಗೂ ಕರ್ನಾಟಕದಲ್ಲಿ ಆ ಬೆಳವಣಿಗೆ ಬೆಳೆಯುತ್ತಿದೆ ಎಂದು ಹೇಳಿದ್ದೆವು, ತಾವು ಇದಕ್ಕೆ ಹೆಚ್ಚು ಕೇಂದ್ರಿಕೃತವಾಗಿ ತಮ್ಮ ಅಭಿಪ್ರಾಯವನ್ನು ಹೇಳಲಿಲ್ಲ. ಇದರ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಕೇರಳದ ಮಾದರಿಯಲ್ಲಿ ಪೇ ವಾರ್ಡ್ಸ್ ಮಾಡಬೇಕೆಂದು ಹೇಳಿದ್ದೆ. ಅದರ ಬಗ್ಗೆಯೂ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಆದ್ದರಿಂದ, ನಾನು ಇದುವರೆಗೂ ಕೇಳಿರತಕ್ಕ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈ ಭ್ರೂಣ ಹತ್ಯೆ ತಪ್ಪಿಸುವುದಕ್ಕೋಸ್ಕರ ಮಹಾರಾಷ್ಟ್ರದಲ್ಲಿ ಒಂದು ಮಸೂದೆಯನ್ನು ತಂದಿದ್ದಾರೆ. ಇಡೀ ರಾಷ್ಟ್ರದಲ್ಲಿ ಎಲ್ಲಿಯೂ ತಂದಿಲ್ಲ. ಇಲ್ಲಿ ತನಿಖೆ ಮಾಡತಕ್ಕದ್ದರಲ್ಲಿ ವಿಶ್ವವಿದ್ಯಾನಿಲಯದ ಒಬ್ಬ ಪ್ರೊಫೆಸರ್ ಏನೋ ಆ ರೀತಿ ಮಾಡುತ್ತಾರೆಂದು ನನ್ನ ಗಮನಕ್ಕೆ ತಂದರು ಇಲ್ಲಿಯೂ ಕೂಡ ಅಂತಹ ಮಸೂದೆಯನ್ನು ತರುವುದು ಉತ್ತಮವೆಂದು ತೀರ್ಮಾನ ಮಾಡಿದ್ದೇವೆ. ಇಲ್ಲಿ ಹೆಚ್ಚಿಗೆ ನಡೆಯುತ್ತಿದೆಯೇ ಎನ್ನುವ ಬಗ್ಗೆ ಸರ್ಕಾರ ತನಿಖೆ ಮಾಡಿಲ್ಲ, ಆ ತರಹ ನಡೆಯುವುದಕ್ಕೆ ಮುಂಚೆಯೇ ಈ ಮಸೂದೆ ತರುವುದು ಸೂಕ್ತ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಮಾದಕ ವಸ್ತುಗಳ ಬಗ್ಗೆ ಹೇಳಿದ್ದಾರೆ. ಆ ವಿಷಯದಲ್ಲಿ ನಮ್ಮ ಪೊಲೀಸ್ ಇಲಾಖೆಯವರು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಮಾನಸಿಕ ಆರೋಗ್ಯ ಕೇಂದ್ರದಲ್ಲಿ ಮಾದಕ ವಸ್ತು ಸೇವನೆಗೊಳಗಾದವರಿಗೆ ಔಷಧಿ ಕೊಡುವಂಥಾದ್ದು ಇದೆ........

ಶ್ರೀ ಪಟವುಕ್ಕಿ ರತ್ನಾಕರ್.—ನಮ್ಮ ರಾಜ್ಯದಲ್ಲಿ ಮಾದಕ ವಸ್ತು ಸೇವನೆಗೊಳಗಾದವರಿಗೆ ಚಿಕಿತ್ಸೆ ಕೊಡತಕ್ಕದ್ದು ನಿಮಾನ್ಸ್ ಮತ್ತು ಸೇಂಟ್‌ಜಾನ್ಸ್ ಈ ಎರಡು ಕಡೆ ಮಾತ್ರ ಇದೆ. ಆದ್ದರಿಂದ ಎಲ್ಲಾ ಜಿಲ್ಲಾಕೇಂದ್ರಗಳಲ್ಲೂ ಈ ಚಿಕಿತ್ಸೆ ದೊರಕುವಂತೆ ಮಾಡಲು ತಜ್ಞ ವೈದ್ಯರನ್ನು ನೇಮಕ ಮಾಡತಕ್ಕ ಕೆಲಸವನ್ನು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನಸಿಕ ಆರೋಗ್ಯ ಕೇಂದ್ರಗಳಲ್ಲಿ ಮಾದಕ ವಸ್ತುಗಳ ಸೇವನೆಗೊಳಗಾದವರಿಗೆ ಚಿಕಿತ್ಸೆ ಮಾಡತಕ್ಕ ವ್ಯವಸ್ಥೆ ಇದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಈ ವ್ಯವಸ್ಥೆ ಮಾಡಲಿಕ್ಕೆ ನಮ್ಮಲ್ಲಿ ಅಷ್ಟೊಂದು ಸಿಬ್ಬಂದಿ ಇಲ್ಲದೇ ಇರುವುದರಿಂದ ಅದು ಸಾಧ್ಯವಾಗುವುದಿಲ್ಲ. ಇವೊತ್ತು ಮಾನ್ಯ ಸದಸ್ಯರು ಈ ಚಿಕಿತ್ಸೆ ಪಡೆಯಲು ಮಾನಸಿಕ ಆರೋಗ್ಯ ಕೇಂದ್ರ ಒಂದು ಇದೆ, ಮತ್ತೊಂದು ಪ್ರೈವೇಟ್‌ನಲ್ಲಿ ಸೆಂಟ್‌ಜಾನ್ಸ್ ಮೆಡಿಕಲ್ ಕಾಲೇಜ್ ಇದೆ ಎಂದುಹೇಳಿದ್ದಾರೆ. ಚಿಕ್ಕ ವಯಸ್ಸಿನವರು ಬಲಿಯಾಗತಕ್ಕ ಈ ಮಾದಕವಸ್ತುಗಳ ಹೆಸರುಗಳು ಏನಿವೆ, ಆ ಹೆಸರುಗಳನ್ನು ಹೇಳಲಿಕ್ಕೆ ನನಗೆ ಬರುವುದಿಲ್ಲ. ಅವುಗಳನ್ನು ಸಾಧ್ಯವಾದ ಮಟ್ಟಿಗೂ ಕಡಿಮೆ ಮಾಡುವುದಕ್ಕೆ ನಮ್ಮ ಡ್ರಗ್ಸ್ ಕಂಟ್ರೋಲರ್ ಅವರಿಗೆ ಹೇಳಿದ್ದೇವೆ, ಅದನ್ನು ಕಡಿಮೆಮಾಡಲಿಕ್ಕೆ. ಪ್ರಯತ್ನಮಾಡುತ್ತೇವೆ. ಅದನ್ನು ಯಾರು ಯಾರು ಮಾರಾಟ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪೊಲೀಸ್ ಇಲಾಖೆಯವರು ಸಹ ಪ್ರಯತ್ನ ಮಾಡುತ್ತಿದ್ದಾರೆ. ಈಗ ಅದಕ್ಕೆ ಸಂಬಂದಪಟ್ಟ ಮಾಹಿತಿ ನನ್ನ ಹತ್ತಿರ ಇಲ್ಲ. ಇನ್ನು ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಸಂಬಂದಪಟ್ಟ ಹಾಗೆ ಕ್ಯಾಪಿಟೇಷನ್ ಶುಲ್ಕದ ವಿಚಾರದಲ್ಲಿ ನಾನು ಕಳೆದ ಸಾರಿ ಹೇಳಿದ್ದೆ. ನಮ್ಮ ಆಕ್ಟ್ ಪ್ರಕಾರ ೧೧-೭-೧೯೮೪ ರಿಂದ ಅವರು ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡುವ ಹಾಗೆ ಇಲ್ಲ. ಈ ಮಧ್ಯೆ ಪ್ರೈವೇಟ್ ಕಾಲೇಜಿನವರು ತಮ್ಮ ಕಾಲೇಜುಗಳನ್ನು ನಡೆಸುವುದಕ್ಕೆ ಸಾಧ್ಯವಾದಷ್ಟು ಪ್ರವೇಶ ಶುಲ್ಕವನ್ನು ವಸೂಲು ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕಾದರೂ ಕೂಡ ಹೆಚ್ಚಿಸಬೇಕಾಗುತ್ತದೆ ಈ ಬಗ್ಗೆ ಒಂದು ಕಮಿಟಿಯನ್ನು ಮಾಡಬೇಕೆಂದು ಹೇಳಿದರು. ಆ ಕಮಿಟಿಯನ್ನು ಈಗಾಗಲೇ ನಮ್ಮ ಅಡೀಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ. ಇನ್ನೊಂದು ವಾರದಲ್ಲಿ ಅವರ ಒಂದು ರಿಪೋರ್ಟ್ ಬರುವುದು ಇದೆ. ಈ ಕ್ಯಾಪಿಟೇಷನ್ ಶುಲ್ಕವನ್ನು ೧೧-೭-೧೯೮೪ ರಿಂದ ಕಲೆಕ್ಟ್ ಮಾಡುವ ಹಾಗೆ ಇಲ್ಲ. ಆದ್ದರಿಂದ ೧೧-೭-೧೯೮೪ ಆದಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕೆ ಹೊರತು ಅಲ್ಲಿಯವರೆಗೆ ಏನೂ ಮಾಡಲಿಕ್ಕೆ ಆಗುವುದಿಲ್ಲ. ಇದು ನಾವು, ನೀವು ಮಾಡಿರತಕ್ಕ ಕಾನೂನು.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮಿಂದ ಬಿಗಿ ಕ್ರಮ ತೆಗೆದು ಕೊಳ್ಳಲು ಸಾಧ್ಯವಾಗುವುದಿಲ್ಲ. ಏತಕೆಂದರೆ ನಿಮಗಿಂತ ಹೆಚ್ಚು ಹಣವಂತರಿದ್ದಾರೆ. ನಿಮ್ಮನ್ನು ಮೀರುವಂಥವರು ಇದ್ದಾರೆ.

ಶ್ರೀ ಬಿ. ರಾಚಯ್ಯ.—ಅದಕ್ಕೋಸ್ಕರವಾಗಿಯೇ ನಾನು ಹೇಳಿದ್ದು, ಕೊಂಡುಕೊಳ್ಳುವುದಕ್ಕಾಗುವುದಿಲ್ಲವೆಂದು ಅಷ್ಟು ಮಾತ್ರ ಹೇಳಬಲ್ಲೆ ಏನು ಮಾಡುವುದು ಇಂಥ ಒಂದು ವಾತಾವರಣದಲ್ಲಿ ? ಡೆಮಾಕ್ರಸಿ ಎಂದು ಹೇಳಿದಮೇಲೆ ಈ ಮಸೂದೆಯನ್ನು ಈಗಿಂದೀಗಲೆ ತೆಗೆದುಹಾಕಬೇಕು, ಮಾಡಬೇಕು ಎಂದು ಹೇಳುವಾಗ ನಾನು ಒಬ್ಬನೇ ಡಿಕ್ಟೇಟರ್ ಅಲ್ಲವೆನ್ನುವುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಕ್ಯಾಪಿಟೇಷನ್ ಶುಲ್ಕ ಜಾರಿಗೆ ಬಂದಮೇಲೆ ಇಷ್ಟಕ್ಕೂ ನಾವು ನೀವು ಒಂದೇ ಇದ್ದೇವೆ. ತಾವು ಪ್ರಾಮಾಣಿಕರು, ತಮಗೆ ಹೇಳಿ ತೊಂದರೆ ಕೊಡುವುದು ಬೇಡ.

ಶ್ರೀ ಪಟವಾರಿ ರತ್ನಾಕರ್.—ಕ್ಯಾಪಿಟೇಷನ್ ಫೀಸ್ ತೆಗೆಯುವ ಬಗ್ಗೆ ಈ ಮನೆಯಲ್ಲಿ ಎಲ್ಲರೂ ಪರವಾಗಿದ್ದಾರೆ. ಆದರೆ ಅದಕ್ಕೆ ವಿರುದ್ಧವಾಗಿರುವ ಮಂತ್ರಿಗಳು ಯಾರು ಯಾರು ?

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರೂ ಕೂಡ ಕ್ಯಾಪಿಟೇಷನ್ ಫೀಸ್‌ನ್ನು ತೆಗೆಯುತ್ತೇವೆಂದು ಹೇಳಿಕೊಂಡೇ ಬರುತ್ತಿದ್ದಾರೆ. ಇದುವರೆವಿಗೂ ತೆಗೆಯಲಿಲ್ಲ. ನಾವು ಹೇಳಿದ್ದೇವೆ. ನಾವು ತೆಗೆಯಿತೆಂದರೆ ಮುಗಿದುಹೋಯಿತು. ಆ ಕೆಲಸ ಕೇಂದ್ರ ಸರ್ಕಾರದಿಂದಲೇ ಆಗಲಿಲ್ಲ ನನಗೆ ಓಟು ಕೊಡುವವರು ಈ ವಿಷಯವಾಗಿ ಓಟು ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಓಟಿಗೋಸ್ಕರವಾಗಿಯಲ್ಲ, ನೋಟಿಗೋಸ್ಕರವಾಗಿ ಮಾಡುವುದು.

ಶ್ರೀ ಬಿ. ರಾಚಯ್ಯ.—ಅದನ್ನು ನಮಗೆ ನೀವು ಹೇಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಕಷ್ಟ ಇದೆ ಎಂದು ನಿಮಗೇ ಹೇಳುತ್ತಿದ್ದೇನೆ. ಓಟಿಗೋಸ್ಕರವಾಗಿ ಮಾಡುವುದಲ್ಲ, ನೋಟಿಗೋಸ್ಕರವಾಗಿ ಮಾಡುವುದು ತಾವು ಹೆಲ್ತ್ ಮಿನಿಸ್ಟರ್ ಆಗುವುದಕ್ಕೂ ಮುಂಚಿನಿಂದಲೂ ಇದು ಒಂದು ದೊಡ್ಡ ಪಿಡುಗಾಗಿ ಜಾರಿಗೆ ಬಂದಿದೆ. ಈ ಪಿಡುಗನ್ನು ತೆಗೆಯಬೇಕು.

ಶ್ರೀ ಬಿ. ರಾಚಯ್ಯ.—ಹಿಂದೆ ಹೇಳುತ್ತಿದ್ದರಲ್ಲ. ಇದರಲ್ಲೇನು ಮುಚ್ಚುಮರೆ ಇಲ್ಲ. ಕ್ಯಾಪಿಟೇಷನ್ ಫೀಸ್ ವಿಚಾರದಲ್ಲಿ ಕೇಂದ್ರ ಸರ್ಕಾರದವರೂ ಸಹ ಬಹಳವಾಗಿ ಹೇಳುತ್ತಿದ್ದಾರೆ. ನಿಜ ಸೆಂಟ್ರಲ್ ಆಕ್ಟ್ ತರುತ್ತೇವೆ, ಕಾನೂನು ಮಾಡುತ್ತೇವೆ, ದೇಶಾದ್ಯಂತ ಮಾಡುತ್ತೇವೆನ್ನುವ ಅಭಿಪ್ರಾಯವನ್ನು ಅವರು ಕೊಟ್ಟಿರತಕ್ಕಂಥದ್ದು ನಿಜ, ಅವರು ಲೇಟ್ ಮಾಡುತ್ತಿದ್ದಾರೆ, ಇದಕ್ಕೆ ಏನು ಕಾರಣವಿದೆಯೋ ಗೊತ್ತಿಲ್ಲ. This is subject pertaining to the state. ಏತಕ್ಕೆಂದರೆ ಇದು ಸ್ಟೇಟ್ ಸಬ್ಜೆಕ್ಟ್. ತಮಗೆ ಗೊತ್ತಿರುವಹಾಗೆ ನಾವಾಗೇ ಸ್ಟೇಟ್ ಸಬ್ಜೆಕ್ಟ್ ಆಗಿ ತೆಗೆದುಕೊಂಡು ನಾವೇ ತೀರ್ಮಾನ ಮಾಡಿಕೊಳ್ಳಲು, ದಿನಾಂಕ ೧೧-೭-೮೩ರಂದು ಇದನ್ನು ರದ್ದು ಮಾಡತಕ್ಕಂಥ ಕಾನೂನನ್ನು ಮಾಡಿದ್ದೇನೆ. ಇದರಂತೆ The state has got smple powerers to completely eradicate this disease. ಈ ಪಿಡುಗನ್ನು ತಪ್ಪಿಸಲು ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡುತ್ತೇವೆಂದು ಹೊರಟತಕ್ಷಣ ನಾವೇ ಕಾಲೇಜುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ನಾವೇ ಕಾಲೇಜುಗಳನ್ನು ರನ್‌ಮಾಡಬೇಕಾಗುತ್ತದೆಂಬ ಪ್ರಶ್ನೆ ಬಂದರೆ, ಇದಕ್ಕೆಲ್ಲ ದುಡ್ಡು ಬೇಕಾಗುತ್ತದೆ. ಮತ್ತೆ ಇಷ್ಟೊಂದು ಕಾಲೇಜುಗಳು ಏತಕ್ಕೆ ಬೇಕು ಎನ್ನುವುದೂ ಕೂಡ ಎರಡನೇ ಪ್ರಶ್ನೆಯಾಗುತ್ತದೆ. ಈ ವರ್ಷ ಹೊಸದಾಗಿ ಒಂದು ಕಾಲೇಜಿಗೂ ಅನುಮತಿಯನ್ನು ಕೊಡಬಾರದೆಂದು ತೀರ್ಮಾನ ಮಾಡಿದ್ದೇವೆ. ೨೬ ಅಪ್ಲಿಕೇಷನ್ಸ್ ಬಂದಿವೆ. ಅವುಗಳ ಪೈಕಿ ಒಂದಕ್ಕೂ ಅನುಮತಿ ಕೊಡಕೂಡದೆಂದು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಒಬ್ಬರು ಸುಪ್ರೀಮ್ ಕೋರ್ಟಿಗೆ ಹೋದರು. ಸುಪ್ರೀಮ್ ಕೋರ್ಟಿನಲ್ಲೂ ಕೂಡ ಕೊಡುವುದಿಲ್ಲವೆಂದು ನಾವು ಆಬ್ಜೆಕ್ಟ್ ಮಾಡಿದರೂ ಕೂಡ, ಈ ಅರ್ಜಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸಂಬಂಧಪಟ್ಟದ್ದು, ಷೆಡ್ಯೂಲ್ಡ್ ಕ್ಯಾಸ್ಟ್‌ನವರು ರನ್‌ಮಾಡತಕ್ಕಂಥದ್ದು, ಬೇರೆಯವರಿಗೆ ಕೊಡುವುದಕ್ಕಾಗದಿದ್ದರೂ ಇವರಿಗೆ ಅನುಮತಿ ಕೊಡಬೇಕೆಂದು ಡೈರೆಕ್ಷನ್ ಕೊಟ್ಟರು. ಅದಕ್ಕೆ ಏನು ಮಾಡಬೇಕು ? ಈ ರೀತಿ ಆದುದಕ್ಕೆ ಕೊಡಬೇಕಾಯಿತೇ ವಿನಃ ಬೇರೆ ಯಾರಿಗೂ ಅನುಮತಿ ಕೊಟ್ಟಿದ್ದಿಲ್ಲ. ಜಾತಿಗೊಂದೊಂದು ಕಾಲೇಜು ಕೊಡುವುದಕ್ಕಾಗುವುದಿಲ್ಲ. ೨೬ ಅಪ್ಲಿಕೇಷನ್‌ಗಳಿಗೆ ಕಾನೂನು ವಿರುದ್ಧವಾಗಿ ಕಟ್ಟುನಿಟ್ಟಾಗಿ ಕೊಡುವುದಕ್ಕಾಗುವುದಿಲ್ಲವೆನ್ನುವ ಪಾಲಿಸಿಯನ್ನು ಪಾಲನೆಮಾಡಿಕೊಂಡು ಬಂದಿದ್ದೇವೆ. ಸುಪ್ರೀಮ್ ಕೋರ್ಟಿನ ಡೈರೆಕ್ಷನ್ ಬಂದಿರುವುದರಿಂದ ಒಂದಕ್ಕೆ ಮಾತ್ರ ಅನುಮತಿ ಕೊಟ್ಟಿದ್ದೇವೆ.

ಇದು ಕನ್‌ಕರೆನ್ಸ್ ಸಬ್ಜೆಕ್ಟ್ ಆಗಿರುವುದರಿಂದ ಒಪ್ಪಿಗೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ನೀವು ಕೇಂದ್ರದಲ್ಲಿ ಬಿಲ್ಲನ್ನು ತಂದರೆ ಒಳ್ಳೆಯದು. ಕಾಲೇಜುಗಳು ಇರುವುದು ನಮ್ಮಲ್ಲಿ, ಸೀಟುಗಳಿಗಾಗಿ ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬರುತ್ತಾರೆ. ಸೀಟುಗಳನ್ನು ಮಾರಾಟ ಮಾಡುತ್ತೇವೆಂದು ಹೊರಗಡೆ ಯವರು ಹೇಳಿಕೊಂಡರೂ ಬರ ತಕ್ಕವರು ಹೊರಗಡೆಯವರೇ ಜಾಸ್ತಿ. ಈ ಬಗ್ಗೆ ನಾವು ಕೆಟ್ಟ ಹೆಸರು ಏಕೆ ತೆಗೆದು ಕೊಳ್ಳಬೇಕು. ನೀವು ಬಿಲ್ ತನ್ನಿ, ಅದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಹೊಸ ಕಾಲೇಜುಗಳನ್ನು ತೆರೆಯಬಾರದೆಂದೂ, ಹೊಸ ಕಾಲೇಜುಗಳಿಗೆ ಅನುಮತಿ ಕೊಡುವುದಿಲ್ಲವೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಬಾಕಿ ಉಳಿದಿರತಕ್ಕ ೨೬ ಅರ್ಜಿಗಳು ಅರ್ಜಿಗಳು ಶ್ರೀಮಂತರವೋ ಅಥವಾ ಬಡವರವೋ ?

ಶ್ರೀ ಬಿ. ರಾಚಯ್ಯ.—ಜಾತಿಗೊಂದು ಕಾಲೇಜು ಎಂದು ಕೇಳುವಾಗ ನಮ್ಮಲ್ಲಿ ಬಹಳ ಜನ ಕೇಳುತ್ತಿದ್ದಾರೆ, ಹಿಂದುಳಿದವರು, ಮುಂದುವರಿದವರು ಎಲ್ಲರೂ ಇದ್ದಾರೆ. ಆ ಸಂಸ್ಥೆಗಳನ್ನು ನಡೆಸತಕ್ಕವರು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ನಿರೀಕ್ಷಿಸಿದ್ದು ಏನೆಂದರೆ, ಮಂತ್ರಿಗಳು ತಮ್ಮ ಉತ್ತರದಲ್ಲಿ ಮೆಡಿಕಲ್ ಕಾಲೇಜುಗಳಲ್ಲಿ ಅಡ್ಮಿಷನ್‌ಗೋಸ್ಕರ ಹೊಸ ನೀತಿಯನ್ನು ಏನು ಅನುಸರಿಸುತ್ತಾರೆಂಬ ಬಗ್ಗೆ ಹೇಳುತ್ತಾರೆ ಎಂದು. ಆದರೆ ಆ ಬಗ್ಗೆ ನಾನು ಈಗ ಕೇಳಬೇಕಾಗಿದೆ. ೧೧-೭-೮೮ರಕ್ಕೆ ಪೂರ್ವದಲ್ಲಿ ಹೊಸ ಕಾನೂನು ಜಾರಿಯಲ್ಲಿ ಬಾರದ ಕಾರಣ ನಿಮ್ಮ ಹಳೇ ಕಾನೂನು ಪ್ರಕಾರ ಎಂಟ್ರೆನ್ಸ್ ಎಕ್ಸಾಮಿನೇಷನ್‌ನ ಫಲಿತಾಂಶವನ್ನು ಪ್ರಕಟ ಮಾಡಿದ್ದೀರಿ. ಅಂದಾಗ ಎಷ್ಟು ಪ್ರಮಾಣದಲ್ಲಿ ಮೆರಿಟ್ ವಿದ್ಯಾರ್ಥಿಗಳನ್ನು ಡೊನೇಷನ್ ಬೇಸ್ಡ್ ಕಾಲೇಜುಗಳಲ್ಲಿ ಅಥವಾ ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿ ಸೇರಿಸುತ್ತೀರಿ? ಅವರಿಗೆ ಎಷ್ಟು ಸೀಟುಗಳನ್ನು ಕೊಡುತ್ತೀರಿ ? ಮೆರಿಟ್ ಕಂ ಡೊನೇಷನ್ ಸೀಟು ೫೦ ಸಾವಿರ ರೂಪಾಯಿಗೆ ಒಂದು ಎಂದು ಇದೆ. ಈ ಬಗ್ಗೆ ಅರ್ಜಿ ಹೊರಡಿಸಿ ಸೆಲೆಕ್ಟ್ ಮಾಡುವುದು ಕೂಡ ಡೈರೆಕ್ಟರ ಮತಿಯಿಂದ ಆಗುತ್ತದೆ. ಆಗ ಅವರ ಗತಿ ಏನು ? ೧೧-೭-೮೮ರಕ್ಕೆ ಪೂರ್ವದಲ್ಲಿ ಎಂಟ್ರೆನ್ಸ್ ಎಕ್ಸಾಮಿನೇಷನ್ ರಿಸಲ್ಟ್ ಬಂದಿದೆಯಲ್ಲ, ಅದನ್ನು ಯಾವ ರೀತಿ ತೀರ್ಮಾನ ಮಾಡುತ್ತೀರಿ? ಫೀಸ್ ಸ್ಟ್ರಕ್ಚರನ್ನು ಅನೌನ್ಸ್ ಮಾಡಿಲ್ಲ. ಸೀಟನ್ನು ಭರ್ತಿ ಮಾಡಿಕೊಳ್ಳಬೇಕಾದರೆ ಎಷ್ಟು ಫೀಸ್ ತೆಗೆದುಕೊಂಡು ಭರ್ತಿ ಮಾಡಿಕೊಳ್ಳಬೇಕೆಂಬ ಪ್ರಶ್ನೆ ಇದೆ. ಸದ್ಯಕ್ಕೆ ಹೋದ ಸಾರಿಯ ಹಾಗೆ ೬೦; ೪೦ ಎಂದು ಇಡುತ್ತೀರೋ ಅಥವಾ ಕ್ಯಾಪಿಟೇಷನ್ ಅಬಾಲಿಷ್ ಆಗಿದೆ ಎಂದು ಎಲ್ಲ ಸೀಟುಗಳನ್ನೂ ಮ್ಯಾನೇಜ್‌ಮೆಂಟಿಗೆ ಕೊಡುತ್ತೀರೋ? ಆದ್ದರಿಂದ ನಾನು ಹೇಳುವುದೇನೆಂದರೆ, ಹೋದಸಾರಿ ಏನು ಪಾಲಿಸಿ ಇಟ್ಟಿದ್ದೀರಿ ಅದೇ ರೀತಿ ಇಟ್ಟರೆ ಸರಿ ಹೋಗುತ್ತದೆ. ಇಲ್ಲದಿದ್ದರೆ ಮಕ್ಕಳಿಗೆ ತೊಂದರೆಯಾಗು ತ್ತದೆ. ಪೋಸ್ಟ್ ಗ್ರಾಜುಯೇಷನ್ ಸೀಟುಗಳನ್ನು ಎಂಟ್ರೆನ್ಸ್ ಟೆಸ್ಟ್ ಕಂಡಕ್ಟ್‌ಮಾಡಿ ಮೆರಿಟ್ ಮೇಲೆ ಕೊಡಬೇಕು. ಪ್ರೈವೇಟ್ ಮ್ಯಾನೇಜ್‌ಮೆಂಟಿನವರಿಗೆ ಎಲ್ಲವನ್ನು ಕೊಡದೆ ೬೦;೪೦ ಅಥವಾ ೫೦;೫೦ ಸೀಟುಗಳನ್ನು ರಿಟನ್‌ಟೆಸ್ಟ್‌ನಲ್ಲಿ ಪಾಸ್ ಆದವರಿಗೆ ರೋಸ್ಟರ್ ಸಿಸ್ಟಂ ಅನ್ನು ಮೆಯಿಂಟೇನ್ ಮಾಡಿ ಕೊಡುತ್ತೀರಾ ? ಗುಲ್ಬರ್ಗಾದಲ್ಲಿ ಔಟ್ ಪೇಷಂಟ್ ವಾರ್ಡ್ ಕಟ್ಟಿಸುತ್ತೇವೆಂದು ಹೇಳಿದ್ದಿರಿ. ಈ ಲಾಗಾಯ್ತು ಅದನ್ನು ಕಟ್ಟಿಸಲಿಲ್ಲ. ಇಡೀ ಗುಲ್ಬರ್ಗ ಜಿಲ್ಲೆಗೆ ಅದು ಒಂದೇ ದೊಡ್ಡ ಆಸ್ಪತ್ರೆ ಅದರ ಬಗ್ಗೆ ಯಾವ ರೀತಿ ಮಾಡುತ್ತೀರಿ ? ಫೀಸ್ ಸ್ಟ್ರಕ್ಚರ್ ಏನು? ಅಡ್ಮಿಷನ್ ಪಾಲಿಸಿ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಈಗಿನ ಕಾಯ್ದೆ ಪ್ರಕಾರ ನಾವು ೪೦ : ೬೦ ಎಂದು ಏನಿದೆ ಅದನ್ನು ಎಲ್ಲಿ ಯಾರು ಯಾರು ಸರ್ಕಾರಿ ಆಸ್ಪತ್ರೆಗಳನ್ನು ಉಪಯೋಗಿಸುತ್ತಾರೆ ಅವರಿಗೆ ಇನ್‌ಸಿಸ್ಟ್ ಮಾಡುತ್ತೇವೆ. ಯಾರು ತಮ್ಮ ಸ್ವಂತ ಆಸ್ಪತ್ರೆ ಕಟ್ಟಿಕೊಂಡು ಕ್ಲಿನಿಕಲ್ ಬೇಸಿಸ್ ಮೇಲೆ ಮಾಡುತ್ತಾರೆ ಅವರಿಗೆ ೨೦ ಪರ್ಸೆಂಟ್ ಮಾಡುತ್ತೇವೆ ಫೀಸ್ ಸ್ಟ್ರಕ್ಚರ್ ವಿಷಯದಲ್ಲಿ ಸಮಿತಿ ಮಾಡಿದ್ದೇವೆ. ಅದರ ವರದಿ ಬರುವ ವರೆಗೆ ಈಗಿರತಕ್ಕ ಫೀಸನ್ನು ಅವರು ತೆಗೆದುಕೊಳ್ಳಬೇಕು; ಹೆಚ್ಚುವರಿ ಆದದ್ದನ್ನು ವಿದ್ಯಾರ್ಥಿಗಳು ಕೊಡುವುದಕ್ಕೆ ಒಪ್ಪಬೇಕೆಂಬ ಕರಾರಿನ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಮೆರಿಟ್ ಕಂಡೊನೇಷನ್ ಬೇಸಿಸ್ ಮೇಲೆ ಬಂದವರು ೫೦ ಸಾವಿರ ರೂಪಾಯಿ ಡೊನೇಷನ್ ಕೊಟ್ಟಿರುತ್ತಾರೆ. ಅವರಿಗೂ ಒಂದೇ ಫೀಜು ಮತ್ತು ಪ್ರೈವೇಟ ಮ್ಯಾನೇಜ್‌ಮೆಂಟಿನಲ್ಲಿ ಡೊನೇಷನ್ ಎಂದು ಏನು ಕೊಡುತ್ತಿದ್ದಾರೆ ಅವರಿಗೂ ಅದೇ: ಫೀಜು ತೆಗೆದ ಕೊಳ್ಳುತ್ತಿದ್ದಾರೆ. ಮೆರಿಟ್ ಮೇಲೆ ಸೆಲೆಕ್ಟ್ ಮಾಡಿದವರಿಗೆ ಫೀಜ್ ಕಡಿಮೆ ಮಾಡುತ್ತೇವೆಂದ

ಕೌನ್ಸಿಲ್‌ನಲ್ಲಿ ಹೇಳಿದ್ದಿರಿ. ಆ ಬಗ್ಗೆ ಸುತ್ತೋಲೆ ಹೊರಡಿಸಲಿಲ್ಲ. ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿ ಯಾವ ರೀತಿ ತೆಗೆದುಕೊಳ್ಳುತ್ತಿದ್ದಾರೋ ಅದೇ ರೀತಿ ಮೆರಿಟ್-ಕಂ-ಡೊನೇಷನ್‌ಅನ್ನು ವಿದ್ಯಾರ್ಥಿ

12-00 Noon.

ಗಳಿಂದ ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ತಾವು ಯಾವಾಗ ಜಿ.ಓ. ಇಷ್ಯೂ ಮಾಡುತ್ತೀರಿ? ಆದೇಶ ಯಾವಾಗ ಹೊರಡಿಸಿರುತ್ತೀರಿ? ಕ್ಯಾಪಿಟೇಷನ್ ಫೀಸ್ ಹೋದಮೇಲೆ ಮೆರಿಟ್ ವಿದ್ಯಾರ್ಥಿಗಳಿಗೂ ೨೦ ಸಾವಿರ ರೂಪಾಯಿ, ೩೦ ಸಾವಿರ ರೂಪಾಯಿ ಕೊಡಿ ಎಂದರೆ ತೊಂದರೆಯಾಗುತ್ತದೆ. ಇದನ್ನು ಯಾವರೀತಿ ಯೋಚನೆ ಮಾಡಿದ್ದೀರಿ ಎಂದು ಹೇಳಿದರೆ ಸರಿ. ಅವರಿಗೆ ನೀವು ಕಳುಹಿಸಿದ ವಿದ್ಯಾರ್ಥಿಗಳಲ್ಲಿ ಕಡಿಮೆ ಬಿದ್ದರೆ ಹೊರಗಡೆಯಿಂದ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಮುಂದೆ ಗೊಂದಲ ಏಳುತ್ತದೆ. ಆದ್ದರಿಂದ ಸ್ಪಷ್ಟವಾಗಿ ತಮ್ಮ ನಿಲುವನ್ನು ಹೇಳಿದರೆ ಸರಿಹೋಗುತ್ತದೆ.

ಶ್ರೀ ಬಿ. ರಾಚಯ್ಯ.—ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ರಾಜ್ಯಾಂಗಬದ್ಧವಾಗಿ ಪ್ರೈವೇಟ್ ಮ್ಯಾನೇಜ್‌ಮೆಂಟ್ ಇರುವ ಕಾಲೇಜುಗಳಲ್ಲಿ ರಿಸರ್ವೇಷನ್ ಕೊಡಬೇಕಾಗುತ್ತದೆ. ಅದರ ಫೀಸನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಭರ್ತಿ ಮಾಡುತ್ತೇವೆ. ಹಣ ಕಟ್ಟುವುದಕ್ಕೆ ಸಾಧ್ಯವಾಗದೇ ಇರುವ ಬಡವರಿಗೆ ಬ್ಯಾಂಕುಗಳ ಮುಖಾಂತರ ಸಾಲ ಕೊಡಿಸುವ ಏರ್ಪಾಡು ಮಾಡುತ್ತಿದ್ದೇವೆ. ಮೆರಿಟ್‌ನಿಂದ ಆರಿಸಿ ಬಂದಿರುವವರಿಗೂ ಮ್ಯಾನೇಜ್‌ಮೆಂಟ್ ಕಡೆಯಿಂದ ಬಂದಿರುವವರಿಗೂ ತಾರತಮ್ಯ ಮಾಡುವುದಕ್ಕೆ ಸಾಧ್ಯವೇ ಹೇಗೆ ಎಂದು ಯೋಚನೆ ಮಾಡಿ ಎಂದು ಕಮಿಟಿಗೆ ತಿಳಿಸಿದ್ದೇನೆ. ಹೊರಗಡೆಯಿಂದ ಬರತಕ್ಕವರಿಗೆ ಮತ್ತು ಕರ್ನಾಟಕ ರಾಜ್ಯದಲ್ಲಿರುವವರಿಗೆ ಯಾವರೀತಿ ಸೀಟ್‌ಗಳನ್ನು ಕೊಡಬೇಕು ಎಂಬ ಬಗ್ಗೆ ನಿಮ್ಮ ಅಭಿಪ್ರಾಯ ಕೊಡಿ ಎಂದು ಕಮಿಟಿಗೆ ಹೇಳಿದ್ದೇನೆ. ವರದಿ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜುಲೈ ೧೫ಕ್ಕೆ ಕಾಲೇಜುಗಳು ಪ್ರಾರಂಭವಾಗುತ್ತವೆ. ಆಗ ಯಾವರೀತಿ ಮಾಡುತ್ತೀರಿ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಂತ್ರಿಗಳು ಹೇಳುವಾಗ ಬಡವರಾಗಿದ್ದರೆ ಪರಿಶೀಲನೆ ಮಾಡಿ ಫೀಸ್ ಕಡಿಮೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಅಂದರು. ಮತ್ತೆ ಬ್ಯಾಂಕ್‌ನಲ್ಲಿ ಸಾಲ ಕೊಡಿಸುತ್ತೇವೆ ಅಂದರು. ಇದು ಯಾವ ನೀತಿ? ಪಟ್ಟಿ ಮಾಡುವಾಗ ತಿರುಗಿ ರಾಜಕೀಯ ಆಗಬೇಕಾ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಫ್ರೀಷಿಪ್, ಅರ್ಧ ಫ್ರೀಷಿಪ್ ಕೊಡುತ್ತಾ ಇಲ್ಲವೇ? ಬಡವರು ಯಾರಿದ್ದಾರೆ ಅವರಿಗೆ ಫ್ರೀಷಿಪ್ ಕೊಡುತ್ತಿದ್ದೇವೆ, ಅದೇರೀತಿ ಇಲ್ಲೂ ಕೂಡ ಸರ್ಕಾರದಿಂದ ಕೊಡುವುದಕ್ಕೆ ಆಗದೇ ಇದ್ದಾಗ ಸಾಲದ ರೂಪದಲ್ಲಿ ಕಡಿಮೆ ಬಡ್ಡಿದರದಲ್ಲಿ ಕೊಡಿಸಿ ಸುಲಭವಾಗಿ ಸಾಲ ವಾಪಸ್ ಮಾಡುವುದಕ್ಕೆ ಅವಕಾಶವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಫೀಸ್ ವಿಷಯದಲ್ಲಿ ಎರಡು ರೀತಿ ಮಾಡಿದರೆ ಕಾನ್‌ಸ್ಟಿಟ್ಯೂಷನಲ್ ಪ್ರಾಬ್ಲಂ ಬರುತ್ತದೆ ಎಂದು ಅದನ್ನು ಲೀಗಲ್ಲಾಗಿ ಯೋಚನೆ ಮಾಡಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರಾದ ಪಟಮಕ್ಕಿ ರತ್ನಾಕರ್ ಅವರು ಭಾಷಣ ಮಾಡುತ್ತಾ ಪೋಸ್ಟ್ ಗ್ರಾಜುಯೇಷನ್‌ನಲ್ಲಿ ಸೀಟು ಕೊಡುವಾಗ ಹಳ್ಳಿ ಮಕ್ಕಳಿಗೆ ಅವಕಾಶ ಕೊಡಬೇಕೆಂದು ಹೇಳಿದರು. ಹಳ್ಳಿಯಿಂದ ಬರತಕ್ಕ ಅಗ್ರಿಕಲ್ಚರಿಸ್ಟ್ ಮಕ್ಕಳಿಗೆ ಅಗ್ರಿಕಲ್ಚರ್ ಕಾಲೇಜಿನಲ್ಲಿ ೧೦ ಪರ್ಸೆಂಟ್ ಸೀಟ್ ಕೊಡುವಂತೆ ಮೆಡಿಕಲ್ ಕಾಲೇಜಿನಲ್ಲೂ ಅವಕಾಶ ಕೊಡಬೇಕೆಂದು ಯೋಚನೆ ಮಾಡಿದ್ದೆ. ಆದರೆ ಕಾನೂನು ಪ್ರಕಾರ ಅದು ಬರುವುದಿಲ್ಲ ಎಂದು ಹೇಳಿದ್ದಾರೆ. ಹಳ್ಳಿಗಾಡಿನ ಬಡವರ ಮಕ್ಕಳಿಗೆ ಯಾವರೀತಿ ಸಹಾಯ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡುತ್ತೇವೆ. ಎಲ್ಲದಕ್ಕೂ ಕಾನೂನು ಪ್ರಕಾರ ಆಗುವುದಿಲ್ಲ ಅಂದರೆ ಬಡವರಿಗೆ ಹೇಗೆ ಸಹಾಯ ಮಾಡುವುದು ಬಡವರಿಗೂ ಸಹಾಯ ಮಾಡಬೇಕಾಗುತ್ತದೆ. ಆಮೇಲೆ ಫೀಸ್ ಕಟ್ಟುವುದಕ್ಕೆ ಬಡಮಕ್ಕಳಿಗೆ ಅನುಕೂಲ ಇಲ್ಲದಿದ್ದಾಗ ಸರ್ಕಾರದಲ್ಲಿ ಹಣ ಇಲ್ಲ ಎಂದಾಗ ಸಾಲದ ರೂಪದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇವೆ. ಫೀಸ್ಟ್ರಕ್ಚರ್‌ನಲ್ಲಿ ಬಹಳ ಹೆಚ್ಚಿಸಿದರೆ ಮೆರಿಟ್ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ೫೦ ಸಾವಿರ ರೂಪಾಯಿ ಕೊಟ್ಟು ಸೀಟು ಪಡೆಯುವುದಕ್ಕೆ ಅವಕಾಶ ಇದೆ. ಅಂಥ ಕಡೆಯಲ್ಲಿ ಯಾವ ರೀತಿ ಸ್ವಲ್ಪಮಟ್ಟಿಗೆ ರಿಯಾಯಿತಿ ಕೊಡಬೇಕು ಎಂಬ ಬಗ್ಗೆ ಕಮಿಟಿಯವರು ಯೋಚನೆ ಮಾಡಬೇಕೆಂದು ಹೇಳಿದ್ದೇನೆ. ಕಮಿಟಿ ಸಧ್ಯದಲ್ಲೇ ವರದಿ ಕೊಡುತ್ತದೆ, ಅಲ್ಲಿಂದ ವರದಿ ಬಂದತಕ್ಷಣ ತೀರ್ಮಾನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಲೆನಾಡು ಪ್ರದೇಶ ಏನು ಇದೆ. ಅದರಲ್ಲೂ ಕೂಡ ಶಿವಮೊಗ್ಗದವರು ಸುಮಾರು 20 ವರ್ಷಗಳಿಂದ ಅಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಶ್ರೀ ಜೆ.ಹೆಚ್. ಪಟೇಲರು ಕೇಳಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—1979ರಿಂದ ಶಿವಮೊಗ್ಗಕ್ಕೆ ಮೆಡಿಕಲ್ ಕಾಲೇಜು ಕೊಡಬೇಕೆಂಬ ಬೇಡಿಕೆ ಸರ್ಕಾರದ ಮುಂದೆ ಇದೆ. ನಾರ್ತ್ ಕೆನರಾದು ಬೇಡಿಕೆ ಇದೆ. ಚಿಕ್ಕಮಗಳೂರಿನದು ಬೇಡಿಕೆ ಇದೆ. ಈ ಜಿಲ್ಲೆಗಳಲ್ಲಿ ಬೇಡಿಕೆ ಬಹಳ ದಿವಸಗಳಿಂದ ಇದೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂಬ ಪಾಲಿಸಿ ಸರ್ಕಾರದಲ್ಲಿ ಇದೆ, ಅದರ ಪ್ರಕಾರ ಪರಿಶೀಲನೆ ಮಾಡುತ್ತೇವೆಂದು ಅವರು ಹೇಳಿದರು. ಆದ್ದರಿಂದ 1979ರಿಂದ ಶಿವಮೊಗ್ಗದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡಬೇಕೆಂಬ ಬೇಡಿಕೆ ಏನು ಸರ್ಕಾರದ ಮುಂದೆ ಇದೆ ಅದನ್ನು ಪರಿಶೀಲನೆ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇನ್ನು ಮೇಲೆ ನಾವು ಮೆಡಿಕಲ್ ಕಾಲೇಜನ್ನು ಕೊಡಬೇಕಾದರೆ ಅವರೇ ಆಸ್ಪತ್ರೆಯನ್ನು ಕಟ್ಟಿಸಬೇಕು. ಸರ್ಕಾರದ ಆಸ್ಪತ್ರೆಯನ್ನು ಕೇಳಕೂಡದು ಎಂಬ ಒಂದು ನೀತಿಯನ್ನು ಹಾಕಿಕೊಂಡಿದ್ದೇವೆ. ಕ್ಯಾಪಿಟೇಷನ್ ಫೀಸ್ ಕಲೆಕ್ಟ್ ಮಾಡಬಾರದು. ಹೊಸ ನಿಯಮಗಳಿಗೆ ಅನುಗುಣವಾಗಿ ಅವರು ನಡೆಸುವುದಾದರೆ ಅವುಗಳನ್ನು ಆಮೇಲೆ ಪರಿಶೀಲನೆ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದೂ ಕೂಡ ಕೇಂದ್ರ ಸರ್ಕಾರದ ನೀತಿಗೆ ಅನುಗುಣವಾಗಿ ಇರಬೇಕೇ ವಿನಃ ಬೇರೆ ರೀತಿ ಇರಕೂಡದು. ವರ್ಷಂಪ್ರತಿ ಎಷ್ಟೊಂದು ಡಾಕ್ಟರುಗಳನ್ನು ಪ್ರೊಡ್ಯೂಸ್ ಮಾಡುತ್ತಿದ್ದಾರೆ ಎನ್ನುವ ವಾದ ಸಹ ಇದೆ. ಇವತ್ತು ಇವರು ತಾಂತ್ರಿಕ ವೈದ್ಯರು ಆಗಿರುವುದರಿಂದ ಅವರು ಖಾಸಗಿ ನರ್ಸಿಂಗ್ ಹೋಂಗಳನ್ನು ನಡೆಸಬಹುದು. ಹೊರ ದೇಶಗಳಿಗೆ ಹೋಗಿ ಕೆಲಸ ಮಾಡಬಹುದು. ಸ್ವಂತ ಪ್ರಾಕ್ಟೀಸ್ ಮಾಡಬಹುದು. ಅಲ್ಲಿ ನಿರುದ್ಯೋಗ ಸಮಸ್ಯೆ ಬರುವುದಿಲ್ಲ. ಡಾ॥ ಶಿವ್ವೇಸ್ವಾಮಿಯವರು 851 ಜನ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆಂದು ಹೇಳಿದರು. ಅದು ತಪ್ಪು ವರದಿ ಆಗಿದೆ. ಹೊರಗಿನಿಂದ ಬಂದ ಜನ ಇಲ್ಲಿ ಪಾಸ್ ಮಾಡಿಕೊಂಡು ಹೊರಗಡೆ ಹೋಗಿರುತ್ತಾರೆ. ಇನ್ನು ಮುಂದೆ ಆಸ್ಪತ್ರೆಗಳನ್ನು ಅವರೇ ಕಟ್ಟಿಸಿಕೊಳ್ಳದಿದ್ದರೆ ಅವರಿಗೆ ಅವಕಾಶ ಕೊಡುವುದಿಲ್ಲ. ಇನ್ನು ಮೇಲೆ ಯಾರು ಕ್ಲಿನಿಕಲ್ ಫೆಸಿಲಿಟೀಸ್ ಆಸ್ಪತ್ರೆಗಳಲ್ಲಿ ಉಪಯೋಗಿಸುತ್ತಾರೆ ಅವರ ಮುಂದಿನ ಎಕ್ಸ್‌ಪ್ಯಾಂಡೆಡ್ ಪ್ರೋಗ್ರಾಂಗಳಿಗೆ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಅನ್ನು ಅವರೇ ಕೊಡಬೇಕು. ಎಕ್ವಿಪ್‌ಮೆಂಟ್‌ಗಳನ್ನು ಅವರೇ ತರಬೇಕು, ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರು ಔಟ್ ಪೇಷೆಂಟ್ ವಾರ್ಡ್ ಕೊಡಿಸಿ ಎಂದು ಏನು ಹೇಳಿದ್ದಾರೆ ಅದರ ಬಗ್ಗೆ ಹೇಳಬೇಕಾದರೆ ಗುಲ್ಬರ್ಗಾದಲ್ಲಿ ಯಾರು ಕ್ಲಿನಿಕಲ್ ಫೆಸಿಲಿಟೀಸ್ ಉಪಯೋಗಿಸುತ್ತಿದ್ದಾರೆ, ಅವರು ಅದನ್ನು ಮಾಡಬೇಕು. ಅದನ್ನು ಸರ್ಕಾರ ಮಾಡಲು ಬರುವುದಿಲ್ಲ. ಅವರು ಆಸ್ಪತ್ರೆಗಳನ್ನು ಕಟ್ಟಿಕೊಂಡು ಹೆಚ್ಚಿನ ಫೀಸನ್ನು ಕಲೆಕ್ಟ್ ಮಾಡುವುದಿಲ್ಲವೆಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಉತ್ತರಕ್ಕನುಗುಣವಾಗಿ ಉದ್ಭವಿಸಿದ ಪ್ರಶ್ನೆ ಇದು. ಅದಕ್ಕಾಗಿ ಮಾನ್ಯ ಮಂತ್ರಿಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವು ಹೇಳಿರತಕ್ಕ ಕಂಡಿಷನ್‌ಗಳನ್ನು ನಾವು ಪೂರ್ತಿ ಮಾಡಿದರೆ ತಾವು ಅನುಮತಿ ಕೊಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್.—ನಮ್ಮ ಶಾಸಕರುಗಳಿಗೆ ಔಷಧಿಗಳನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಮನೆಯವರಿಗೆ ಬೇಕಾದರೆ ಔಷಧಿಗಳು ಸಿಗುತ್ತಿಲ್ಲ. ಯಾವ ಆಸ್ಪತ್ರೆಯಲ್ಲೂ ಶಾಸಕರಿಗೆ ಬೇಕಾದಂತಹ ಔಷಧಿಗಳು ಸಿಗುತ್ತಿಲ್ಲ. ಇಲ್ಲಿ ಇರತಕ್ಕ ಡಿಸ್‌ಪೆನ್ಸರಿಯಲ್ಲಿ ನೋಡಿದರೆ ಅಲ್ಲಿ ಹೊಲಸು ಅರಿವೆ ಹಾಕಿದ್ದಾರೆ. ಅಲ್ಲಿ ಸಿರಿಂಜ್‌ಗಳು ಇಲ್ಲ ಮೆಡಿಸನ್‌ಗಳು ಇಲ್ಲ. ಅದನ್ನು ತೆಗೆದುಹಾಕಬೇಕಾಗಿದೆ ಈಗ ಶಾಸಕರಿಗೆ ಯಾವ ಔಷಧಗಳೂ ಸಿಗುತ್ತಿಲ್ಲ. ಫ್ರೀ ಮೆಡಿಷನ್ ಕೊಡುತ್ತೇವೆಂದು ಹೇಳಿದ್ದ ಮೇಲೆ ಅವೆಲ್ಲವನ್ನು ತಂದು ಇಡಬೇಕು. ಇನ್‌ಸೂಲಿನ್, ಪಿರೂಸಿನ್ ಇವೆಲ್ಲ ಶಾಸಕರಿಗೆ ಬೇಕಾಗುತ್ತದೆ. ಫಾರಿನ್ ಡ್ರಗ್ಸ್ ಬೇಕಾಗುತ್ತದೆ. ಇದನ್ನು ಯಾವ ಡಾಕ್ಟರು ಸಹ ತರಿಸಿಕೊಡುವುದಿಲ್ಲ. ಇದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿ. ಎರಡನೆಯದಾಗಿ ಹುಬ್ಬಳ್ಳಿಯಲ್ಲಿ ನೀರಿನ ಬಗ್ಗೆ ಆಗಿರುವಂತ ತೊಂದರೆಯ ಬಗ್ಗೆ ನಿನ್ನೆ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಬಂದಿದೆ.

ನೀರಿನಲ್ಲಿ ಹುಳು ಇದ್ದು, ಆ ನೀರನ್ನೇ ಜನರು ಕುಡಿಯುತ್ತಿದ್ದಾರೆ, ಇದರಿಂದ ಜನರಿಗೆ ಅನಾರೋಗ್ಯವಾಗುತ್ತದೆ ಎಂಬ ಅರಿವು ನಿಮ್ಮ ಆರೋಗ್ಯ ಅಧಿಕಾರಿಗಳಿಗೆ ಇಲ್ಲವೇ? ನಿಮ್ಮ ಆರೋಗ್ಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇದು ಪುರಸಭೆಯವರ ಕೆಲಸ ಎಂಬುದು ನಿಜ. ಮಲಿನವಾಗಿರತಕ್ಕ ನೀರನ್ನು, ಹುಳು ಇರತಕ್ಕ ನೀರನ್ನು ಸತತವಾಗಿ ತಿಂಗಳುಗಟ್ಟಲೆ ಜನರಿಗೆ ಕೊಡುತ್ತಿದ್ದಾರೆ. ಆದರೆ ಆ ಬಗ್ಗೆ ನಿಮ್ಮ ಆರೋಗ್ಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅವರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಬಿ. ರಾಚಯ್ಯ.—ಶಾಸಕರಿಗೆ ಕೊಡತಕ್ಕಂತಹ ಔಷಧಿಯ ಬಗ್ಗೆ ಹೇಳುವುದಾದರೆ ಕಳೆದ ವರ್ಷದಿಂದ 6 ಲಕ್ಷ ರೂಪಾಯಿಗಳ ಔಷಧಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್‌ಸ್ಟಾಲೇಷನ್ ಇಲ್ಲ ಅಂತ ಹೇಳಿದ್ದಾರೆ. ಯಾವ್ಯಾವ ಔಷಧಿಗಳು ಇಲ್ಲವೆಂದು ತಾವು ಹೇಳುತ್ತಿದ್ದೀರಿ, ಆ ಔಷಧಿಗಳನ್ನು ರೀಪ್ಲೇಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಯಾರಿಗೆ ಆಗಲಿ, ವೈದ್ಯರು ಇಂಜೆಕ್ಷನ್ ಕೊಡುವ ಬಗ್ಗೆಯಾಗಲಿ ಅಥವಾ ಔಷಧಿಯನ್ನು ಕೊಡುವ ಬಗ್ಗೆಯಾಗಲಿ ಏನು ಪ್ರಿಸ್ಕ್ರಿಪ್ಷನ್ ಕೊಡುತ್ತಾರೆ, ಅದರಂತೆ ಔಷಧೋಪಚಾರಗಳನ್ನು ತೆಗೆದುಕೊಳ್ಳಬೇಕು. ಆದರೆ ಕೆಲವರು ಅವರೇ ಪಟ್ಟಿಯನ್ನು ಮಾಡಿಕೊಂಡು ಇಂತಿಂತಹ ಔಷಧಿಗಳನ್ನು ಕೊಡಬೇಕು, ಇಲ್ಲದಿದ್ದರೆ ನಿಮ್ಮನ್ನು ಇಲ್ಲಿಂದ ವರ್ಗ ಮಾಡಿಸುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಇದು ಶಾಸಕರು ಮಾಡಿದ ಕೆಲಸ ಅಲ್ಲ. ಇದು ಅವರ ಸಂಬಂಧಿಕರು ಮಾಡಿದಂತಹ ಕೆಲಸ. ಇಂತಹವರಿಗೆ ಎಷ್ಟು ಔಷಧಿಯನ್ನು ಕೊಟ್ಟಿದ್ದಾರೆಂಬುದನ್ನು ಪಟ್ಟಿ ಮಾಡಿ ಅದನ್ನು ಪರಿಶೀಲನೆ ಮಾಡಲು ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ. ಸಾರ್ವಜನಿಕ ಸೇವೆಗೋಸ್ಕರ ಇರತಕ್ಕ ಶಾಸಕರಿಗೆ ಉತ್ತಮವಾದ ಔಷಧಿಗಳನ್ನು ಕೊಡುವುದಕ್ಕಾಗದಿದ್ದರೆ ಇನ್ನೆಂಥ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಇರುವುದು? ಆದ್ದರಿಂದ ಕಳೆದ ವರ್ಷ 6 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಳೆದ ವರ್ಷ ಕೊಟ್ಟಂತಹ ಹಣಕ್ಕಿಂತ ಹೆಚ್ಚು 1.5 ಲಕ್ಷ ರೂಪಾಯಿಗಳನ್ನು ಹೆಚ್ಚು ಈ ಸಲ ಕೊಟ್ಟಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ನಿಮ್ಮಲ್ಲಿ ಹಣ ಇಲ್ಲ ಅಂತ ಅಲ್ಲ. ಹಣ ಇದೆ. ಆದರೆ ನಮಗೆ ಬೇಕಾದ ಔಷಧ ಇಲ್ಲ. ಇಲ್ಲೇ ನಮ್ಮ ಪಕ್ಕದಲ್ಲೇ ಡಿಸ್‌ಪೆನ್ಸರಿ ಇದೆ. ಅಲ್ಲಿಗೆ ಹೋಗೋಣ ಬನ್ನಿ. ನಮಗೆ ಬೇಕಾದ ಔಷಧಿಯೇ ಇಲ್ಲ.

ಶ್ರೀ ಬಿ. ರಾಚಯ್ಯ.—ಔಷಧಿಯ ಪರ್ಚೇಸ್ ಬಗ್ಗೆ ಕೇಂದ್ರ ಸರ್ಕಾರದವರು ಒಂದು ತಜ್ಞರ ಸಮಿತಿಯನ್ನು ಮಾಡಿದ್ದಾರೆ. ಆ ಒಂದು ತಜ್ಞರ ಸಮಿತಿಯವರು ಇಂತಿಂಥ ಔಷಧಿಗಳನ್ನು ಕೊಂಡುಕೊಳ್ಳಬೇಕೆಂದು ಒಂದು ಪಟ್ಟಿಯನ್ನೇ ಮಾಡಿರುತ್ತಾರೆ. ಅದೇ ರೀತಿ ನಮ್ಮ ಇಲಾಖೆಯಲ್ಲೂ ಕೂಡ ತಜ್ಞರ ಸಮಿತಿ ಇದೆ. ಆ ತಜ್ಞರ ಸಮಿತಿಯು ಇಂತಿಂಥ ಔಷಧಿಗಳನ್ನು ಕೊಂಡುಕೊಳ್ಳಬೇಕೆಂದು ಪಟ್ಟಿಯನ್ನು ಮಾಡಿದ್ದಾರೆ. ಅಂತಹ ಔಷಧಿಗಳನ್ನೇ ನಾವು ಕೊಂಡುಕೊಳ್ಳಬೇಕಾಗುತ್ತದೆ. ಆದರೆ ಒಬ್ಬೊಬ್ಬ ಡಾಕ್ಟರ್ ಒಂದೊಂದು ಕಂಪನಿಯ ಔಷಧಿಯನ್ನು ಇಟ್ಟುಕೊಂಡು, ಇದು ಸರಿಯಿಲ್ಲ, ಅದೇ ಔಷಧಿಯನ್ನು ಕೊಂಡುಕೊಳ್ಳಿ ಅಂತ ಹೇಳತಕ್ಕಂತಹದ್ದು ಸಹ ಇದೆ. ಆದರೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂತಹ ಔಷಧಿಗಳನ್ನು ಅಲ್ಲಿ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಔಷಧಿ ನಿಯಂತ್ರಣಕ್ಕೆ ಸಂಬಂಧಪಟ್ಟಹಾಗೆ ಬೆಂಗಳೂರು ವಿಭಾಗದಲ್ಲಿ, ಬೆಂಗಳೂರು, ಕೋಲಾರ, ತುಮಕೂರು, ಬೆಳಗಾಂ ವಿಭಾಗಕ್ಕೆ ಸಂಬಂಧಪಟ್ಟಂತೆ, ಬೆಳಗಾಂ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳು ಬಳ್ಳಾರಿ ವಿಭಾಗಕ್ಕೆ, ರಾಯಚೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಔಷಧ ನಿಯಂತ್ರಣ ಕಛೇರಿಗಳನ್ನು ತೆರೆಯಲಾಗಿದೆ. ದೋಷಪೂರಿತ ಔಷಧಿಯನ್ನು ತಯಾರು ಮಾಡತಕ್ಕಂಥದ್ದಾಗಲಿ, ಮತ್ತು ಕಲಬೆರಕೆ ಔಷಧಿಯ ತಯಾರಿಕೆಯಾಗಲಿ ಆ ವಿಷಯದಲ್ಲಿ 1985-86ರಲ್ಲಿ 16 ಪ್ರಕರಣಗಳನ್ನು ಕಂಡುಹಿಡಿದಿದ್ದೇವೆ. ಅದೇ ರೀತಿ 1986-87ನೇ ಸಾಲಿನಲ್ಲಿ 20 ಪ್ರಕರಣಗಳು ಪತ್ತೆಯಾಗಿವೆ. ಔಷಧಿ ಮತ್ತು ತಾಂತ್ರಿಕ ಆಯೋಗಕ್ಕೆ ಸಂಬಂಧಪಟ್ಟಿರತಕ್ಕಂತಹದ್ದು 13. ಹೀಗೆ ಅಂತಹವರ ಬಗ್ಗೆಯೂ ಕೂಡ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಕೆಲವರು ನಿರ್ದೋಷಿಗಳು, ಮತ್ತೆ ಕೆಲವರನ್ನು ದೋಷಿಗಳೆಂದು ತೀರ್ಮಾನವಾಗಿವೆ. ಇನ್ನೂ ಕೆಲವು ಕೇಸ್‌ಗಳು ತೀರ್ಮಾನವಾಗದೆ ಬಾಕಿ ಇವೆ. ಅಲೋಪತಿ ಔಷಧಿಯನ್ನು ತಯಾರು ಮಾಡತಕ್ಕಂತಹ 308 ಜನರಿಗೆ ಪರ್ಮಿಷನ್ ಅನ್ನು ಕೊಟ್ಟಿದ್ದೇವೆ. 335 ಜನರ ಮ್ಯಾನುಫ್ಯಾಕ್ಚರಿಂಗ್ ಆರ್ಡರ್‌ಗೆ ಲೈಸನ್ಸ್ ಅನ್ನು ನವೀಕರಣ ಮಾಡಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಹೆಲ್ತ್ ಆಫೀಸರ್ ಮೇಲೆ ಹೇಳಿದ್ದಾರೆ. ಯಾವುದೇ ರೀತಿಯಾದ ಅನಾಹುತಗಳಾದಾಗ, ತಕ್ಷಣವೇ ಅಲ್ಲಿನ ಹೆಲ್ತ್ ಆಫೀಸರ್ ಆಗಲಿ, ಹೆಲ್ತ್ ಇನ್ಸ್‌ಪೆಕ್ಟರ್ ಆಗಲಿ ಸರ್ಕಾರದ ಗಮನಕ್ಕಾಗಲಿ ಅಥವಾ ಇಲಾಖೆಯ ಗಮನಕ್ಕಾಗಲಿ,

ತರದಿದ್ದರೆ ಅಂತಹವರ ಮೇಲೆ ತೀವ್ರ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಆಯಾ ಪುರಸಭೆಗಳು ಇಂತಹ ವಿಷಯದಲ್ಲಿ ತಕ್ಷಣವೇ ಕ್ರಮ ತೆಗೆದುಕೊಳ್ಳದಿದ್ದರೆ, ಅದರ ಬಗ್ಗೆ ಅನುಕಂಪ ಪಡಬೇಕೆಂದು ಮಾತ್ರ ಹೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಅಲ್ಲಿ ಹೆಲ್ತ್ ಆಫೀಸರ್ ರಿಪೋರ್ಟ್ ಮಾಡಿಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—ರಿಪೋರ್ಟ್ ಮಾಡದೇ ಇದ್ದರೆ ತೀವ್ರ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಪ್ರಾದೇಶಿಕ ಅಸಮತೋಲನ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ಹಾಗೂ ಅಂದಾಜು ಸಮಿತಿಯಲ್ಲಿ 1987-88ರಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಇವುಗಳ ಅನುಭವದಲ್ಲಿ ನನಗೆ ತಿಳಿದು ಬಂದ ವಿಚಾರವೆಂದರೆ ಜಿಲ್ಲಾವಾರು ಬಡ್ಜೆಟ್‌ನ್ನು ಅಲಾಟ್ ಮಾಡುವ ಸಮಯದಲ್ಲಿ ಮಾಡಿರುವ ತಾರತಮ್ಯದ ಬಗ್ಗೆ ಕೆಲವು ಅಂಶಗಳು ಕಂಡುಬಂದವು. ಹಳೇ ಮೈಸೂರು ಹಾಗೂ ಮಂಗಳೂರು ಕಡೆ ಇರುವ ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಕೇಂದ್ರಗಳಿಗೆ 5 ಸಾವಿರ ರೂಪಾಯಿಗಳ ಪ್ರಕಾರ ಅಲಾಟ್ ಮಾಡಿದ್ದರೆ, ಹೈದರಾಬಾದ್ ಕರ್ನಾಟಕದ ಸುಮಾರು 4-5 ಭಾಗಗಳಲ್ಲಿ 1 ಸಾವಿರ ರೂಪಾಯಿಗಳ ಪ್ರಕಾರ ಅಲಾಟ್ ಮಾಡಲಾಗುತ್ತದೆ. ಇದರ ಬಗ್ಗೆ ಕೇಳಿದ್ದಕ್ಕೆ ಅವರು ಹೇಳುವುದು ಏನೆಂದರೆ ಸುಮಾರು 30 ವರ್ಷಗಳಿಂದ ಪಿ.ಹೆಚ್.ಸಿ.ಗಳಿಗೆ 4-5 ಹಳ್ಳಿಗಳು ಸೇರಿರುವುದರಿಂದ on the basis of those PHCs and PHUs budget allotment is made ಎಂದು ಹೇಳುತ್ತಾರೆ. ಇವತ್ತು ಹಿಂದುಳಿದ ಭಾಗಗಳಲ್ಲಿ ಲಕ್ಷಾವಧಿ ಜನರು ಇರುವ ಕಡೆ ಆಸ್ಪತ್ರೆಗಳು ಇಲ್ಲ. ಈಗ ಒಂದೆರಡು ಕಡೆ ಪ್ರಾರಂಭ ಮಾಡುತ್ತಿದ್ದಾರೆ. ನಾವು ಹೇಳುವುದು, it should not be on the basis of PHUs and PHCs but it should be on the basis of population,

ಇನ್ನು ಶಹಬಾದ್‌ನಲ್ಲಿ ಆಸ್ಪತ್ರೆಗಾಗಿ 1984ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಡಿಗಲ್ಲನ್ನು ಹಾಕಿದ್ದರು. 5ನೇ ವರ್ಷ ಆಗುತ್ತಾ ಬಂತು, ಅದರ ಕೆಲಸ ಇನ್ನೂ ಮುಗಿದಿಲ್ಲ. ಈಗ ತಾವು ಇದನ್ನು ಜಿಲ್ಲಾ ಪರಿಷತ್ತಿಗೆ ಹ್ಯಾಂಡ್ ಓವರ್ ಮಾಡಿದ್ದೇವೆಂದು ಹೇಳುತ್ತೀರಿ. ಶಹಬಾದ್ ನಗರ 60 ಸಾವಿರ ಜನಸಂಖ್ಯೆ ಹೊಂದಿದ್ದು ಮುನಿಸಿಪಲ್ ಏರಿಯಾ ಆಗಿದೆ. ನಾನು ಅಲ್ಲಿಯ ಶಾಸಕನಾಗಿ ರೆಪ್ರೆಸೆಂಟ್ ಮಾಡುತ್ತೇನೆ. ಇವತ್ತು ಇದರ ಬಗ್ಗೆ ಜಿಲ್ಲಾಪರಿಷತ್ತಿನವರು ಚಿಂತೆ ಮಾಡುವುದಿಲ್ಲ. ಏಕೆಂದರೆ, ಟೌನ್ ಮುನಿಸಿಪಾಲಿಟಿಯಲ್ಲಿ ಓಟು ಹಾಕಿಲ್ಲ ಎಂದು ಜಿಲ್ಲಾಪರಿಷತ್‌ನವರು ಬಡ್ಜೆಟ್ ಕೊಡುವುದಿಲ್ಲ. ಇವತ್ತು ಮುನಿಸಿಪಲ್ ಏರಿಯಾದಲ್ಲಿ ಬರುವ ಆಸ್ಪತ್ರೆ, ಶಾಲೆ ಹಾಗೂ ಕಟ್ಟಡಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮತ್ತೆ ಅಂದಾಜು ಸಮಿತಿಯು 1987-88ನೇ ಸಾಲಿನಲ್ಲಿ ಈ ಇಲಾಖೆಯ ಬಗ್ಗೆ ವರದಿಯನ್ನು ಕೊಟ್ಟಿದೆ. ಈ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ವಿವರವಾದ ವರದಿಯನ್ನು ಕೊಟ್ಟಿದ್ದೇವೆ, ತಾವು ಮಂತ್ರಿಗಳಾಗಿ ಆ ವರದಿಯನ್ನು ಓದಿದ್ದೀರಾ? ಸರ್ಕಾರ ಈ ಅವ್ಯವಹಾರಗಳ ಬಗ್ಗೆ ಕಂಡುಹಿಡಿದು ತಪ್ಪಿತಸ್ತರಿಗೆ ಶಿಕ್ಷಿಸಲು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ಈ ರೀತಿ ಅವ್ಯವಹಾರಗಳು ನಡೆದಿದ್ದರೆ ಅದನ್ನು ಯಾವ ರೀತಿ ಪ್ಲಗ್ ಮಾಡಬೇಕೆಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಏನೂ ಹೇಳಲಿಲ್ಲ. ಇನ್ನು ವರ್ಗಾವಣೆ ವಿಷಯ, ನಾವು ಶಾಸಕರು ಎಂದ ಮೇಲೆ ನಮ್ಮ ಹತ್ತಿರ ಜನರು ಬಂದು ವರ್ಗಾವಣೆ ಬಗ್ಗೆ ಕೇಳುತ್ತಾರೆ. ನಾವು ಆ ಬಗ್ಗೆ ಒಂದು ನೋಟ್ ಹಾಕುತ್ತೇವೆ. ಇಂತಹವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೂಡಾ ಅದರ ಮೇಲೆ ಮಾನ್ಯ ಮಂತ್ರಿಗಳು ಬರೆಯುತ್ತಾರೆ. ಆಗ ನಾವೂ ಕೂಡ ಟ್ರಾನ್ಸ್‌ಫರ್ ಆಗುತ್ತದೆ ಎಂದು ತಿಳಿದುಕೊಳ್ಳುತ್ತೇವೆ. ಆದರೆ ಈ ಕಾಗದ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಡೈರೆಕ್ಟರ್ ಹತ್ತಿರ ಹೋಗಿ ಬೀಳುತ್ತದೆ. ಅಲ್ಲಿಗೆ ಹೋಗಿ ನೋಡಿದರೆ ಅಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡಿರುವುದಿಲ್ಲ. ಅರ್ಜಿ ಕೊಟ್ಟಾಗ ನಿಮ್ಮಿಂದ ಉತ್ತರವೂ ಬರುತ್ತದೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ತಿಳಿಸುತ್ತೀರಿ. ನಾವು ಕೆಲಸ ಆಗಿದೆ ಎಂದು ತಿಳಿದುಕೊಳ್ಳುತ್ತೇವೆ. ಆದರೆ ಈಗ ಇಂತಹ ಸಾವಿರಾರು ಅಪ್ಲಿಕೇಷನ್ಸ್ ಪೆಂಡಿಂಗ್ ಇವೆ, You are the supreme authority. Your orders should be implemented. ತಾವು ಸೈನ್ ಮಾಡಿದ ಮೇಲೆ ಕೆಳಗೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದಾರೋ ಇಲ್ಲವೋ ಎಂದು ನೋಡುವ ಬಗ್ಗೆ ತಮ್ಮಲ್ಲಿ ಏನಾದರೂ ಚೆಕ್ ಇದೆಯೇ? ತಮ್ಮ ಆರ್ಡರಿಗೆ ವ್ಯಾಲ್ಯೂ ಇಲ್ಲದಿದ್ದರೆ, ತಮ್ಮ ಆರ್ಡರ್‌ನ್ನು ವಯಲೇಟ್ ಮಾಡಿದರೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈ ರೀತಿ ಟ್ರಾನ್ಸ್‌ಫರ್ ವಿಷಯಗಳನ್ನೇ ತರಬೇಡಿ ಎಂದರೆ ನಮಗೆ ತುಂಬಾ ಸಂತೋಷ. ನಮಗೇನೂ ಅದರಲ್ಲಿ ಇಂಟರೆಸ್ಟ್ ಇಲ್ಲ, ಜನರು ಬರುತ್ತಾರೆ, ಅದನ್ನು ತಮ್ಮ ಹತ್ತಿರ ಒಯ್ಯುತ್ತೇವೆ.

ಶ್ರೀ ಬಿ. ರಾಚಯ್ಯ.—ಔಷಧಿಯನ್ನು ಹಂಚುವ ವಿಷಯದಲ್ಲಿರುವ ಒಂದು ಪ್ರಮಾಣವನ್ನು ನಾನು ಮೊದಲೇ ಹೇಳಿದೆ. ಉಪ ಕೇಂದ್ರಕ್ಕಾಗಲೀ, ಘಟಕಕ್ಕಾಗಲೀ ಅಥವಾ ಆರೋಗ್ಯ ಕೇಂದ್ರಕ್ಕಾಗಲೀ ಈ ವರ್ಷ ಹೆಚ್ಚು ಕೊಡುವುದಲ್ಲದೇ 6 ಜಿಲ್ಲೆಗಳಲ್ಲಿ ಇರತಕ್ಕವರಿಗೆ 15 ಪರ್ಸೆಂಟ್ ಹೆಚ್ಚಿಗೆ ಕೂಡಾ ಮಾಡಿದ್ದೇನೆಂದು ಹೇಳಿದ್ದೇನೆ. ಪಾಪ್ಯುಲೇಷನ್ ಬೇಸಿಸ್ ಮೇಲೆ ಇವತ್ತು ೩೦ ಸಾವಿರಜನಸಂಖ್ಯೆಗೆ ಒಂದು ಕೇಂದ್ರ ಮಾಡುವಾಗ ಅದೇ ರೀತಿ ೧ಲಕ್ಷ ಜನಸಂಖ್ಯೆಗೆ ಒಂದು ಸಾಮೂಹಿಕ ಕೇಂದ್ರ ಮಾಡುವಾಗ ಪಾಪ್ಯುಲೇಷನ್ ಕವರ್ ಆಗಿದೆಯೇ ವಿನಹ, ಡಿಸ್ಟೆನ್ಸ್ ಜಾಸ್ತಿ ಇರಬಹುದೇ ವಿನಹ. ಪಾಪ್ಯುಲೇಷನ್ ಬೇಸಿಸ್ ಮೇಲೆ ಈಗ ಮಾಡುತ್ತಿರುವುದು. ಅದಕ್ಕೆ ಔಷಧ ಹಂಚುತ್ತಿರುವುದು ಅದೇರೀತಿ. ಆ ಭಾಗದಲ್ಲಿ ಕಡಿಮೆಯಿದೆ ಅಂದರೆ ಏನು ಕೊಡಬೇಕೋ ಅದನ್ನು ಕೊಡುತ್ತಿದ್ದೇವೆ. ಆದರೆ ಆಸ್ಪತ್ರೆಗೆ ಬರತಕ್ಕವರ ಸಂಖ್ಯೆ ಜಾಸ್ತಿ ಯಾಗಿರುವುದರಿಂದ ನಾವು ಕೊಡತಕ್ಕ ಔಷಧಿ ಮೊದಲೇ ತೀರಿಹೋಗಬಹುದು. ಕೆಲವು ಸಂದರ್ಭಗಳಲ್ಲಿ ದುರುಪಯೋಗವಾಗಿರಬಹುದು. ಅದನ್ನು ಚೆಕ್ ಮಾಡುವುದಕ್ಕೋಸ್ಕರ ಈಗಾಗಲೇ ಸೆಲ್‌ನ್ನು ಮಾಡಿ ದುರುಪಯೋಗವಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಮೊದಲೇ ತಿಳಿಸಿದ್ದೇನೆ. ದಯಮಾಡಿ ಇಂತಹದ್ದನ್ನು ನಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದು ಕೊಳ್ಳುತ್ತೇನೆ. ಯಾರು ಔಷಧ ಇಟ್ಟುಕೊಂಡು ಇಲ್ಲವೆಂದು ಹೇಳುತ್ತಾರೆ, ಅದನ್ನು ಬೇರೆ ಕಡೆ ಪ್ರೈವೇಟ್ ಆಗಿ ಉಪಯೋಗಿಸಿಕೊಳ್ಳುತ್ತಾರೆ ಅಂಥದನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಅದರ ಬಗ್ಗೆ ಗಮನಹರಿಸುತ್ತೇನೆ. ಎರಡನೇಯದಾಗಿ ಟ್ರಾನ್ಸ್‌ಫರ್ ವಿಷಯದಲ್ಲಿ ಹೇಳಿದ್ದಾರೆ. ಸಾಮಾನ್ಯ ವಾಗಿ ಮೂರು ವರ್ಷ ಯಾರು ಒಂದೇ ಜಾಗದಲ್ಲಿ ಕೆಲಸ ಮಾಡಿರುತ್ತಾರೆ ಯಾವುದೇ ವರ್ಗವಿರಲಿ, ನಾಲ್ಕನೇದರ್ಜೆ ನೌಕರರನ್ನು ಬಿಡಿ, ಮೂರನೇ ದರ್ಜೆ ನೌಕರರನ್ನು ಆಯಾ ಜಿಲ್ಲೆಯಲ್ಲಿಯೇ ಇರುವುದಕ್ಕೆ ವ್ಯವಸ್ಥೆ ಮಾಡೋಣ. ಮೂರು ವರ್ಷಗಳಾದ ಮೇಲೆ ಡಾಕ್ಟರುಗಳನ್ನು ವರ್ಗಾವಣೆ ಮಾಡಲಾಗುತ್ತದೆ. ಕನಿಷ್ಟ ಪಕ್ಷ ೩ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಡಾಕ್ಟರುಗಳು ಕೆಲಸ ಮಾಡಲೇಬೇಕು ಎನ್ನತಕ್ಕ ಕಡ್ಡಾಯವನ್ನು ಮಾಡುತ್ತಿದ್ದೇವೆ. ಒಂದಲ್ಲ ಒಂದು ರೀತಿಯಲ್ಲಿ ಅವರು ಪ್ರೆಜರ್ ತರುತ್ತಿದ್ದಾರೆ. ಅದಕ್ಕೋಸ್ಕರ ಕನಿಷ್ಟ ಪಕ್ಷ ಮೂರು ವರ್ಷ ಒಂದು ಕಡೆ ಕೆಲಸ ಮಾಡಿದರೆ ಮಾತ್ರ ನಾನು ವರ್ಗಾವಣೆ ಮಾಡುತ್ತೇನೆಂದು ಹೇಳಿದ್ದೇನೆ. ಮೂರು ವರ್ಷಗಳಾಗದಿದ್ದರೆ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಆಗುತ್ತದೆ. ಇದರಲ್ಲಿ ನಾನು ಬಿಗಿಯಾದರೆ ಮುಖ್ಯಮಂತ್ರಿಗಳು ಮಾಡುವುದಕ್ಕೆ ಅವಕಾಶವಿದೆ. ಆದರಲ್ಲಿ ೧೩೪ಜನ ಈ ವರ್ಷ ವರ್ಗಾವರ್ಗಿ ಆದವರ ಪೈಕಿಯಲ್ಲಿ ಮುಖ್ಯಮಂತ್ರಿಗಳವರಿಂದ ಆರ್ಡರ್ ಬಂದಿದನ್ನು ಇಂಪ್ಲಿಮೆಂಟ್ ಮಾಡಿಯೆಂದು ಹೇಳಿದ್ದೇನೆ ನಾನು ಇನ್ನು ಬೇರೆ ವರ್ಗಾವಣೆ ಮಾಡಿಲ್ಲ. ನೀವು ವರ್ಗಾವಣೆ ಮಾಡಿಯೆಂದರೆ ನಿಮ್ಮ ಭಾಗದ ಆಸ್ಪತ್ರೆಗಳಿಗೆ ಡಾಕ್ಟರುಗಳು ಯಾರು ಬರುವುದಿಲ್ಲ. ಆದ್ದರಿಂದ ನೀವು ಸಹ ಅಲ್ಲಿಗೆ ಹೋಗಿಯೆಂದು ಒತ್ತಾಯ ಮಾಡಬೇಕು. ಆ ದೃಷ್ಟಿಯಿಂದ ಕೊನೆಯಪಕ್ಷ ಮೆಡಿಕಲ್ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕವರು ನಾಲ್ಕು ಕಾಲೇಜುಗಳಲ್ಲಿ ಒಂದು ಟರ್ಮ್ ಹೋಗಿ ಬರಬೇಕೆಂದು ಕಡ್ಡಾಯ ಮಾಡುತ್ತಿದ್ದೇವೆ. ಬೇರೆ ಬೇರೆ ಜಿಲ್ಲಾಮಟ್ಟದಲ್ಲಿ ಬೇರೆ ಬೇರೆ ತಾಲ್ಲೂಕುಮಟ್ಟದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ೩ವರ್ಷ ಕೆಲಸ ಮಾಡದಿದ್ದರೆ ಪಟ್ಟಣಗಳಿಗೆ ವರ್ಗಾವಣೆ ಕೊಡುವುದಕ್ಕೆ ಆಗುವುದಿಲ್ಲವೆನ್ನುವ ತೀರ್ಮಾನ ಮಾಡು ತ್ತಿದ್ದೇವೆ. ಈ ದೃಷ್ಟಿಯಲ್ಲಿ ಒಂದು ನೀತಿಯನ್ನು ಹಾಕಿಕೊಂಡು ಕೆಲಸ ಮಾಡಿದರೆ ಕೆಲವರಿಗೆ ಆ ನೀತಿ ಒಗ್ಗುವುದಿಲ್ಲ. ನನ್ನ ಹೆಂಡತಿ ಸಂಬಂಧ, ಅಣ್ಣನ ಸಂಬಂಧ ಎಂದು ಬರತಕ್ಕವರ ಸಂಖ್ಯೆ ಜಾಸ್ತಿ ಯಾಗಿದೆ. ನನಗೆ ಮಾನವೀಯತೆ ಇಲ್ಲವೆಂದು ಹೇಳುವ ಮಟ್ಟಕ್ಕೂ ಕೆಲರು ಬಂದಿದ್ದಾರೆ. ಅದಕ್ಕೋಸ್ಕರ ಏನೇ ಆದರೂ ನಾನು ಅವರಿಗೊಂದು ಇವರಿಗೊಂದು ಮಾಡುವುದಕ್ಕೆ ಹೋಗುವುದಿಲ್ಲ. ಬೆಳಗಾಂಗೆ ಹೋಗಿಯೆಂದು ಒಬ್ಬರನ್ನು ವರ್ಗ ಮಾಡಿದರೆ, ನಾನು ಷೆಡ್ಯೂಲ್ಡ್ ಕಾಸ್ಟ್ ಏನು ಸ್ವಾಮಿ ಹೀಗೆ ಮಾಡುತ್ತೀರಿ ಎಂದು ನಾಲ್ಕು ಜನರನ್ನು ಕರೆದುಕೊಂಡು ಬರುತ್ತಾರೆ. ಒಬ್ಬರು ಆರುವರ್ಷ ಆಯಿತು, ನಾಲ್ಕು ವರ್ಷ ಆಯಿತು ಎಂದು ಬರುತ್ತಾರೆ.

ಶ್ರೀ ಕೆ. ಹೆಚ್. ಪಾಟೀಲ್,—ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ನೀವು ಸಹಾಯ ಮಾಡದಿದ್ದರೆ ಇನ್ನು ಯಾರು ಸಹಾಯ ಮಾಡಬೇಕು ?

ಶ್ರೀ ಬಿ. ರಾಚಯ್ಯ.—ಎಸ್. ಸಿ. ಯವರಿಗಲ್ಲದೆ ಇನ್ನು ಯಾರಿಗೆ (ಸಹಾಯ) ಮಾಡುತ್ತೀರಿ ಅಂದರು ಆದರೆ ಅಲ್ಲಿ ಇನ್ನೊಬ್ಬ ಎಸ್. ಸಿ. ೧೦ ವರ್ಷಗಳ ಕಾಲ ಒಂದೇ ಕಡೆ ಇರುವವರಿಗೆ ಏನು ಮಾಡ ಬೇಕು ? ಆದ್ದರಿಂದ ನಾವು ಒಂದು ನೀತಿಯಲ್ಲಿ ಹೋಗೋಣ. ಇವತ್ತು ಕೆಲವು ಶಾಸಕರಿಗೆ ಮನಸ್ಸು ನೊಂದಿರ ಬಹುದು, ಕೆಲವು ಮಂತ್ರಿಗಳ ಮನಸ್ಸು ನೊಂದಿರಬಹುದು ಆದರೆ ನಾವು ಒಂದು ನೀತಿಯ ಮೇಲೆ ಹೋದರೆ ಯಾರೂ ಕಂಪ್ಲೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಕಾಲ ಕಠಿಣವಾಗಿ ಕಾಣ

ಬಹುದು. ಡಾಕ್ಟರುಗಳಿಗಿಂತ ಕೆಳಗಡೆ ಇರತಕ್ಕ ಮೂರನೇದರ್ಜೆ ನೌಕರರನ್ನು ಬದಲಾವಣೆ ಮಾಡು ವುದಕ್ಕೆ ಅವಕಾಶ ಕೊಡುವುದಿಲ್ಲ. ಮಾನ್ಯ ಶಾಣಪ್ಪನವರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಅವರು ನನ್ನ ಗಮನಕ್ಕೆ ತಂದರೆ ಅದನ್ನು ನಾನು ನೋಡುತ್ತೇನೆ.

ಅಧ್ಯಕ್ಷರು.—ಮಾನ್ಯ ಶಾಣಪ್ಪನವರೇ ಈಗ ನಿಮ್ಮ ಸರದಿ ಮುಗಿಯಿತು, ತಾವು ಕೂಡಿ ಮಾ ವೆಂಕಟರಾಮಯ್ಯನವರೇ ತಾವು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಮೆಡಿಕಲ್ ಕಾಲೇಜು ಗಳ ಬಗ್ಗೆ ಹೇಳಿದ್ದಿರಿ, ನಾನು ಕೇಳುವುದು ಒಂದು ರಿಕ್ವೆಸ್ಟ್ ಈಗಾಗಲೇ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳು ಜಾಸ್ತಿಯಾಗಿವೆ. ಅವು ವ್ಯಾಪಾರಿ ಸಂಸ್ಥೆಗಳಾಗಿವೆ. ಕೆಲವರು ಬೇಕಾದಷ್ಟು ದುಡಿ ದಿದ್ದಾರೆ, ಕೆಲವರು ತೊಂದರೆಯಲ್ಲಿದ್ದಾರೆ. ಈಗಲಾದರೂ ಮೆಡಿಕಲ್ ಕಾಲೇಜುಗಳನ್ನು ಕೊಡು ವುದನ್ನು ಬ್ಯಾನ್ ಮಾಡಿ. ಎರಡು ಮೆಡಿಕಲ್ ಕಾಲೇಜುಗಳು ಒಂದು ಸಿದ್ಧಾರ್ಥ ಮತ್ತೊಂದು ಆರ್. ವಿ. ಗೆ. ಕೊಡುತ್ತೇವೆಂದು ಹೇಳಿದಿರಿ. ಎರಡನೆಯದಾಗಿ ಮೆಡಿಷನ್ ಏನು ಸಪ್ಲೆ ಮಾಡುತ್ತೀರಿ......

ಶ್ರೀ ಬಿ. ರಾಚಯ್ಯ.—ಸಿದ್ಧಾರ್ಥ ಮೆಡಿಕಲ್ ಕಾಲೇಜನ್ನು ಏತಕ್ಕೆ ಕೊಟ್ಟಿದ್ದೇವೆಂದು ನಾನು ಉತ್ತರದಲ್ಲಿ ಹೇಳಿದ್ದೇನೆ. ಹೈಕೋರ್ಟ್ ಆರ್ಡರ್ ಇದೆ.

ಅಧ್ಯಕ್ಷರು.—ಮಂತ್ರಿಗಳು ಉತ್ತರ ಹೇಳುವಾಗ ತಾವು ಇರಲಿಲ್ಲ, ತಾವು ಕೂಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಕೊಡುವುದನ್ನು ಬ್ಯಾನ್ ಮಾಡಬೇಕು. ಈಗಿರತಕ್ಕ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳನ್ನು ಸಪ್ಲೈ ಮಾಡಿ. ಮೊನ್ನೆ ನಾನು ಜಿಲ್ಲಾಪರಿಷತ್ ಮೀಟಿಂಗ್‌ಗೆ ಹೋದಾಗ ಸರ್ಕಾರದವರು ಹೊದಸಾರಿ ಕೊಡಬೇಕಾದ ಔಷಧಗಳನ್ನು ಎರಡು ತಿಂಗಳು ಲೇಟಾಗಿ ಕೊಟ್ಟರು ಎಂದು ಹೇಳುತ್ತಾರೆ. ಟೈಮ್‌ಗೆ ಸರಿಯಾಗಿ ಔಷಧಗಳನ್ನು ತಾವು ಏತಕ್ಕೆ ಸಪ್ಲೈ ಮಾಡುವುದಿಲ್ಲ ? ದಯುವಿಟ್ಟು ಟೈಮ್‌ಗೆ ಸರಿಯಾಗಿ ಸಪ್ಲೈ ಮಾಡಿ. ಈಗ ಡಬಲ್‌ಸ್ಟೆಂತ್ ಅಂತ ಔಷಧಿಗಳು ಬಂದಿವೆ, ಆದರೆ ಸಬ್‌ಸ್ಟ್ಯಾಂಡರ್ಡ್ ಮೆಡಿಸಿನ್ಸ್‌ನ್ನು ನಿಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಕೊಡುತ್ತಿದ್ದಾರೆ, ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಸಬ್‌ಸ್ಟ್ಯಾಂಡರ್ಡ್ ಬಗ್ಗೆ ಈಗಾಗಲೇ ನಮ್ಮ ಡ್ರಗ್ಸ್ ಕಂಟ್ರೋಲರ್ ಅವರು ಸ್ಯಾಂಪಲ್ಸ್ ತರಿಸಿ ನೋಡಿದ್ದಾರೆ. ಕೆಲವು ಸಂದರ್ಭದಲ್ಲಿ ಬೇರೆ ಬೇರೆ ಕಂಪನಿಗಳ ಹೆಸರು ಈ ಸಬ್‌ಸ್ಟ್ಯಾಂಡರ್ಡ್ ಬಗ್ಗೆ ಇರುವುದು ಕಂಡುಬಂದಿದೆ.

ಶ್ರೀ ಜೆ. ಹೆಚ್. ಪಟೇಲ್.—ಒಂದೇ ಪಾಯಿಂಟ್ ಮೇಲೆ ಮೂರನೇ ಸಾರಿ ಮಾನ್ಯ ಮಂತ್ರಿ ಗಳು ಉತ್ತರ ಕೊಡುತ್ತಿದ್ದಾರೆ. ಒಂದು ವಿಷಯದ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಸದಸ್ಯರು ಇರುವುದಿಲ್ಲ. ಒಂದೊಂದು ಔಷಧಿ ಬಗ್ಗೆ ಮೂರುಮೂರು ಸಾರಿ ಉತ್ತರ ಕೊಡುತ್ತಾ ಹೋದರೆ ಇದೇನು ಕ್ಲಾರಿಫಿಕೇಶನ್ ಅಂತ ಹೇಳಬೇಕೋ ಹೇಗೆ ? ಹೇಳಿದ್ದ ಪಾಯಿಂಟ್‌ನೇ ಮತ್ತೇ ರಿಪೀಟ್ ಮಾಡುತ್ತಾರೆ.

ಅಧ್ಯಕ್ಷರು.—ಈಗಾಗಲೇ ಉತ್ತರ ಹೇಳಿದ್ದೇನೆ ಎಂದು ಮಂತ್ರಿಗಳು ಹೇಳಿದರೆ ಸಾಕು.

ಶ್ರೀ ಜೆ. ಹೆಚ್. ಪಟೇಲ್.—ಸಿದ್ಧಾರ್ಥ ಕಾಲೇಜಿನ ಬಗ್ಗೆ ಮೂರು ಸಾರಿ ಹೇಳಿದರು. ಡ್ರಗ್ ಕಂಟ್ರೋಲ್ ಬಗ್ಗೆ ಮೂರು ಸಾರಿ ಹೇಳಿದರು. ಇದಕ್ಕೊಂದು ಇತಿಮಿತಿ ಬೇಡವೇ ?

ಅಧ್ಯಕ್ಷರು.—ಶ್ರೀ ಗುರುಪ್ರಸಾದ್ ಅವರೇ, ನೀವು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ಪ್ರಶ್ನೆಗೆ ಉತ್ತರ ಹೇಳಿಲ್ಲ.

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ನೀವು ಸದನಕ್ಕೆ ಸರಿಯಾದ ಸಮಯಕ್ಕೆ ಬರುವುದಿಲ್ಲ. ಈಗ ಬಂದು ಕೇಳುತ್ತೀರಿ.

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನೆಲಮಂಗಲ ತಾಲ್ಲೂಕಿನ ಜನರಲ್ ಹಾಸ್ಪಿಟಲ್ ಬಗ್ಗೆ ಮೂರು

ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ೧೯೮೬–೮೭ ರಲ್ಲಿ ಈ ಜನರಲ್ ಹಾಸ್ಪಿಟಲ್ ಅನ್ನು ಮಂಜೂರು ಮಾಡ ಬೇಕೆಂದು ಆಗಿತ್ತು. ಈಗ ಇದು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೋ ಅಥವಾ ಸರ್ಕಾರದ ವ್ಯಾಪ್ತಿಗೆ ಬರುತ್ತದೋ ಗೊತ್ತಿಲ್ಲ ಇದರ ಬಗ್ಗೆ ನನಗೆ ಕ್ಲಾರಿಫಿಕೇಶನ್ ಸಿಕ್ಕಿಲ್ಲ. ಈಗಾಗಲೇ ನೆಲಮಂಗಲ ತಾಲ್ಲೂಕು ಮುನಿಸಿಪಾಲಿಟಿ ಸಮಿತಿಗೆ ದುಡ್ಡು ಕಟ್ಟಿ ನೀವು ಲ್ಯಾಂಡ್‌ನ್ನು ವಶಪಡಿಸಿಕೊಂಡರೆ ಇದನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಈಗ ನಮ್ಮಲ್ಲಿ ಅಷ್ಟು ದುಡ್ಡು ಇಲ್ಲ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅದಕ್ಕೋಸ್ಕರ ಕೆಲವಾರು ಪ್ರಿಸಿಡೆಂಟ್ಸ್ ಇವೆ. ಅದರಂತೆ ತಾವು ಲ್ಯಾಂಡ್ ಅಕ್ವೈರ್ ಮಾಡಿ. ನಾವು ಲೋಕಲ್ ಫಂಡ್ಸ್‌ನಿಂದ ಸಾಕಷ್ಟು ದುಡ್ಡು ಸಂಗ್ರಹ ಮಾಡಿಕೊಡುತ್ತೇವೆ; ಇದನ್ನು ಮಾಡಿ ಎಂದು ಮೂರು ವರ್ಷಗಳಿಂದ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಏನೂ ಕೆಲಸ ಆಗಿಲ್ಲ. ಎರಡನೆಯದು, ಈಗ ಬಹಳಷ್ಟು ಮಟ್ಟಿಗೆ ಸ್ಟೇಟ್‌ಲೆವೆಲ್‌ನಲ್ಲಿರತಕ್ಕ ಪೋಸ್ಟ್ ಗ್ರಾಜುಯೇಟ್ ಡಾಕ್ಟರ್ಸ್ ಏನಿದ್ದಾರೆ, ಅವರು ರೂರಲ್ ಡಿಸ್ಪೆನ್ಸರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕಂಪ್ಲೇಂಟ್ಸ್ ಏನು ಎಂದರೆ, ನಾವು ಸಾಕಷ್ಟು ಮಟ್ಟಿಗೆ ಸ್ಪೆಷಲೈಸೇಷನ್ ಮಾಡಿಕೊಂಡಿದ್ದೇವೆ. ನಮಗೆ ಇಲ್ಲಿಗಿಂತ ಜನರಲ್ ಆಸ್ಪತ್ರೆಗಳಲ್ಲಿ ಅವಕಾಶ ಕೊಟ್ಟರೆ ನಾವು ಸಾಕಷ್ಟು ಸೇವೆ ಮಾಡಬಹುದು ನಾವು ಏನು ಪ್ರೊಫಿಶಿಯೆನ್ಸಿ ತೆಗೆದುಕೊಂಡಿದ್ದೇವೆ, ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಎರಡು ವರ್ಷ ನಾವು ಏನು ಕಷ್ಟಪಟ್ಟಿದ್ದೇವೆ ಇದರಿಂದ ನಮಗೂ ಉಪಯೋಗ ಆಗಿಲ್ಲ ಮತ್ತು ರೋಗಿಗಳಿಗೂ ಕೂಡ ಉಪಯೋಗ ಆಗಿಲ್ಲವೆಂದು ಅವರು ಹೇಳುತ್ತಿದ್ದಾರೆ. ಮೂರನೆಯದು, ೧೫–೧೬ ಜನ ಪೋಸ್ಟ್ ಗ್ರಾಜ್ಯುಯೇಟ್ ಸ್ಟೂಡೆಂಟ್ಸ್‌ಗೆ ಮಂಗಳೂರಿನ ಕಸ್ತೂರ್‌ಬಾ ಕಾಲೇಜಿನಲ್ಲಿ ಪೋಸ್ಟಿಂಗ್ಸ್ ಆಗಿತ್ತು. ಆದರೆ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನವರು ಈಗ ಬೆಂಗಳೂರಿನಿಂದ ಬಂದ ಎಂ.ಬಿ.ಬಿ.ಎಸ್. ಗ್ರಾಜ್ಯುಯೇಟ್ಸ್ ಏನಿದ್ದಾರೆ ಅವರು ಈಗ ರೆಗ್ಯುಲರ್ಸ್ ಅಲ್ಲ. ಆದ್ದರಿಂದ ಅವರನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಸಿ ಏನಾದರೂ ಮಾಡುತ್ತೇನೆ ಎಂದು ಹೇಳಿದ್ದರು. ಇಲ್ಲಿಯ ತನಕ ಏನೂ ಆಗಿಲ್ಲ. ಆದ್ದರಿಂದ ಈ ಮೂರು ವಿಷಯಗಳ ಬಗ್ಗೆ ಕ್ಲಾರಿಫಿಕೇಶನ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ನೆಲಮಂಗಲ ತಾಲ್ಲೂಕು ಜನರಲ್ ಆಸ್ಪತ್ರೆಯನ್ನು ಬೆಂಗಳೂರು ಮೆಡಿಕಲ್ ಕಾಲೇಜಿನ ರಿ.ಓರಿಯೆಂಟೇಷನ್ ಟ್ರೈನಿಂಗ್‌ಗೆ ಉಪಯೋಗಿಸಿಕೊಳ್ಳುವುದಕ್ಕೆ ಅದನ್ನು ಅಟ್ಯಾಚ್ ಮಾಡಿದ್ದೇವೆ. ಆದ್ದರಿಂದ ಇದನ್ನು ಸ್ವಲ್ಪಮಟ್ಟಿಗೆ ಉತ್ತಮೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಈಗ ಇರತಕ್ಕಂಥ ಕಟ್ಟಡದಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಹೊಸ ಆಸ್ಪತ್ರೆಯನ್ನು ಕಟ್ಟಿಸಬೇಕು. ಅದಕ್ಕೋಸ್ಕರ ಲ್ಯಾಂಡ್‌ನ್ನು ಅಕ್ವೈರ್ ಮಾಡಬೇಕು. ಇದನ್ನು ಮಾಡುವುದಕ್ಕೆ ಇದುವರೆಗೆ ಸರ್ಕಾರ ದುಡ್ಡು ಕೊಟ್ಟಿಲ್ಲ. ಏನಾದರೂ ಮಾಡಿ ಇದಕ್ಕೆ ದುಡ್ಡು ಕೊಟ್ಟರೆ, ಡೊನೇಶನ್ ಮುಖಾಂತರ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ವರ್ಷ ನಮಗೆ ಕೇಂದ್ರ ಸರ್ಕಾರದಿಂದ ಕುಟುಂಬ ಯೋಜನೆ ಕಾರ್ಯಕ್ರಮದಲ್ಲಿ ಬಹುಮಾನ ಬಂದರೆ, ಈ ಕೆಲಸಕ್ಕೆ ವಿಶೇಷವಾಗಿ ಹಣ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಎರಡನೆಯದಾಗಿ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರ್ಸ್ ಯಾರು ಇದ್ದಾರೆ, ಈ ಡಾಕ್ಟರುಗಳಿಗೆ ಪೋಸ್ಟ್ ಗ್ರಾಜ್ಯುಯೇಶನ್‌ನಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡ

೧೨.೩೦ ಪಿ.ಎಂ.

ಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಹೇಳಬೇಕೆಂದರೆ, ಈ ವರ್ಷ ನಾವು ಡಿಪಾರ್ಟ್‌ಮೆಂಟ್‌ಮುಖಾಂತರ ಆರಿಸತಕ್ಕಂಥ ಸಂದರ್ಭದಲ್ಲಿ ಸೀನಿಯಾರಿಟಿ ಪ್ರಕಾರ ಇಂತಹವರನ್ನು ಆರಿಸಿದ್ದೇವೆ. ಮತ್ತೆ ಸೀನಿಯಾರಿಟಿ ಪ್ರಕಾರ ಆರಿಸಿರುವುದರಿಂದ, ಕೆಲವರು ಎರಡು ಸಾರಿ, ಮೂರು ಸಾರಿ, ನಾಲ್ಕು ಸಾರಿ ಫೇಲಾಗಿರುವಂಥವರನ್ನು ಕರ್ನಾಟಕ ಯೂನಿವರ್ಸಿಟಿಯವರು ಅಡ್ಮಿಟ್ ಮಾಡುವುದಕ್ಕೆ ಆಗದೇ ಇರುವುದರಿಂದ, ಅವರನ್ನು ಮಂಗಳೂರು ಯೂನಿವರ್ಸಿಟಿಗೆ ಕಳುಹಿಸಿದ್ದೇವೆ. ಅದಕ್ಕೋಸ್ಕರ ಅಲ್ಲಿ ಮಾತ್ರ ಸ್ಟಾಂಡರ್ಡ್ ಮೇಯಿನ್‌ಟೇನ್ ಮಾಡುತ್ತೀರಿ, ಇಲ್ಲಿ ಮೇಯಿನ್‌ಟೇನ್ ಮಾಡುವುದಕ್ಕಾಗುವುದಿಲ್ಲವೇ ಎಂದು ಹೇಳಿದ್ದಾರೆ. ಆದ್ದರಿಂದ ಒಂದೊಂದು ಕ್ಲಾಸ್‌ನಲ್ಲಿ ೩–೪ ಸಾರಿ ಫೇಲಾಗಿರುವುದರಿಂದ ಮತ್ತೆ ಪೋಸ್ಟ್ ಗ್ರಾಜ್ಯುಯೇಷನ್ ಓದುತ್ತೇವೆಂದು ಹೇಳಿದರೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಏನಾದರೂ ಮಾಡಿ, ನಮ್ಮ ಸರ್ಕಾರದ ಕಾಲೇಜುಗಳಲ್ಲೇ ಪೋಸ್ಟ್ ಗ್ರಾಜುಯೇಷನ್ ಪೋಸ್ಟ್‌ಗಳನ್ನು ಇನ್‌ಕ್ರೀಸ್ ಮಾಡಬೇಕೆಂದರೆ, ನಮ್ಮ ಪ್ರೊಫೆಸರ್ಸ್ ಹೆಚ್ಚಾಗಬೇಕು, ಮತ್ತೆ

ಅಸಿಸ್ಟೆಂಟ್ ಪ್ರೊಫೆಸರ್ಸ್ ಹೆಚ್ಚಾಗಬೇಕು. ಈ ದೃಷ್ಟಿಯಿಂದ ಕೆಲವರಿಗೆ ಸಿಕ್ಕಿಲ್ಲ, ಕೆಲವರಿಗೆ ಸಿಕ್ಕಿದೆ. ಆದರಲ್ಲಿ ಸೀನಿಯಾರಿಟಿ ಪ್ರಕಾರ ಕೊಡತಕ್ಕ ಸಂದರ್ಭದಲ್ಲಿ ಎಸ್.ಸಿ.ಯವರನ್ನೂ ಗಮನದಲ್ಲಿಟ್ಟು ಕೊಂಡು ಕೊಟ್ಟಿದ್ದೇವೆ.

ಶ್ರೀ ಎಂ. ಹಿಂಡಿಸಗೇರಿ.—ಈಗಾಗಲೇ ಕೆ. ಹೆಚ್. ಪಾಟೀಲರು ಹೇಳಿರುವಂತೆ ನನ್ನ ಕ್ಷೇತ್ರವಾದ ಹುಬ್ಬಳ್ಳಿಯಲ್ಲಿ ಒಂದು ತಿಂಗಳಿಂದ ನೀರುಸಾಗರ ಮತ್ತು ತುಂಬಾಳುಕೆರೆಯಿಂದ ಬರತಕ್ಕ ನೀರಿನ ಪೈಪು ಒಡೆದು ಚರಂಡಿ ನೀರು ಅದರೊಳಗೆ ನುಗ್ಗುತ್ತಿರುವುದರಿಂದ ನೀರಿನಲ್ಲಿ ಹುಳು ಬರುತ್ತಿವೆ. ಇದರ ಬಗ್ಗೆ ವರದಿ ಕೂಡ ಕೊಟ್ಟಿದೆ. ಆದರೆ ಯಾವ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಂಡಿಲ್ಲ, ಯಾವ ಮೆಡಿಕಲ್ ಆಫೀಸರ್ ಕೂಡ ಹೋಗಿ ಚೆಕಪ್ ಮಾಡಿಲ್ಲ. ಮಹಾರಾಷ್ಟ್ರ, ಬಾಂಬೆಯಲ್ಲಿ ಒಂದುಸಾರಿ ಹೀಗೆ ಆಗಿ, ಕಾಮಿನಿರೋಗ ಉದ್ಭವ ಆಗಿತ್ತು. ಆದ್ದರಿಂದ ಈಗಲೂ ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ. ಈ ನೀರಿನ ಸರಬರಾಜನ್ನು ನಿಲ್ಲಿಸಬೇಕು, ಯಾವ ಆಫೀಸರ್ ತಪ್ಪು ಮಾಡಿದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಸುಮಾರು ಅಸಿಸ್ಟೆಂಟ್ ಸರ್ಜನ್ಸ್ ಮತ್ತು ಮೆಡಿಕಲ್ ಆಫೀಸರ್ ಜಾಗಗಳು ಖಾಲಿ ಇವೆ, ಇದುವರೆಗೂ ಭರ್ತಿ ಮಾಡಿಲ್ಲ. ಯಾವಾಗ ಭರ್ತಿ ಮಾಡುತ್ತೀರಿ ? ನಮ್ಮ ರಾಜ್ಯದಲ್ಲಿ ಸುಮಾರು ಮೂರು ಸಾವಿರ ಜನರು ಹಾಜ್ ಯಾತ್ರೆಗೆ ಹೋಗು ತ್ತಾರೆ, ಅದು ಮೆಡಿಕಲ್ ಟ್ರೀಟ್‌ಮೆಂಟ್ ಸಲುವಾಗಿ ಈ ಸಾರಿ ಬೆಂಗಳೂರಿಗೆ ಬರುವುದಕ್ಕೆ ಮಾನ್ಯ ಮಂತ್ರಿಗಳುಹೇಳಿದ್ದಾರೆ. ಬೆಂಗಳೂರಿಗೆ ಬಂದರೆ ಮತ್ತೊಂದು ಹಾಜ್ ಯಾತ್ರೆ ಮಾಡಿದಹಾಗೆ ಆಗುತ್ತದೆ. ಅದರ ಸಲುವಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ನಮ್ಮ ಎರಡನೇ ಫೇಮಸ್ ಕಾಲೇಜು ಆದ ಕೆ.ಎಂ.ಸಿ. ಯಲ್ಲಿ ಈ ವರ್ಷ ಅಥವಾ ಮುಂದಿನ ವರ್ಷ ಈ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಿಂದ ಸುಮಾರು ಐದು ನೂರು ಜನರು ಹಾಜ್ ಯಾತ್ರೆಗೆ ಹೋಗುತ್ತಾರೆ. ಅವರಿಗೆ ಇಲ್ಲಿಯೇ ಟ್ರೀಟ್‌ಮೆಂಟ್ ಸಿಗುವಂಥ ವ್ಯವಸ್ಥೆ ಆಗಬೇಕು.

ಶ್ರೀ ಬಿ. ರಾಚಯ್ಯ.—ಇದಕ್ಕೆ ಸಂಬಂಧಿಸಿದ ಔಷಧಿ ಬೆಲೆ ೪ ಸಾವಿರ ರೂಪಾಯಿಗಳು ಆಗುತ್ತದೆ. ಅದಕ್ಕೋಸ್ಕರ, ನಾಲ್ಕು ಕೇಂದ್ರಗಳಲ್ಲಿ ಈ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ. ಬೆಂಗಳೂರು, ಮಂಗಳೂರು, ಗುಲ್ಬರ್ಗಾ ಮತ್ತು ಹುಬ್ಬಳ್ಳಿ, ಈ ನಾಲ್ಕು ಕೇಂದ್ರಗಳಲ್ಲಿ ಈ ಒಂದು ವ್ಯವಸ್ಥೆ ಮಾಡುತ್ತೇವೆ. ಈ ಬಾರಿ ಮಾತ್ರ ಬೆಂಗಳೂರಿನಲ್ಲಿ ಮಾಡಬೇಕೆಂದು ಹೇಳಿದ್ದೇವೆ, ಇನ್ನು ಕುಡಿಯುವ ನೀರಿನ ವಿಷಯದಲ್ಲಿ ಈಗಾಗಲೇ ಉತ್ತರ ಹೇಳಿದ್ದೇನೆ. ಈ ಬಗ್ಗೆ ಯಾರು ತಪ್ಪಿತಸ್ಥರು ಎಂಬುದನ್ನು ಕಂಡುಹಿಡಿದು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಇನ್ನು ಡಾಕ್ಟರುಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಕಳೆದ ವರ್ಷ ೨೦೦ ಪುರುಷ ಡಾಕ್ಟರು ಗಳು ಮತ್ತು ೧೦೦ ಲೇಡಿ ಡಾಕ್ಟರುಗಳನ್ನು ನೇಮಕ ಮಾಡಿದ್ದೇವೆ. ಇವರುಗಳಲ್ಲಿ ಯಾರು ಕೆಲಸದ ಮೇಲೆ ಹೋಗಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಒಟ್ಟು ೩೨೪ ಜನರಲ್ಲಿ ೧೫೦ ಜನ ಕೆ.ಪಿ.ಎಸ್.ಸಿ. ಯಿಂದ ಆಯ್ಕೆ ಮಾಡಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಆಸ್ಪತ್ರೆಗಳಲ್ಲಿನ ಡಾಕ್ಟರುಗಳ ವಿಷಯದ ಬಗ್ಗೆ ತುಂಬಾ ನೋವಾಗುತ್ತಿದೆ. ಕಾರಣ ಇಷ್ಟೇ. ಸರ್ಕಾರಿ ವೈದ್ಯರುಗಳು ಪೂರ್ಣವಾಗಿ ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಆಸ್ಪತ್ರೆಗೆ ಹೋದರೆ ಮನೆಗೆ ಬನ್ನಿ, ಅಥವಾ ಅವರು ನಡೆಸುತ್ತಿರುವ ನರ್ಸಿಂಗ್ ಹೋಮ್‌ಗೆ ಬನ್ನಿ ಎಂದು ಹೇಳುತ್ತಾರೆ. ಅದಕ್ಕಾಗಿ ಈ ರೀತಿ ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದೆಂದು ಹಿಂದೆ ಒಂದು ಏನು ಆಜ್ಞೆಯನ್ನು ಹೊರಡಿಸಿದ್ದರು, ಅದೇ ರೀತಿಯ ಆಜ್ಞೆಯನ್ನು ಈಗ ಮತ್ತೆ ಹೊರಡಿಸುತ್ತೀರಾ ? ಮತ್ತೆ ನೀವು ಮೆಡಿಕಲ್ ಕಾಲೇಜ್ ಸೀಟ್ ಕೊಡಬೇಕಾದರೆ ಟೆಂಡರ್ ಕರೆಯಿರಿ ಇಲ್ಲವೇ ಹರಾಜು ಮಾಡಿ. ಇದನ್ನು ಮಾಡಿದರೆ ಬಹಳ ದುಡ್ಡು ಬರುತ್ತದೆ. ಸರಕಾರಕ್ಕೆ ಹಣ ಬರುತ್ತದೆ. ಟೆಂಡರ್ ಅಥವಾ ಹರಾಜು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಇದು ಆಗಿಹೋಗಿದೆ, ಬೇರೆ ಪ್ರಶ್ನೆ ಕೇಳಿ.

ಅಧ್ಯಕ್ಷರು.—ನೀಲಕಂಠಪ್ಪನವರೇ, ತಾವು ನೇರವಾಗಿ ಪ್ರಶ್ನೆ ಕೇಳಿ, ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸರಕಾರಿ ಆಸ್ಪತ್ರೆಗಳು ಏನಾಗಿವೆ ಎಂದರೆ ಸರಕಾರಿ ವೈದ್ಯರು ವಿಶ್ರಾಂತಿ ಗೃಹಗಳಾಗಿವೆ.

ಶ್ರೀ ಆರ್. ಎನ್. ನಾಯಕ್.—ನೀವು ಸರಕಾರದಲ್ಲಿರತಕ್ಕಂಥವರು, ಅದನ್ನು ಕರ್ಟೈಲ್ ಮಾಡಬೇಕು, ನೀವು ಸರಕಾರಕ್ಕೆ ಸಪೋರ್ಟ್ ಮಾಡುತ್ತಿದ್ದೀರಿ, ಅದನ್ನು ಸ್ಟಾಪ್ ಮಾಡುವುದಕ್ಕೆ ಆಗುವುದಿಲ್ಲವೇ ?

ಅಧ್ಯಕ್ಷರು.—ನೀಲಕಂಠಪ್ಪನರೇ, ನೀವು ನೇರವಾಗಿ ನನ್ನ ಕಡೆ ನೋಡಿಕೊಂಡು ಹೇಳಬೇಕು, ಆ ಕಡೆ ನೋಡಿ ಏತಕ್ಕೆ ಮಾತನಾಡುವುದು ?

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಎದ್ದಕೂಡಲೇ ಅವರೂ ಎದ್ದುನಿಲ್ಲುತ್ತಾರೆ ನಾನು ಏನು ಮಾಡಲಿ ?

ಅಧ್ಯಕ್ಷರೇ, ಈಗಿನ ಸರಕಾರಿ ಆಸ್ಪತ್ರೆಗಳು ಏನಾಗಿವೆ ಅಂದರೆ, ಅವು ಸರಕಾರಿ ವೈದ್ಯರ ವಿಶ್ರಾಂತಿ ಗೃಹಗಳಾಗಿವೆ. ಆದುದರಿಂದ ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ಮೊದಲು ತಪ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಇದು ಆಗಿದೆಯಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇದನ್ನು ನಿಲ್ಲಿಸುವುದಕ್ಕೆ ಏನಾದರೂ ಕ್ರಮ ಕೈಗೊಳ್ಳುತ್ತೀರಾ? ಮೆಡಿಕಲ್ ಕಾಲೇಜ್ ಸೀಟ್ ಹರಾಜ್ ಮಾಡಿ ಅಥವಾ ಟೆಂಡರ್ ಕರೆಯಿರಿ, ಇನ್ನು ಮೂರನೆಯದು ಎಂದರೆ ನಮ್ಮ ತಾಲ್ಲೂಕಿನ ಆಸ್ಪತ್ರೆಗಳಿಗೆ......

ಅಧ್ಯಕ್ಷರು.—ಹಾಡಿದ್ದೇ ಹಾಡೋ ಕಿಸುಬಾಯಿ ದಾಸ ಎಂದಹಾಗೆ ಆಯಿತು.

ಶ್ರೀ ಬಿ. ಆರ್. ನೀಲಕಂಠಪ್ಪ.—ಹೋದ ವರ್ಷ ಅರ್ಧಕಿಂತ ಕಡಿಮೆ ಔಷಧಗಳ ಸರಬರಾಜು ಆಗಿದೆ. ಇದಕ್ಕೆ ಕಾರಣ ಏನು ? ಔಷಧಗಳನ್ನು ಸರಿಯಾಗಿ ಕೊಡದೇ ಬಹಳ ತೊಂದರೆಯಾಗಿದೆ, ಇದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ? ಇನ್ನು ಪಿ.ಹೆಚ್.ಸಿ.ಗಳನ್ನು ಕೊಡದೇ ಇರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ತಾವೇನಾದರೂ ಮಧ್ಯಂತರ ಆಜ್ಞೆ ಹೊರಡಿಸುತ್ತೀರಾ ? ಹೆಚ್ಚಿನ ಪಿ.ಹೆಚ್.ಸಿ.ಗಳನ್ನು ಕೊಡುತ್ತೀರಾ ?

ಶ್ರೀ ಸಂಪಾಪತಿ.—ಸೀಟ್‌ಗಳನ್ನು ಹರಾಜು ಮಾಡಬೇಕೆಂದು ಹೇಳಿದ್ದಾರೆ. ಆದರೆ ಸರಕಾರದವರೇ ಹರಾಜು ಹಾಕಬೇಕೆಂದು ಹೇಳಲಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಟೆಂಡರ್ ಕರೆಯಲಿ ಅಥವಾ ಹರಾಜು ಹಾಕಲಿ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ಆಸ್ಪತ್ರೆಗಳು ಡಾಕ್ಟರ್‌ಗಳ ವಿಶ್ರಾಂತಿ ಗೃಹ ಆಗಿದೆ ಎಂದು ಹೇಳಿದರು. ಕೆಲವರಿಗೆ ಮನೆಗಳು ಸಿಗದೇ ಇದ್ದಾಗ, ಕೆಲವು ಸಂದರ್ಭಗಳಲ್ಲಿ ಆ ರೀತಿ ಆಗಿದ್ದರೂ ಆಗಿರಬಹುದು. ಈಗ ನಾವು ನಮಗೆ ಆರೋಗ್ಯ ರಕ್ಷಣೆ ನೋಡಿಕೊಳ್ಳತಕ್ಕಂಥ ಡಾಕ್ಟರ್‌ಗಳು ಕೆಲವು ಸಂದರ್ಭದಲ್ಲಿ ವಿಶ್ರಾಂತಿ ಬೇಕೆಂದಾಗ ಈ ರೀತಿ ಆಗಿದ್ದರೆ ಅದಕ್ಕೆ ಅಡ್ಡಿಬರುವುದು ಬೇಡ. ಕೆಲವು ಸಮಯದಲ್ಲಿ ಈ ರೀತಿ ಆಗಿರಬಹುದು. ಆದರೆ ಅವರು ಕೆಲಸ ಮಾಡಲಿಲ್ಲ, ಅಂದರೆ ಲಂಚ ಹೊಡೆದರು ಎಂದರೆ ಅದನ್ನು ಹೇಳಿ. ನೀವು ಸುಮ್ಮನೆ ಏನೋಹೇಳಬೇಡಿ. ಕೆಲವುಕಡೆ ಹೋದಾಗ ಡಾಕ್ಟರ್‌ಗೆ ಆಸ್ಪತ್ರೆ ಬಿಟ್ಟರೆ, ಬೇರೆ ಕಡೆ ವಾಸಕ್ಕೆ ಮನೆ ಸಿಗುವುದಿಲ್ಲ.

ಶ್ರೀ ಬಿ. ಆರ್, ನೀಲಕಂಠಪ್ಪ.—ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದು ಎಂದು ಹೇಳಿ.

ಶ್ರೀ ಬಿ. ರಾಚಯ್ಯ.—ಮಿಕ್ಕ ವಿಷಯಗಳಿಗೆ ಉತ್ತರ ಹೇಳಿದ್ದೇನೆ. ಆದ್ದರಿಂದ ಈಗ ನಾನು ಪುನಃ ಉತ್ತರ ಹೇಳುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಅಧ್ಯಕ್ಷರೇ' ಆರೋಗ್ಯದ ವಿಚಾರದಲ್ಲಿ ನಾನೂ ಕ್ಷೇಮ, ನೀವೂ ಕ್ಷೇಮವೇ ಎಂದು ಕೇಳುವುದು ರೂಢಿಯಲ್ಲಿದೆ. ಕಬ್ಬಳ್ಳಿಯಲ್ಲಿ ಆಸ್ಪತ್ರೆ ಇದೆ, ಡಾಕ್ಟರ್‌ಗೆ ಕ್ವಾರ್ಟರ್ಸ್ ಕಟ್ಟಿಸಿಕೊಟ್ಟಿದ್ದೇವೆ. ಎಲ್ಲಾ ತರಹದ ಸೌಕರ್ಯ ಇದೆ. ಆದರೂ ಅಲ್ಲಿನ ಡಾಕ್ಟರ್ ವಾರಕ್ಕೆ ಮೂರು ದಿವಸ ಅಲ್ಲಿ ಇರುವುದಿಲ್ಲ. ಶುಕ್ರವಾರ, ಶನಿವಾರ, ಭಾನುವಾರ ಡಾಕ್ಟರ್ ಆಬ್ಸೆಂಟ್, ಅವರು ಎಲ್ಲಿರುತ್ತಾರೆ ಎಂದು ಪತ್ತೆ ಇಲ್ಲ. ಕೇಳಿತು ಎಂದರೆ ನನ್ನ ಮಕ್ಕಳಿಗೆ ಆ ಊರಿನಲ್ಲಿಟ್ಟು ಕಾನ್‌ವೆಂಟ್‌ಗೆ ಕಳುಹಿಸುತ್ತಿದ್ದೇನೆ, ಅಲ್ಲಿಗೆ ಹೋಗಿದ್ದೆ

ಎಂದು ಹೇಳುತ್ತಾರೆ. ಇಂತಹ ಡಾಕ್ಟರ್ ಅನ್ನು ಇಟ್ಟುಕೊಂಡು ನಾವು ಅವಸ್ಥೆ ಪಡಬೇಕಾಗಿದೆ. ಗಂಡ ಹೆಂಡತಿ ಜೋಡಿ ಡಾಕ್ಟರ್ ಆಗಿರುವವರನ್ನು ಅಲ್ಲಿಗೆ ಹಾಕಿಕೊಡಿ ಎಂದರೆ ಮಾನ್ಯ ಮಂತ್ರಿಗಳು ಕೇಳುವುದಿಲ್ಲ. ಅದನ್ನು ಮಾಡಿಕೊಡುತ್ತೀರಾ? ಅಲ್ಲಿರುವ ಜನರು, ತೆರಕಣಾಂಬಿ ಮತ್ತು ಬೆಳಚವಾಡಿಗೆ ಹೋಗುತ್ತಾರೆ, ಅಲ್ಲಿನ ಡಾಕ್ಟರ್ ಒಳ್ಳೆಯವರು ಎಂದು ಅಲ್ಲಿಗೆ ಹೋಗುತ್ತಾರೆ. ಇಂತಹ ಸೊಗಸಾದ ಆಸ್ಪತ್ರೆ ಕಟ್ಟಿಸಿ ಎಲ್ಲಾ ವ್ಯವಸ್ಥೆ ಮಾಡಿಕೊಟ್ಟರೂ ಉಪಯೋಗವಿಲ್ಲದಂತೆ ಆಗಿದೆ. ದಯೆಯಿಟ್ಟು ಇದನ್ನು ಸರಿಮಾಡಿಸಿಕೊಡಿ ಗುಂಡಲುಪೇಟೆ ತಾಲ್ಲೂಕು ಜನರಲ್ ಆಸ್ಪತ್ರೆಗೆ ಕಿಚನ್ ಬ್ಲಾಕ್ ಕಟ್ಟಿಸಬೇಕೆಂದು ನಾನು ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಜಗಳ ಆಡಿ ಎರಡು ಸಲ ದುಡ್ಡು ಕೊಡಿಸಿದೆ. ನಿಮ್ಮ ಅಧಿಕಾರಿಗಳು ಅದನ್ನು ಬೇರೆ ಯಾವಯಾವುದಕ್ಕೋ ಉಪಯೋಗಿಸಿಕೊಂಡು ನಿಮಗೇನೂ ಒಬ್ಬರು ಮಿನಿಸ್ಟರ್ ಇದ್ದಾರೆ, ಒಬ್ಬರು ಎಂ.ಎಲ್.ಎ. ಇದ್ದಾರೆ, ಬೇರೆ ಕಡೆಯಿಂದ ತರುತ್ತಾರೆ ಎಂದೆ ನಾವೇನು ಕದಿಯುವುದಕ್ಕೆ ಆಗುತ್ತದೆಯೇ? ಅಲ್ಲಿರುವ ದುಡ್ಡನ್ನು ಇದಕ್ಕೆ ಕೊಡಿಸಿದರೆ, ಅದಕ್ಕೆ ತಕ್ಕಹಾಗೆ ಉಪಯೋಗಿಸಿಕೊಳ್ಳದೇ ಬೇರೆಯದಕ್ಕೆ ಉಪಯೋಗಿಸಿಕೊಂಡು, ಕಿಚನ್ ಬ್ಲಾಕ್ ಇಲ್ಲದಹಾಗೆ ಮಾಡಿರುತ್ತಾರೆ. ಕಿಚನ್ ಬ್ಲಾಕ್ ಕ್ವಾರ್ಟರ್ಸ್, ಪಾರ್ಕ್ ಎಲ್ಲದಕ್ಕೂ ಸ್ಥಳ ಕೊಟ್ಟಿದ್ದೇವೆ. ನೀವೂ ಸಹ ಹಿಂದೆ ವೈಸ್‌ಪ್ರೆಸಿಡೆಂಟ್‌ರವರ ಮುಂದೆ ಪ್ರಾಮಿಸ್ ಮಾಡಿರುತ್ತೀರಿ. ಈಗ ಪ್ರೆಸಿಡೆಂಟ್ ಆಗಿರುವವರು ಹಿಂದೆ ವೈಸ್ ಪ್ರೆಸಿಡೆಂಟ್ ಆಗಿದ್ದಾಗ ನೀವು ಪ್ರಾಮಿಸ್ ಮಾಡಿರುತ್ತೀರಿ. ಇದು ಎರಡನೆಯದು. ಮೂರನೇಯದಾಗಿ ಜಿಲ್ಲಾಪರಿಷತ್ತಿನವರಿಗೆ ಈ ಆಸ್ಪತ್ರೆಗಳ ಡಾಕ್ಟರ್ಸ್‌ನ್ನು ವಹಿಸಿದ್ದೀರಿ. ಅವರುಗಳಿಗೆ ದುಡ್ಡು ಕೊಡುತ್ತಿಲ್ಲ. ಔಷಧಿ ಕೊಡುತ್ತಿಲ್ಲ. ಒಂದು ವೇಳೆ ಔಷಧಿಗಳನ್ನು ಕೊಟ್ಟರೂ ಎಕ್ಸ್‌ಪೈರಿ ಡೇಟ್ ಆಗಿರುವ ಔಷಧಿಗಳನ್ನು ಕೊಟ್ಟಿದ್ದಾರೆ. ಇಂತಹ ಔಷಧಿಗಳನ್ನು ರೋಗಿಗಳಿಗೆ ಕೊಟ್ಟರೆ ಅವರು ಬದುಕಬೇಕೋ ಅಥವಾ ಸಾಯಬೇಕೋ ತಾವೇ ಹೇಳಿ ಇಂತಹ ಔಷಧಿಯನ್ನು ಉಪಯೋಗಿಸುವುದಕ್ಕಾಗುತ್ತದೆಯೇ? ಇದಕ್ಕೆ ಯಾರು ಜವಾಬ್ದಾರರೋ ಅವರನ್ನು ಹಿಡಿದು ನೇಣು ಹಾಕಬೇಕೆಂದು ನನ್ನ ಅಭಿಪ್ರಾಯ. ಆಧುನಿಕ ಯಂತ್ರೋಪಕರಣಗಳನ್ನು ತರಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಎಕ್ವಿಪ್‌ಮೆಂಟ್ಸ್‌ನ್ನು, ನೋಡುವಂತಹ ಟೆಕ್ನಿಷಿಯನ್ಸ್ ಯಾರಾದರೂ ಇದ್ದಾರಾ? ಅವರಿಗೆ ತಾವೇನಾದರೂ ಸ್ಪೆಷಲ್ ಟ್ರೈನಿಂಗ್ ಕೊಟ್ಟಿದ್ದೀರಾ? ಟ್ರೈನಿಂಗ್ ಇಲ್ಲದಿದ್ದರೆ ಲಂಗ್ ಹೋಗಿ ಕಿಡ್ನಿ ಆಗುವುದು ಕಿಡ್ನಿ ಹೋಗಿ ಹಾರ್ಟ್ ಆಗುವುದು. ಈ ರೀತಿ ವ್ಯತ್ಯಾಸವಾದರೆ ಏನು ಮಾಡುವುದು? ಆದ್ದರಿಂದ ದಯಮಾಡಿ ಟೆಕ್ನಿಷಿಯನ್ಸ್‌ಗೆ ತರಬೇತಿ ಕೊಡಿ. ಆಮೇಲೆ ಬೇಕಾದರೆ ಆ ಅಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಲಿ. ಇನ್ನು ನಾಲ್ಕನೆಯದಾಗಿ ನಮ್ಮ ಜಿಲ್ಲೆಯಲ್ಲಿ ಕೆ. ಆರ್. ಆಸ್ಪತ್ರೆ ಇದೆ. ದಯಮಾಡಿ ತಾವು ಅಲ್ಲಿಗೆ ತಮ್ಮ ಇಲಾಖೆಯ ಆಫೀಸರ್ಸ್‌ನ್ನು ಕರೆದುಕೊಂಡು ಹೋಗಿ ನೋಡಬೇಕು. ಅಲ್ಲಿ ಲಿಫ್ಟ್ ವರ್ಕ್ ಆಗುತ್ತಿದೆಯೋ ಇಲ್ಲವೇ ಮತ್ತು ಇನ್ನುಳಿದ ಎರಡು ಲಿಫ್ಟ್‌ಗಳ ಕೆಲಸ ಮುಕ್ತಾಯವಾಯಿತೇ ಇಲ್ಲವೆ ಎಂಬುದನ್ನು ಸಹ ನೋಡಬೇಕು. ಬೆಡ್‌ಶೀಟ್ಸ್ ಇಲ್ಲ, ರಗ್ಸ್ ಇಲ್ಲ, ಬೆಡ್ ಫ್ಯಾನ್ಸ್ ಇಲ್ಲ, ಏನೂ ಇಲ್ಲ. ಅಲ್ಲಿ ಹೋಗುವುದಕ್ಕಾಗುವುದಿಲ್ಲ ಗಬ್ಬು ಗಬ್ಬು ವಾಸನೆ ನೋಡುವುದಕ್ಕೆ ಸಾಧ್ಯವಿಲ್ಲ. ತಾವೊಂದು ಸಾರಿ ಹೋಗಿ, ಅದು ನಮ್ಮ ಡಿಸ್ಟ್ರಿಕ್ಟ್ ಆಸ್ಪತ್ರೆ. ನಾವೂ ಆರೋಗ್ಯವಾಗಿರಬೇಕು ನೀವೂ ಆರೋಗ್ಯವಾಗಿರಬೇಕು. ಅದಕ್ಕೆ ನಾನು ಮೊದಲೇ ಹೇಳಿದ್ದು ನಾವು ಕ್ಷೇಮವಾಗಿದ್ದು ನೀವು ಕ್ಷೇಮವಾಗಿರಬೇಕೆಂದು.

ಶ್ರೀ ಬಿ. ರಾಚಯ್ಯ.—ಈಗ ತೆರಕಣಾಂಬಿಯಲ್ಲಿರತಕ್ಕಂಥ ಡಾಕ್ಟರ್ ಚೆನ್ನಾಗಿ ನೋಡುತ್ತಾರೆಂದು ಜನ ಅಲ್ಲಿಗೆ ಹೋಗುತ್ತಾರೆಂದು ಹೇಳಿದರು. ಬೇಕಾದರೆ ಅವರನ್ನೇ ಅಲ್ಲಿಗೆ ನಾನು ಹಾಕಿ ಕೊಡುತ್ತೇನೆ. ನೀವು ಅಲ್ಲಿಯೇ ಹೋಗಿ ಇದ್ದಿದ್ದರೆ ಅವರು ಇನ್ನೂ ಉತ್ತಮ ಕೆಲಸ ಮಾಡುತ್ತಿದ್ದರು. ನಾವು ಹೋದಾಗ ಆ ಡಾಕ್ಟರ್ ಆ ದಿವಸ ಅಲ್ಲಿರಲಿಲ್ಲವೆಂದು ಕಾಣುತ್ತದೆ....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನ್ಯಾರನ್ನೂ ರೆಕಮೆಂಡ್ ಮಾಡುತ್ತಿಲ್ಲ. ನನಗೆ ಗಂಡ ಹೆಂಡತಿ ಇರುವಂತಹ ಒಂದು ಜೋಡಿ ಡಾಕ್ಟರ್ಸ್ ಬೇಕು ಅಷ್ಟೇ.

ಶ್ರೀ ಬಿ. ರಾಚಯ್ಯ.—ಇನ್ನು ಆಧುನಿಕ ಉಪಕರಣಗಳನ್ನು ರೀಡ್ ಮಾಡತಕ್ಕಂಥ ತಜ್ಞರು ಇದ್ದಾರಾ ಎಂದು ಕೇಳಿದ್ದಾರೆ, ನಮ್ಮಲ್ಲಿ ಬಹಳ ಉತ್ತಮವಾದ ತಜ್ಞರು ಇದ್ದಾರೆ, ಬಹಳ ಹೆಸರುವಾಸಿಯಾಗಿರತಕ್ಕ ತಜ್ಞರು ಇದ್ದಾರೆ. ಅವರೇ ಹೇಳಿದ್ದಾರೆ. ಆದ್ದರಿಂದ ನಾವು ಈ ಉಪಕರಣಗಳನ್ನು ಟೀಚಿಂಗ್ ಕಾಲೇಜುಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಅದು ಕೆ. ಎಂ. ಸಿ. ಆಸ್ಪತ್ರೆ,

ಬೆಂಗಳೂರು ಆಸ್ಪತ್ರೆ, ಮೈಸೂರು ಆಸ್ಪತ್ರೆ ಮುಂತಾದ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನೀವು ಹೇಳಿದ ಹಾಗೆ ಗುಂಡ್ಲುಪೇಟೆಗೆ ಕೊಡುವುದಕ್ಕಾಗುವುದಿಲ್ಲ. ಇನ್ನು ಅಲ್ಲಿರತಕ್ಕಂಥ ಎಕ್ಸರೇ ಯೂನಿಟ್ಸ್‌ಗೆ ಟೆಕ್ನಿಷಿಯನ್ಸ್ ಬೇಕಾದರೆ ಕೊಡೋಣ. ಇನ್ನು ಅಡಿಗೆ ಒಗ್ಗೆ ಮಾನ್ಯ ಸದಸ್ಯಣಿಯವರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಜಿಲ್ಲಾ ಪರಿಷತ್ತಿನವರಿಗೆ ಹೇಳಿ ಮಾಡಿಸುತ್ತೇನೆ. ಮತ್ತೆ ಐ. ಟಿ. ಪಿ. ಪ್ರೋಗ್ರಾಂ ಅನ್ನು ತಮ್ಮ ಜಿಲ್ಲೆಯಲ್ಲಿ ಅಳವಡಿಸಿ ಎಂದು ಕೇಳಿದ್ದಾರೆ. ಅವರು ಇನ್ನು ಏನೇನು ಹೇಳಿದ್ದಾರೋ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ರಮೇಶ್‌ಕುಮಾರ್.—ಪ್ರೈವೇಟ್ ಮೆಡಿಕಲ್ ಕಾಲೇಜ್‌ನವರು ಸರ್ಕಾರದ ಕ್ಲಿನಿಕಲ್ ಫೆಸಿಲಿಟೀಸನ್ನು ಉಪಯೋಗಿಸಿಕೊಳ್ಳುವುದರಿಂದ ಅವರು ಸರ್ಕಾರಕ್ಕೆ ಹಣ ಕೊಡಬೇಕಾಗುತ್ತದೆ ನನಗೆ ತಿಳಿದ ಒಂದು ವರ್ತಮಾನದ ಪ್ರಕಾರ ಪ್ರೈವೇಟ್ ಮೆಡಿಕಲ್ ಕಾಲೇಜಿನವರಿಂದ ಬಹಳ ಹೆಚ್ಚು ಮೊತ್ತದ ಹಣ ಸರ್ಕಾರಕ್ಕೆ ಬಾಕಿ ಇದೆಯೆಂದು ಗೊತ್ತಾಗಿದೆ, ಈ ಹಣವನ್ನು ವಸೂಲಿ ಮಾಡುವುದಕ್ಕೆ ಸರ್ಕಾರದವರು ಯಾವ ಪ್ರಯತ್ನ ಮಾಡಿದ್ದಾರೆ ? ಅವರಲ್ಲಿ ಹಣವಿಲ್ಲದೆ ಅವರು ಕೊಟ್ಟಿಲ್ಲವೋ ಅಥವಾ ಸರ್ಕಾರ ವಸೂಲಿಗೆ ಮುತವರ್ಜಿ ವಹಿಸಿಲ್ಲವೋ ? ಅಥವಾ ಅವರುಗಳಿಂದ ವಸೂಲಿ ಮಾಡಬಾರದೆಂದು ಸರ್ಕಾರಕ್ಕೆ ಮತ್ತು ಸಚಿವರಿಗೆ ಏನಾದರೂ ಒತ್ತಾಯ ಇದೆಯೋ ? ಈ ಬಗ್ಗೆ ನನಗೆ ಸರಿಯಾದ ಮಾಹಿತಿ ಕೊಡಬೇಕು. ಸಣ್ಣಪುಟ್ಟ ಬಾಕಿ ಇದ್ದರೆ ನಿರ್ದಾಕ್ಷಿಣ್ಯವಾಗಿ ವಸೂಲು ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ. ಈ ಸದನದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವಾಗ ಅವರ ಅಭಿಪ್ರಾಯವನ್ನು ತೆಗೆದುಕೊಂಡರೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಮ್ಯಾನೇಜ್‌ಮೆಂಟ್‌ನವರ ಪರವಾಗಿದ್ದಂತೆ ಕಾಣಲಿಲ್ಲ. ಇಂತಹ ಜನರಿಗೆ ತಾವೇತಕ್ಕೆ ಮುಲಾಜು ತೋರಿಸುತ್ತಿದ್ದೀರಿ ? ದಯಮಾಡಿ ನನಗೆ ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ೧೯೮೦ನೇ ಇಸವಿಯಲ್ಲಿ ಬಂದಿರತಕ್ಕಂಥ ಕಾಲೇಜುಗಳಿಗೆ ೫ ವರ್ಷ ಕ್ಲಿನಿಕಲ್ ಫೆಸಲಿಟೀಸ್ ಕೊಡಬೇಕೆಂದು ನಿಯಮ ಇದೆ. ೧೯೮೧ರಿಂದೀಚೆಗೆ ಪ್ರಾರಂಭವಾಗಿರತಕ್ಕಂಥ ಮೆಡಿಕಲ್ ಕಾಲೇಜುಗಳಿಗೆ ಕ್ಲಿನಿಕಲ್ ಫೆಸಿಲಿಟೀಸ್ ೧೦ ವರ್ಷ ಕೊಡಬೇಕೆಂದು ನಿಯಮ ಇದೆ. ಇದು ಕ್ಯಾಬಿನೇಟ್‌ನಲ್ಲಿ ತೀರ್ಮಾನವಾಗಿದೆ. ೧೦ ವರ್ಷಗಳಿಗಿಂತ ಇನ್ನು ಹೆಚ್ಚಿಗೆಬೇಕಾದ ಸಂದರ್ಭದಲ್ಲಿ ಎಕ್ಸ್‌ಪ್ಯಾಂಡಡ್ ಪ್ರೋಗ್ರಾಂ ಪ್ರಕಾರ ಬಿಲ್ಡಿಂಗ್ ಎಕ್ವಿಪ್‌ಮೆಂಟ್ಸ್ ಅನ್ನು ಅವರೇ ಕೊಡಿಸಬೇಕಾಗುತ್ತದೆ. ಆಗ ನಾವು ಕಂಟಿನ್ಯೂ ಮಾಡುತ್ತೇವೆಂದು ಹೇಳಿದ್ದೇವೆ. ಕ್ಲಿನಿಕಲ್ ಫೆಸಿಲಿಟಿಯನ್ನು ಖಾಸಗಿ ಕಾಲೇಜಿನವರು ಉಪಯೋಗಿಸಿಕೊಂಡರೆ ಪ್ರತಿ ವಿದ್ಯಾರ್ಥಿಗೆ ೨೫೦೦ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ಸರ್ಕಾರ ಆರ್ಡರ್‌ನ್ನು ಮಾಡಿತ್ತು. ಈ ಆರ್ಡರ್ ಪ್ರಕಾರ ಸರ್ಕಾರಿ ಆಸ್ಪತ್ರೆಗಳನ್ನು ಉಪಯೋಗಿಸಿಕೊಂಡಿರುವ ಖಾಸಗಿ ಕಾಲೇಜುಗಳವರು ಹಣವನ್ನು ಕಟ್ಟಬೇಕೆಂದು ಈಗಾಗಲೇ ನೋಟೀಸ್‌ಗಳನ್ನು ಕೊಟ್ಟಿದ್ದೇವೆ. ನೋಟೀಸ್ ಕೊಟ್ಟರೂ ಖಾಸಗಿ ಕಾಲೇಜಿನವರು ಹಣ ಕಟ್ಟದೆ ಇದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ. ಸರ್ಕಾರಿ ಕ್ಲಿನಿಕಲ್ ಫೆಸಿಲಿಟಿಯನ್ನು ಉಪಯೋಗ ಮಾಡಿಕೊಂಡಿರುವ ಖಾಸಗಿ ಕಾಲೇಜಿನವರು ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಡಲೇಬೇಕಾಗುತ್ತದೆ. ಇನ್ನು ಮುಂದೆ ಹೊಸದಾಗಿ ಸರ್ಕಾರದ ಕ್ಲಿನಿಕ್‌ನ್ನು ಯಾವುದಾದರೂ ಖಾಸಗಿ ಕಾಲೇಜಿನವರು ಕೇಳಿದರೆ ಪ್ರಾರಂಭದಿಂದಲೇ ಕ್ಲಿನಿಕಲ್ ಫೀಸನ್ನು ವಸೂಲಿ ಮಾಡಿಕೊಳ್ಳಲಾಗುತ್ತದೆ, ಈಗಾಗಲೇ ಕ್ಲೀನಿಕಲ್ ಫಿಸಿಲಿಟಿಯನ್ನು ಉಪಯೋಗ ಮಾಡಿಕೊಂಡು ಹಣ ಕಟ್ಟದೇ ಇರತಕ್ಕ ಖಾಸಗಿ ಕಾಲೇಜುಗಳವರಿಂದ ಹಣವನ್ನು ವಸೂಲು ಮಾಡುತ್ತೇವೆ. ಅವರು ಹಣವನ್ನು ಕೊಡದೇ ಇದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಕೆಲವೊಂದು ರೋಗಗಳಿಗೆ ಜನಸಾಮಾನ್ಯರು, ಮತ್ತು ವಿದ್ಯೆ ಇಲ್ಲದವರು ತುತ್ತಾಗುತ್ತಾರೆ. ಅವರುಗಳಿಗೆ ರೋಗದ ಬಗ್ಗೆ ಸೂಕ್ತ ಮಾರ್ಗದರ್ಶನ ಇಲ್ಲದಿರುವುದೇ ಇದಕ್ಕೆ ಕಾರಣವಾಗಿರುತ್ತದೆ. ಕ್ಯಾನ್ಸರ್ ರೋಗ ಬಂದರೆ ಬದುಕುವುದಿಲ್ಲ ಎನ್ನುವ ಮನೋಭಾವನೇ ಹಳ್ಳಿಯ ಜನರಲ್ಲಿ ಮೂಡಿದೆ. ಮುಂಜಾಗ್ರತಾ ಕ್ರಮ ತೆಗೆದುಕೊಂಡರೆ ಕ್ಯಾನ್ಸರ್ ರೋಗದಿಂದ ಮುಕ್ತರಾಗಬಹುದೆಂದು ಹಳ್ಳಿಯ ಜನರುಗಳಿಗೆ ಗೊತ್ತಿರುವುದಿಲ್ಲ. ಏಕೆಂದರೆ ಅವರಿಗೆ ಸರಿಯಾದ ತಿಳುವಳಿಕೆಯನ್ನು ಸರ್ಕಾರದವರು ಕೊಟ್ಟಿಲ್ಲ. ಕಿದ್ವಾಯಿ ಕ್ಯಾನ್ಸರ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಇರುವ ಶ್ರೀ ಕೃಷ್ಣ ಭಾರ್ಗವ ಎನ್ನುವವರನ್ನು ನಮ್ಮ ಊರಿಗೆ ಕರೆದುಕೊಂಡು ಹೋಗಿ ಸಾಮೂಹಿಕವಾಗಿ ರೋಗಗಳನ್ನು ಪತ್ತೆ ಹಚ್ಚುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ೩೦೦೦ ಜನರನ್ನು ತಪಾಸಣೆ ಮಾಡಿದ್ದಕ್ಕೆ ಅದರಲ್ಲಿ ೪೦ ಜನರಿಗೆ ಕ್ಯಾನ್ಸರ್

ರೋಗ ಇರುವುದು ಪತ್ತೆ ಆಯಿತು. ಇವರುಗಳಿಗೆ ಸಕಾಲದಲ್ಲಿ ಚಿಕಿತ್ಸೆ ಕೊಟ್ಟರೆ ರೋಗ ಗುಣವಾಗುತ್ತದೆಂದು ಆ ಡಾಕ್ಟರ್‌ರವರು ಹೇಳಿದರು. ಕ್ಯಾನ್ಸರ್ ರೋಗ ತಗುಲಿದ ಮೇಲೆ ಆದಷ್ಟು ಜಾಗ್ರತೆ ಚಿಕಿತ್ಸೆಯನ್ನು ಪಡೆಯಬೇಕಾಗುತ್ತದೆ. ಒಂದನೇ ಹಂತ ಮತ್ತು ಎರಡನೇ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆಯನ್ನು ಕೊಟ್ಟರೆ ರೋಗಿಯು ಗುಣಮುಖನಾಗುತ್ತಾನೆ. ೩ ಮತ್ತು ನಾಲ್ಕನೇ ಸ್ಟೇಜ್‌ಗೆ ರೋಗವು ಉಲ್ಬಣಗೊಂಡರೆ ರೋಗಿಯನ್ನು ಉಳಿಸುವುದಕ್ಕಾಗುವುದಿಲ್ಲ. ಈ ರೋಗ ಮನುಷ್ಯರಿಗೆ ತಂಬಾಕು, ಬೀಡಿ, ಸಿಗರೇಟು ಸೇದುವುದರಿಂದ ಬರುತ್ತದೆ. ಈ ರೀತಿ ತಂಬಾಕು ಮತ್ತು ಇತರೆ ವಸ್ತುಗಳನ್ನು ಸೇವಿಸುವುದರಿಂದ ಕ್ಯಾನ್ಸರ್ ರೋಗ ಬರುತ್ತದೆಂದು ಜನ ಸಾಮಾನ್ಯರಿಗೆ ತಿಳುವಳಿಕೆ ಕೊಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ? ರೋಗಿಯ ಹೊಟ್ಟೆಯಲ್ಲಿ ಕ್ಯಾನ್ಸರ್ ಗೆಡ್ಡೆ ಬಂದರೆ ಕೂಡಲೇ ಚಿಕಿತ್ಸೆ ತೆಗೆದುಕೊಳ್ಳಬೇಕು. ಜನ ಸಾಮಾನ್ಯರಿಗೆ ಈ ರೋಗದ ಲಕ್ಷಣಗಳು ಯಾವ ರೀತಿ ಇರುತ್ತವೆ ಎಂಬ ಬಗ್ಗೆ ತಿಳುವಳಿಕೆ ಕೊಡಬೇಕು. ತಂಬಾಕು ನಿಷೇಧ ಕಾನೂನನ್ನು ನಮ್ಮ ಸರ್ಕಾರ ಜಾರಿಗೆ ತರಬೇಕು ತಂಬಾಕು ನಿಷೇದವನ್ನು ಜಾರಿಗೆ ತರಬೇಕೆಂದು ಪ್ರಸ್ತಾಪ ಆಗಿದೆ. ಆದರೆ, ಅದನ್ನು ಅನುಷ್ಠಾನಗೊಳಿಸಲಿಲ್ಲ. ಮದ್ರಾಸ್ ಹಾಗೂ ಬೇರೆ ರಾಜ್ಯಗಳಲ್ಲಿ ಈಗಾಗಲೇ ತಂಬಾಕು ನಿಷೇಧ ಕಾಯಿದೆಯನ್ನು ಜಾರಿಗೆ ತರಲಾಗಿದೆ. ತಾವು ಏಕೆ ಆ ಕಾನೂನನ್ನು ಜಾರಿಗೆ ತರುವುದಕ್ಕೆ ವಿಳಂಬ ಮಾಡುತ್ತೀರಿ ? ಆದಷ್ಟು ಬೇಗ ಈ ಕಾನೂನನ್ನು ಜಾರಿಗೆ ತರಬೇಕೆಂದು ಕೇಳುತ್ತೇನೆ. ಆಮೇಲೆ ಪುತ್ತೂರು ತಾಲ್ಲೂಕಿನಲ್ಲಿ ೧೦೦ಬೆಡ್‌ಗಳು ಉಳ್ಳ ಆಸ್ಪತ್ರೆಯಾಗಬೇಕೆಂಬ ಬೇಡಿಕೆ ಇದೆ, ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಹಾಗೂ ಈಗಿರುವ ಆಸ್ಪತ್ರೆಯಲ್ಲಿ ಸ್ವಲ್ಪ ತಪ್ಪಿಸುವುದಕ್ಕೆ ಬೇಕಾಗುವ ವೈದ್ಯಾಧಿಕಾರಿಗಳು ಇಲ್ಲ. ಇವರ ಬಗ್ಗೆ ತಮ್ಮ ಗಮನವನ್ನು ಸೆಳೆದಿದ್ದೇನೆ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳುತ್ತೀರೆಂದು ಅಧ್ಯಕ್ಷರ ಮುಂಖಾಂತರ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಕ್ಯಾನ್ಸರ್ ರೋಗವನ್ನು ತಪಾಸಣೆ ಮಾಡುವ ಕಾರ್ಯ ಈಗಾಗಲೇ ಕಿದ್ವಾಯ್ ಮೆಮೋರಿಯಲ್ ಹಾಸ್ಪಟಲ್‌ನಲ್ಲಿ ನಡೆಯುತ್ತಿದೆ. ತಂಬಾಕು ಸೇವನೆ ಮಾಡುವುದರಿಂದ ಈ ಅರ್ಬುದ ರೋಗ (ಕಾನ್ಸರ್) ಬರುತ್ತದೆ. ತಪಾಸಣೆ ಮಾಡುವ ಕಾರ್ಯವನ್ನು ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲೂ ಮಾಡಲಾಗಿದೆ. ಇದರ ಜೊತೆಗೆ ಜನರುಗಳಿಗೆ ತಿಳುವಳಿಕೆ ಕೊಡುವುದಕೋಸ್ಕರ ಪಬ್ಲಿಕ್ ಮೀಟಿಂಗ್‌ಗಳನ್ನು ಮಾಡಿ ಜನಗಳಿಗೆ ತಿಳಿಸುತ್ತಿದ್ದೇವೆ. ಮತ್ತೆ ಆಗಾಗ್ಗೆ ಸಮ್ಮೇಳನಗಳನ್ನು ಮಾಡಿ ಪ್ರಚಾರ ಮಾಡುತ್ತಿದ್ದೇವೆ. ಹೀಗೆ ವಿವಿಧ ರೀತಿಯ ಪ್ರಚಾರ ಕಾರ್ಯಕ್ರಮಗಳನ್ನು ಮಾಡಿ ಜನಗಳಿಗೆ ತಿಳಿಸುವ ಕಾರ್ಯ ಮಾಡಿದ್ದೇವೆ. ಈಗಲೂ ವಿವಿಧ ರೀತಿಯಲ್ಲಿ ಸಮ್ಮೇಳನಗಳನ್ನು ಮಾಡಿ ಪ್ರಚಾರ ಮಾಡುತ್ತಾ ಇದ್ದೇವೆ. ಹೀಗಾಗಿ ಅರ್ಬುದ ರೋಗವು ಮೊದಲ ಹಂತದಲ್ಲಿ ವಾಸಿಯಾಗತಕ್ಕಂಥ ರೋಗ ಎನ್ನತಕ್ಕಂಥ ಒಂದು ಸ್ಥಿತಿಗೆ ಬಂದಿದೆ. ಇನ್ನು ಪುತ್ತೂರು ಆಸ್ಪತ್ರೆಯಲ್ಲಿ ಈಗಾಗಲೇ ೬೪ ಬೆಡ್‌ಗಳು ಇವೆ. ಪುತ್ತೂರು ಒಂದು ಸಬ್ ಡಿವಿಜನ್ ಆಗಿದೆ. ಒಂದು ವೇಳೆ ಅದನ್ನು ಜಿಲ್ಲೆಯಾಗಿ ಮಾಡಿದರೆ ಅದಕ್ಕೆ ೧೦೦ ಬೆಡ್‌ಗಳ ಆಸ್ಪತ್ರೆಯನ್ನು ಮಾಡುವುದಕ್ಕೆ ಅವಕಾಶ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಆಸ್ಪತ್ರೆ ಪ್ರಾರಂಭವಾಗಿ ನೂರು ವರ್ಷಗಳಾಗಿದ್ದರೂ ಕೂಡ ಸಬ್‌ಡಿವಿಜನ್ ಆಸ್ಪತ್ರೆಯಲ್ಲಿ ೫೦ ಬೆಡ್‌ಗಳ ಆಸ್ಪತ್ರೆಯು ಇರಬೇಕು ಎಂದು ನಿಯಮ ಇದೆ. ಆದರೂ ಕೂಡ ಮಾನ್ಯ ಸದಸ್ಯರು ಈಗ ಇರುವ ೬೪ ಬೆಡ್‌ಗಳ ಸಂಖ್ಯೆಯನ್ನು ಕೆಳಗೆ ಇಳಿಸುತ್ತಾರೆ ಎಂದು ಭಾವಿಸುವುದು ಬೇಡ, ಹಂತಹಂತವಾಗಿ ಇದನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿನಯಕುಮಾರ ಸೊರಕೆ.—ಅಧ್ಯಕ್ಷರೆ, ಕಿದ್ವಾಯಿ ಆಸ್ಪತ್ರೆಗೆ ತಕ್ಕ ಬಜೆಟ್‌ನ ಹಣವನ್ನು ಒದಗಿಸುವ ಬಗ್ಗೆ ವಿಳಂಬವಾಗುತ್ತಿದೆ. ಅವರಿಗೆ ಸೂಕ್ತ ಹಣದ ಸೌಲಭ್ಯ ಸಿಗದಿದ್ದುದರಿಂದಾಗಿ ಅಲ್ಲಿ ಸರಿಯಾದ ಸೌಲಭ್ಯಗಳು ಸಿಗುತ್ತಾ ಇಲ್ಲ. ಈ ವಿಳಂಬಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಕಿದ್ವಾಯಿ ಆಸ್ಪತ್ರೆಯನ್ನು ಅಭಿವೃದ್ಧಿ ಮಾಡಲಾಗಿದೆ, ಅಲ್ಲಿ ಹೊಸ ಹೊಸ ಸೇವೆಗಳನ್ನು ಜಾರಿಗೆ ತರುತ್ತಾ ಇದ್ದಾರೆ. ಅದಕ್ಕನುಗುಣವಾಗಿ ಅವರಿಗೆ ಗ್ರ್ಯಾಂಟ್ ಒದಗಿಸುವುದು ಸ್ವಲ್ಪ ಕಷ್ಟವಾಗಿದೆ. ಆದರೂ ಹಿಂದಿಗಿಂತಲೂ ಈಗ ಹೆಚ್ಚಿಗೆ ಹಣ ಕೊಡುತ್ತಾ ಇದ್ದೇವೆ. ಈ ಅರ್ಬುದ ರೋಗದ ಬಗ್ಗೆ ಜನರಲ್ಲಿ ಹೆಚ್ಚು ಹೆಚ್ಚು ತಿಳುವಳಿಕೆ ಮೂಡಿಸಲು ಪ್ರಚಾರ ಆಗಬೇಕು. ಜನರು ಬೀಡಿ, ಸಿಗರೇಟು, ತಂಬಾಕು, ಇತ್ಯಾದಿಗಳನ್ನು ಉಪಯೋಗಿಸಬಾರದು ಎಂದು ತಿಳಿಸಿ ಹೇಳಬೇಕು. ನಾವುಗಳು ಅಂದರೆ ಶಾಸಕರು, ಮಂತ್ರಿಗಳು, ಅವುಗಳನ್ನು ಉಪಯೋಗಿಸುವುದನ್ನು ಕಡಿಮೆ

ಮಾಡಿದರೆ ಜನರು ನಮ್ಮನ್ನು ಅನುಸರಿಸುತ್ತಾರೆ. ಅದೇ ರೀತಿಯಲ್ಲಿ ಡಾಕ್ಟರ್ಸ್ ಕೂಡ ರೋಗಿಗಳನ್ನು ನೋಡುವಾಗ ಸಿಗರೇಟು ಸೇದುತ್ತಾ ಇರುವುದನ್ನು ಕೂಡ ಬಿಡಬೇಕಾಗಿದೆ. ಇನ್ನು ಗುಲ್ಬರ್ಗದಲ್ಲಿ ಕ್ಯಾನ್ಸರ್ ರೋಗವನ್ನು ಪತ್ತೆ ಹಚ್ಚುವುದಕ್ಕೆ ಒಂದು ಸೆಂಟರನ್ನು ತೆಗೆದಿದ್ದೇವೆ. ಅಲ್ಲಿ ಟೆಸ್ಟ್ ಕಂಡಕ್ಟ್ ಮಾಡಿ ಜಿಲ್ಲಾ ಆಸ್ಪತ್ರೆಯಲ್ಲಿ ಅದನ್ನು ಕಂಡುಹಿಡಿಯುವುದಕ್ಕೆ ಏನು ವ್ಯವಸ್ಥೆ ಬೇಕೊ ಮತ್ತು ಏನು ತರಬೇತಿ ಬೇಕೋ ಅದನ್ನು ಮಾಡುತ್ತಾ ಇದ್ದೇವೆ. ಒಟ್ಟಿನಲ್ಲಿ ಈ ರೋಗ ವಾಸಿಯಾಗತಕ್ಕಂಥ ರೋಗ ಎನ್ನುವ ಒಂದು ನಂಬಿಕೆ ಜನರಲ್ಲಿ ಬರುವ ಬಗ್ಗೆ ಸೂಕ್ತ ಪ್ರಚಾರ ಕಾರ್ಯವನ್ನು ಮಾಡುತ್ತೇವೆ.

SRI R. ROSHAN BAIG.—In the year 1?72, there was a proposal to make Bowring Hospital to the level of All India Institute of Medical Sciences, ಈ ಪ್ರಪೋಸಲ್ ಏನಾಯಿತು ? ಕೇಂದ್ರ ಆರೋಗ್ಯ ಸಚಿವರ ಜೊತೆಗೆ ಈ ಬಗ್ಗೆ ಚರ್ಚೆ ಮಾಡಿದ್ದೀರಾ ? ಅಥವಾ ಒಂದು ಡೆಲಿಗೇಶನ್ ತೆಗೆದುಕೊಂಡು ಹೋಗಿ ಅವರ ಜೊತೆಗೆ ವಿಚಾರವಿನಿಮಯ ಮಾಡಿ ಭೌರಿಂಗ್ ಆಸ್ಪತ್ರೆಯಲ್ಲಿ ಆ ಒಂದು ಅನುಕೂಲವನ್ನು ಒದಗಿಸುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಬೆಂಗಳೂರು ನಗರ ದೊಡ್ಡ ಶಹರ್ ಆಗಿದ್ದರೂ ಕೂಡ ಪೋಸ್ಟ್‌ಮಾರ್ಟಮ್ ವ್ಯವಸ್ಥೆಯು ಸೂಕ್ತ ರೀತಿಯಲ್ಲಿ ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಇಲ್ಲ. ವಿಕ್ಟೋರಿಯ ಆಸ್ಪತ್ರೆಯಲ್ಲಿ ಮಾತ್ರ ಈ ಒಂದು ಸೌಲಭ್ಯ ಸದ್ಯಕ್ಕೆ ಇದೆ. ಅಲ್ಲಿ ತುಂಬಾ ಕಷ್ಟದಿಂದ ಈ ಒಂದು ಕೆಲಸ ಮಾಡಿಸಿಕೊಳ್ಳಬೇಕಾಗುತ್ತದೆ. ಯಾರಾದರೂ ಬಡವರು ಹಣವನ್ನು ತೆಗೆದುಕೊಂಡು ಹೋದರೆ ಒಂದೆರಡು ದಿವಸಗಳ ಕಾಲ ಕಾಯಬೇಕಾದ ಪ್ರಸಂಗ ಇದೆ. ಬೌರಿಂಗ್ ಆಸ್ಪತ್ರೆಯಲ್ಲಿ ಮೊದಲು ಈ ವ್ಯವಸ್ಥೆ ಇತ್ತು. ಆದರೆ ಎರಡು ವರ್ಷಗಳಿಂದ ಅಲ್ಲಿಯೂ ಕ್ಲೋಸ್ ಆಗಿದೆ, ಆ ಬಗ್ಗೆ ನಾನು ಸದನದಲ್ಲಿ ಎರಡು ವರ್ಷಗಳಿಂದ ಹೇಳುತ್ತಾ ಬಂದಿದ್ದೇನೆ. ಅದನ್ನು ಅಲ್ಲಿ ಪುನಃ ಪ್ರಾರಂಭಿಸಿ ಅನುಕೂಲ ಮಾಡಿಕೊಡಿ ಎಂದು ಕೇಳುತ್ತಾ ಬಂದಿದ್ದೇನೆ. ಅಧಿಕಾರಿಗಳಿಗೆ ಎಷ್ಟು ಹೇಳಿದರೂ ಫಲಕಾರಿಯಾಗಿಲ್ಲ. ಮಾನ್ಯ ಆರೋಗ್ಯ ಸಚಿವರು ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, All India Institute of Medical Sciences ರವರ ಒಂದು ಮಟ್ಟಕ್ಕೆ ಈ ಬೌರಿಂಗ್ ಆಸ್ಪತ್ರೆಯನ್ನು ಏರಿಸುವ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ಹೇಳುವುದಾದಲ್ಲಿ, ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದ ಸಂದರ್ಭದಲ್ಲಿ ೭೦ ಲಕ್ಷ ರೂಪಾಯಿಗಳನ್ನು ಕೊಟ್ಟು ವಿವಿಧ ಕೆಲಸಗಳನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಉತ್ತಮವಾಗಿ ಮಾಡಿದ್ದೇವೆ. ಆದರೆ ಅಲ್ಲಿಯ ಹಳೆಯ ಕಟ್ಟಡಗಳನ್ನು ಒಡೆದುಹಾಕಿ ಹೊಸದಾಗಿ ಕಟ್ಟುವುದಕ್ಕೆ ಸ್ವಲ್ಪ ಕಷ್ಟವಾಗಿದೆ ಹಾಗಾಗಿ ಕೊಟ್ಟ ಹಣವನ್ನು ಬೇರೆಯ ಕೆಲಸಕ್ಕೆ ಉಪಯೋಗಿಸುತ್ತಾ ಇದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೌರಿಂಗ್ ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟಮ್ ಸೌಲಭ್ಯವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಲ್ ಇಂಡಿಯಾ ಮೆಡಿಕಲ್ ಸೈನ್ಸಸ್ ಇನ್‌ಸ್ಟಿಟ್ಯೂಷನ್ ಮತ್ತು ಕೇಂದ್ರದ ಜೊತೆ ಮಾತನಾಡಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುತ್ತೇವೆ. ಅವರ ಬೇಡಿಕೆಗಳಿಗೆಲ್ಲ ಮ್ಯಾಚಿಂಗ್ ಗ್ರಾಂಟ್ ಕೊಡುವುದಕ್ಕೆ ನಮಗೆ ತೊಂದರೆ ಇದೆ.

ಶ್ರೀಮತಿ ಮುಕ್ತರುನ್ನೀಸಾ.—ಅಧ್ಯಕ್ಷರೇ, ಈ ವರದಿಯ ೧೭ನೇ ಪೇಜ್‌ನಲ್ಲಿ ಯೂನಿವರ್ಸಲ್ ಇಮ್ಯುನೈಜೇಷನ್ ಪ್ರೋಗ್ರಾಂ ಮತ್ತು ಓರಲ್ ರಿಹೈಡ್ರೇಷನ್ ಥೆರಪಿ ಎಂದು ಇದೆ, ಮತ್ತೆ ೧೯ನೇ ಪುಟದಲ್ಲಿ ಓರಲ್ ರಿಹೈಡ್ರೇಷನ್ ಥೆರಪಿ ಎಂದು ಇದೆ. ಇದು ಒಂದು ಸ್ಕೀಮ್. ಈ ಸ್ಕೀಮ್ ಬೇರೆ ಜಿಲ್ಲೆಗಳಲ್ಲೆಲ್ಲ ಇಂಪ್ಲಿಮೆಂಟ್ ಆಗುತ್ತದೆಂದು ಹೇಳಿದ್ದಾರೆ. ಆದರೆ ನಮ್ಮ ಡಿಸ್ಟ್ರಿಕ್ಟ್‌ಗೆ ಮಾತ್ರ ಒಂದು ಸ್ಕೀಮೂ ಇಲ್ಲ. ಈ ಸ್ಕೀಮಿನಡಿಯಲ್ಲಿ ಮಕ್ಕಳ ಕಾಯಿಲೆಗಳಿಗೆಲ್ಲ ಔಷಧಿ ಒದಗಿಸಲಾಗುವುದು. ಕಳೆದ ಸಲ ನಾನು ಇದರ ಬಗ್ಗೆ ಕೇಳಿದ್ದೆ. ನಮ್ಮ ಜಿಲ್ಲೆಯ ಗೊರವರಹಳ್ಳಿ ಹಾಗೂ ಕ್ಯಾತನಹಳ್ಳಿಯಲ್ಲಿ ಇನ್ನು ಮಾಡುವ ಅವಶ್ಯಕತೆ ತುಂಬಾ ಇದೆ. ಆದರೆ ಈ ಸಲ ಮೈಸೂರಿನ ಹೆಸರೇ ತೆಗೆದುಬಿಟ್ಟಿದ್ದಾರೆ. ಈ ಸಲಾದರೂ ಮೈಸೂರನ್ನು ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಏಕೆ ಸೇರಿಸಿಲ್ಲ ಎಂದು ಕೇಳುತ್ತೇನೆ ? ಏಕೆಂದರೆ ಅದು ಕೇಂದ್ರದ ದುಡ್ಡಿನ ಸ್ಕೀಮ್.

ಆಮೇಲೆ ಕೆ.ಆರ್. ಆಸ್ಪತ್ರೆಯಲ್ಲಿ ರಾಚಯ್ಯನವರಿಗೆ ತಿಳಿದಿರುವಂತೆ ಒಂದು ಔಟ್ ಪೇಷೆಂಟ್ ಯೂನಿಟ್ ಕಟ್ಟಿದ್ದು ಅದಕ್ಕೆ ೧ ಕೋಟಿ ರೂ. ಗಳ ವೆಚ್ಚ ತಗುಲಿದ್ದು ಸದ್ಯದಲ್ಲಿ ಡಿಸ್‌ಪ್ಯೂಟ್‌ಗೆ ಸಿಕ್ಕಿ ಹಾಗೇ ಇದೆ. ಈಗ ಅದನ್ನು ಡಿಮಾಲಿಷ್ ಮಾಡುತ್ತೀರೋ ಅಥವಾ ರಿನೊವೇಟ್ ಮಾಡಿ ಓಪನ್

ಮಾಡುತ್ತೀರೋ ಎಂಬುದನ್ನು ಹೇಳಬೇಕು. ಏಕೆಂದರೆ ಇದರ ಬಗ್ಗೆ ಜನರೆಲ್ಲ ಕೇಳುತ್ತಿದ್ದಾರೆ. ಆಮೇಲೆ ಚೆಲುವಾಂಬ ಆಸ್ಪತ್ರೆಯಲ್ಲಿ ಲೇಬರ್ ವಾರ್ಡ್ ಇದೆ. ಹಳೆಯ ಕಾಲದಿಂದ ನೋಡುತ್ತಿದ್ದೇವೆ ಸುಮಾರು ೨೫ ವರ್ಷಗಳಿಂದಲೂ ಅದು ಚಿಕ್ಕದು. ಅದರಲ್ಲಿ ೫-೬ ಬೆಡ್‌ಗಳಿವೆ. ಎರಡು ಮೂರು ಜನರನ್ನು ಕರೆದುಕೊಂಡು ಹೋದರೆ ಒಬ್ಬರಿಗೆ ಹೆರಿಗೆಯಾಗುತ್ತಿದ್ದರೆ ಇನ್ನೊಬ್ಬರು ಅದನ್ನು ನೋಡು ತ್ತಿರಬೇಕು. ದಯವಿಟ್ಟು ಇದನ್ನು ಸರಿಯಾಗಿ ರಿನೋವೇಟ್ ಮಾಡಬೇಕು. ಆಮೇಲೆ ಕೆ.ಆರ್.ಆಸ್ಪತ್ರೆಗೆ ಒಂದು ಜನರೇಟರ್‌ನ್ನು ಒದಗಿಸುವ ಬಗ್ಗೆ ಹೋದ ಸಲವೂ ಕೇಳಿಕೊಂಡಿದ್ದೆ. ಅಲ್ಲಿ ಮಾನ್ಯ ಸದಸ್ಯರಾದ ಕೆಂಪೇಗೌಡರು ಪಟ್ಟ ಕಷ್ಟಗಳು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಅಲ್ಲಿಗೆ ಬೇಗನೆ ಒಂದು ಜನರೇಟರ್‌ನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಲೇಬರ್ ವಾರ್ಡನ್ನು ಪ್ರತ್ಯೇಕ ಮಾಡಿ ಎಂದಿದ್ದಾರೆ. ಈ ಸಲ ಅದೇನೋ ೫೦ ವರ್ಷದ ಆಚರಣೆ ಮಾಡಬೇಕೆಂದು ನಮ್ಮ ಅಂಕೇಗೌಡರು ಪ್ರಯತ್ನ ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಹಣ ದೊರಕಿದರೆ ಸ್ವಲ್ಪ ಅದನ್ನೂ ಮಾಡಿಸುತ್ತೇನೆ. ನಾನು ಮೈಸೂರು ಜಿಲ್ಲೆಯವ ನೆಂದು ಅಲ್ಲಿಗೆ ಎಲ್ಲ ಕೊಡುವುದಕ್ಕೆ ಆಗುವುದಿಲ್ಲ. ಎಲ್ಲರೂ ತಿಳಿದಂತೆ ಮೈಸೂರು ಕೆ.ಆರ್.ಆಸ್ಪತ್ರೆ ಟೀಚಿಂಗ್ ಆಸ್ಪತ್ರೆಯೂ ಆಗಿದೆ. ಅದು ೧೯೫೦ಳನೇ ಇಸವಿಯಲ್ಲಿ ಸ್ಥಾಪನೆಯಾದದ್ದು. ಆದರೆ ಬೆಂಗಳೂರು ಅಥವಾ ಬೇರೆ ಕಡೆಯ ಟೀಚಿಂಗ್ ಆಸ್ಪತ್ರೆಗಳ ಸ್ಟಾಂಡರ್ಡ್‌ಗೆ ಅದು ಏರಲಿಲ್ಲ. ಆಪರೇಷನ್ ಥಿಯೇಟರ್‌ಗೆ ಒಂದು ಜನರೇಟರನ್ನು ಈ ಸಲ ಒದಗಿಸಿ ಕೊಡಿಸುತ್ತೇನೆ. ಶ್ರೀಮತಿ ಮುಕ್ತರುನ್ನೀಸಾ ಅವರು ಹೇಳಿದ್ದನ್ನೆಲ್ಲ ನಾನು ತತ್ಕ್ಷಣ ಒಪ್ಪಿದರೂ ಹಣದ ಪೂರೈಕೆ ನೋಡಿಕೊಂಡು ಕ್ರಮಕ್ರಮವಾಗಿ

೧-೦೦ ಪಿ.ಎಂ.

ಮಾಡುತ್ತೇನೆ. ಮತ್ತೆ ಲಸಿಕೆಗಳನ್ನು ಕೊಡತಕ್ಕಂಥಾದ್ದನ್ನು ೧೨ ಜಿಲ್ಲೆಗಳಿಗೆ ಅನ್ವಯಿಸಿದ್ದೇವೆ. ನಮ್ಮ ಜಿಲ್ಲೆಯನ್ನು ಕೊನೆಗೆ ಹಾಕಿಕೊಂಡಿದ್ದೇನೆ, ಅಂದರೆ ೧೯೮೮-೮೯ಕ್ಕೆ ಬರಲೀ ಎಂದು ಹಾಕಿಕೊಂಡಿ ದ್ದೇನೆ. ಕೊನೆಗೆ ಬಂದರೂ ಚಿಂತೆ ಇಲ್ಲ. ತಾಳಿದವನು ಬಾಳಿಯಾನು ಎಂಬ ಗಾದೆ ಇದೆ. ಐ.ಪಿ.ಪಿ. ಪ್ರೋಗ್ರಾಂಗಳಲ್ಲಿ ಎಲ್ಲಾ ಕಡೆ ಅಂದರೆ ಉತ್ತರ ಭಾಗದಲ್ಲಿರತಕ್ಕಂತಹ ಆಸ್ಪತ್ರೆ, ಕ್ವಾರ್ಟರ್ಸ್‌ಗಳನ್ನು ನೋಡಿದಾಗ ಇದೂ ಕೂಡ ಸೇರಿಕೊಂಡಿದ್ದರೆ ಚೆನ್ನಾಗಿತ್ತೆಂದು ಅನಿಸುತ್ತದೆ. ಮೈಸೂರನ್ನು ಸೇರಿಸಿ ಕೊಳ್ಳಬೇಕೆಂದು ಹೇಳುತ್ತಿದ್ದೇವೆ ಅದು ಸೇರಿಕೊಂಡರೆ ಶ್ರೀಮತಿ ನಾಗರತ್ನಮ್ಮನವರು ಕೇಳಿದ್ದೂ ಆಗುತ್ತದೆ ನೀವು ಕೇಳಿದ್ದೂ ಆಗುತ್ತದೆ.

ಶ್ರೀ ಬಿ. ಜಿ. ಜಮಖಂಡಿ.—ಮುಧೋಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮಿಷಿನ್ ಇನ್‌ಸ್ಟಾಲ್ ಮಾಡುವ ಬಗ್ಗೆ ಪ್ರಶ್ನೆ ಕೇಳಿದಾಗ, ಎಕ್ಸ್‌ರೇ ಮಿಷಿನ್ ಬಂದಿದ್ದು ಸಾಧ್ಯ ವಾದಷ್ಟು ಎಲ್ಲ ಮಿಷಿನ್‌ಗಳು ಫಿಕ್ಸ್ ಮಾಡುವ ಕೆಲಸ ಪ್ರಾರಂಭವಾಗಿದೆ ಎಂದು ಲಿಖಿತ ಮೂಲಕವಾಗಿ ಉತ್ತರ ಕೊಟ್ಟಿದ್ದೀರಿ. ಆ ಕೆಲಸ ಮಾಡಲಾಗಿದೆ ಎಂದು ಹೇಳಿದ್ದೀರಿ. ಆ ಕೆಲಸವನ್ನು ಪ್ರಾರಂಭ ಮಾಡಿದ್ದಿದ್ದರೆ ನಾನು ಕೇಳುತ್ತಿರಲಿಲ್ಲ. ಅಧಿಕಾರಿಗಳು ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಂಡು ಪ್ರಾರಂಭ ಮಾಡಬೇಕು. ಮತ್ತು ಅಲ್ಲಿ ಇನ್‌ಡೋರ್ ಪೇಷೆಂಟ್‌ಗಳಿಗೆ ಬಹಳ ತೊಂದರೆ ಇದೆ. ಒಳ್ಳೆಯ ಗುಣಮಟ್ಟದ ಬ್ರೆಡ್ ಮತ್ತು ಹಾಲನ್ನು ರೋಗಿ ಗಳಿಗೆ ಕೊಡಬೇಕೆಂಬ ಉದ್ದೇಶ ಸರಕಾರಕ್ಕಿದೆ. ಆ ರೀತಿಯ ಗುಣ ಮಟ್ಟವನ್ನು ಕಾಪಾಡದೆ ಒಳ್ಳೆಯ ಹಾಲು, ಬ್ರೆಡ್‌ಅನ್ನು ಪೂರೈಸುತ್ತಿಲ್ಲ ಎಂಬ ಕೂಗು ಎಲ್ಲ ಬಡ ರೋಗಿಗಳಿಂದ ಬರುತ್ತಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯಾಗಬೇಕು. ಖಾಸಗೀ ವೈದ್ಯಕೀಯ ಕಾಲೇಜುಗಳ ವರು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಮತ್ತು ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿದರೆ ಅಂತಹ ಖಾಸಗೀ ಕಾಲೇಜುಗಳಿಗೆ ಸರಕಾರ ಮಂಜೂರಾತಿ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ಆಸ್ಪತ್ರೆಯಲ್ಲಿ ಎಕ್ಸ್‌ರೇ ಮಿಷಿನ್‌ಅನ್ನು ಇನ್‌ಸ್ಟಾಲ್ ಮಾಡುವಲ್ಲಿ ಅಧಿಕಾರಿಗಳು ತಪ್ಪು ವರದಿಯನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಎಕ್ಸ್‌ರೇ ಮಿಷಿನ್‌ಅನ್ನು ಇನ್ ಸ್ಟಾಲ್ ಮಾಡುತ್ತೇವೆ, ಈ ಸಾರಿ ಎಕ್ಸ್‌ರೇ ಟೆಕ್ನೀಷಿಯನ್ ನೇಮಕ ಮಾಡುತ್ತೇವೆ. ಆಸ್ಪತ್ರೆಯಲ್ಲಿನ ರೋಗಿಗಳಿಗೆ ಕೊಡತಕ್ಕಂತಹ ಹಾಲನ್ನು ಕೋ ಆಪರೇಟಿವ್ ಮಿಲ್ಕ್ ಫೆಡರೇಷನ್‌ನಿಂದ ತೆಗೆದುಕೊಳ್ಳ ಬೇಕೆಂದು ಮಾಡಿದ್ದೇವೆ. ಬ್ರೆಡ್‌ಅನ್ನು ಮಾಡ್ರನ್ ಬೇಕರಿಯಲ್ಲಿ ಕೊಂಡುಕೊಳ್ಳಬೇಕೆಂದು ಮಾಡಿದ್ದೇವೆ. ಮತ್ತು ಅಲ್ಲಿ ಬೆಡ್‌ಷೀಟ್ ಹಾಸಿಗೆ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಬೆಡ್‌ಷೀಟ್ ಹಾಸಿಗೆ ಕೊಂಡು ಕೊಳ್ಳುವ ವಿಷಯದಲ್ಲಿ ಅಕ್ರಮ ನಡೆದಿದೆ ಎಂದು ಸರಕಾರದ ಗಮನಕ್ಕೆ ಬಂದಿದೆ. ಆದುದರಿಂದ

ಅದನ್ನು ವಿಕೇಂದ್ರೀಕರಿಸಿ ಆಯಾಯ ಜಿಲ್ಲೆಯಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಚಿಂತನೆ ಮಾಡುತ್ತಿದ್ದೇನೆ. ಕಡಿಮೆ ಬೆಲೆಗೆ ಉತ್ತಮವಾಗಿರತಕ್ಕಂತಹ ಹಾಸಿಗೆ ಬೆಡ್‌ಶೀಟ್‌ಗಳನ್ನು ಕೊಂಡು ಕೊಳ್ಳುವುದಕ್ಕೆ ಇದರಿಂದ ಅವಕಾಶವಾಗುತ್ತದೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿಯಲ್ಲಿ ವಿಮೆನ್ ಅಂಡ್ ಚಿಲ್ಡ್ರನ್ ಆಸ್ಪತ್ರೆ ಇದೆ. ಅಲ್ಲಿ ಏನಾದರೂ ಆಪರೇಷನ್ ಮಾಡಿದಾಗ ಪೇಷೆಂಟ್ ಸೀರಿಯಸ್ ಆದರೆ ಓ.ಪಿ.ಡಿ. ಆಸ್ಪತ್ರೆಗೆ ತೆಗೆದು ಕೊಂಡು ಹೋಗಬೇಕಾಗುತ್ತದೆ. ಅದು ಇಲ್ಲಿಂದ ೪ ಕಿಲೋ ಮೀಟರ್ ದೂರ ಇದೆ. ಪೇಷೆಂಟ್ ತುಂಬಾ ಸೀರಿಯಸ್ ಇದ್ದರೆ ಅಲ್ಲಿನ ಡಾಕ್ಟರ್ ಇಲ್ಲಿಗೆ ಬರಬೇಕಾಗುತ್ತದೆ. ವಿಮೆನ್ ಅಂಡ್ ಚಿಲ್ಡ್ರನ್ ಹಾಸ್ಪಿಟಲ್ ಸೆಕೆಂಡ್ ಸ್ಟೇಜ್ ಕಟ್ಟಡವನ್ನು ಕಟ್ಟಿ ಅಲ್ಲಿಗೆ ಶಿಫ್ಟ್ ಮಾಡಲಿಕ್ಕೆ ಏನಾದರೂ ಸಾಧ್ಯವೇ ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ನಾನೂ ಕೂಡ ಮೊನ್ನೆ ಪೇಷೆಂಟ್ ಆಗಿದ್ದೆ. ೫-೬ ದಿವಸ ಇದ್ದೆ. ಅಲ್ಲಿ ಸ್ನಾನ ಮಾಡಲಿಕ್ಕೆ ನೀರಿನ ವ್ಯವಸ್ಥೆಯಿಲ್ಲ. ಡಾಕ್ಟರ್ ಪರೀಕ್ಷೆ ಮಾಡಿದರೆ ಅವರು ಕೈ ತೊಳೆದುಕೊಳ್ಳಬೇಕಾದರೂ ಬಹಳ ಕಷ್ಟವಿದೆ. ಲೋಕೋಪಯೋಗಿ ಇಲಾಖೆಗೂ ತಮಗೂ ಹೊಂದಾಣಿಕೆ ಸರಿಯಾದ ರೀತಿಯಲ್ಲಿ ಇಲ್ಲದ್ದರಿಂದಾಗಿ ಅಲ್ಲಿ ನೀರು ಇಲ್ಲ. ಮತ್ತು ಅಲ್ಲಿ ವಿಪರೀತ ಸೊಳ್ಳೆಗಳ ಕಾಟವಿದೆ ಫ್ಯಾನ್ ಇಟ್ಟುಕೊಂಡರೂ ಕೂಡ ಸೊಳ್ಳೆ ಹೋಗುವುದಿಲ್ಲ ಅಂತಹ ಪರಿಸ್ಥಿತಿ ಇದೆ. ಅಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ನನಗೆ ಗೊತ್ತಿಲ್ಲ. ಡಾಕ್ಟರ್ಸ್ ಅಲ್ಲಿ ಇಲ್ಲ, ಇನ್ನೊಂದು ಕಡೆ ಸೊಳ್ಳೆ ಮತ್ತೊಂದು ಕಡೆ ನೋಡಿದರೆ ನೀರು ಇಲ್ಲ, ಆಪರೇಷನ್ ಥಿಯೇಟರ್‌ನಲ್ಲಿ ಏರ್ ಕಂಡೀಷನ್ ಸರಿಯಾಗಿ ವರ್ಕ್ ಮಾಡುತ್ತಿಲ್ಲ ಇದನ್ನೆಲ್ಲಾ ಸರಿ ಮಾಡಬೇಕು. ಆದ್ದರಿಂದ ಅದಕ್ಕೆ ಸಾಕಷ್ಟು ಫಂಡ್ಸ್‌ನ್ನು ಕೊಟ್ಟು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಏನು ಮಾಡುವುದು ಸ್ವಾಮಿ? ಅಲ್ಲಿ ನಮ್ಮ ಕಡೆ ಇರತಕ್ಕಂಥ ಆಸ್ಪತ್ರೆಗಳನ್ನು ಸರಿಯಾಗಿ ಮಾಡಿಸಿ ಮರ್ಜ್ ಮಾಡಿದ್ದೆವು. ಅಲ್ಲಿ ಬಳ್ಳಾರಿಯಲ್ಲಿ ಹೊಸದಾಗಿ ಕಟ್ಟಡವನ್ನು ಮಾಡಬೇಕಾದರೆ ದುಡ್ಡನ್ನು ಹೆಚ್ಚಾಗಿ ಹಾಕಲೇಬೇಕು. ಟೀಚರ್ಸ್ ವಿಷಯದಲ್ಲಿ ಈಗಾಗಲೇ ಹೇಳಿರುವುದರಿಂದ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಮತ್ತೆ ಆಸ್ಪತ್ರೆಗಳಲ್ಲಿ ಆಪರೇಷನ್ ಥಿಯೇಟರ್‌ನಲ್ಲಿ ಏರ್ ಕಂಡೀಷನ್ ಇಲ್ಲ ಎಂದು ಹೇಳಿದ್ದೀರಿ. ಈ ಸಾರಿ ಅದರ ಬಗ್ಗೆ ನೋಡುತ್ತೇನೆ.

ಶ್ರೀ ಎಂ. ರಾಮಪ್ಪ.—ಅಲ್ಲಿ ಉಪಕರಣಗಳನ್ನು ರಿಪೇರಿ ಮಾಡಿಸಲಿಕ್ಕೆ ಫಂಡ್ಸ್ ಇಲ್ಲ. ೫೦ ಸಾವಿರ ರೂಪಾಯಿ ಆದರೂ ಕೊಡಬೇಕಾದರೆ ಅದನ್ನು ಎಲ್ಲಿಂದ ಕೊಡಬೇಕು ? ಪಿ.ಡಬ್ಲ್ಯೂ.ಡಿ. ಯಿಂದಲೇ ? ಅಥವಾ ಇನ್ಯಾವ ಇಲಾಖೆಯಿಂದ ಕೊಡಬೇಕು ?

ಶ್ರೀ ಬಿ. ರಾಚಯ್ಯ.—ಉಪಕರಣಗಳನ್ನು ರಿಪೇರಿ ಮಾಡುವುದಕ್ಕೋಸ್ಕರ ಕಿಯೋನಿಕ್ಸ್ ಜೊತೆಯಲ್ಲಿ ಅಗ್ರಿಮೆಂಟ್‌ನ್ನು ಮಾಡಿಕೊಂಡಿದ್ದೇವೆ. ಯಾವುದಾದರೂ ಉಪಕರಣಗಳು ಕೆಟ್ಟು ಹೋಗಿದ್ದರೆ ಅವರು ಬಂದು ಸರಿಮಾಡುತ್ತಾರೆ. ಇದರ ಬಗ್ಗೆ ಅವರಿಗೆ ಬರೆದು ಅಲ್ಲಿ ಕೆಟ್ಟಿರತಕ್ಕಂಥ ಉಪಕರಣಗಳನ್ನು ರಿಪೇರಿ ಮಾಡುವಂತೆ ತಿಳಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಅಲ್ಲಿನ ಉಪಕರಣಗಳು ಕೆಟ್ಟು ಒಂದು ತಿಂಗಳಾಗಿದೆ.

ಶ್ರೀ ಬಿ. ರಾಚಯ್ಯ.—ಚಿಲ್ಡ್ರನ್ಸ್ ಆಸ್ಪತ್ರೆಯ ಕಟ್ಟಡವನ್ನು ಕಟ್ಟಬೇಕು ಎಂದು ಹೇಳಿದ್ದೀರಿ. ನಮ್ಮ ಐಪಿಪಿ ಡೈರೆಕ್ಟರ್ ಜೊತೆಯಲ್ಲಿ ಚರ್ಚೆಮಾಡಿ ಹೊಸದಾಗಿ ಪಟ್ಟಣದಲ್ಲಿರತಕ್ಕಂಥದ್ದನ್ನು ಸೇರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೇಗೆ ಎಂಬ ಬಗ್ಗೆ ನೋಡುತ್ತೇನ. ಇಲ್ಲದಿದ್ದರೆ ಸ್ವಲ್ಪ ಕಾಯಬೇಕಾಗುತ್ತದೆ. ಇದನ್ನು ನಾನ್‌ಪ್ಲಾನ್ ನಲ್ಲಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಧಾರವಾಡದಲ್ಲಿರತಕ್ಕಂಥ ಜಿಲ್ಲಾ ಆಸ್ಪತ್ರೆ ೧೦೫ ವರ್ಷವನ್ನು ಕಳೆದು ಶತಮಾನೋತ್ಸವವನ್ನು ಆಚರಿಸಬೇಕಾಗಿದೆ. ಈ ಶತಮಾನೋತ್ಸವ ಸಮಿತಿಯನ್ನು ರಚಿಸಲಿಕ್ಕೆ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಹೊರರೋಗಿಗಳ ಒಂದು ವಿಭಾಗದ ಕಟ್ಟಡ, ಮತ್ತು ೨೫೦ ಹಾಸಿಗೆಗಳ ಒಂದು ಹೊಸ ಕಟ್ಟಡವನ್ನು ಕಟ್ಟಿಸಬೇಕು ಎಂದು ಹೇಳಿ ನಾನು ಮಂತ್ರಿಯವರಲ್ಲಿ ವಿನಂತಿಸಿಕೊಂಡಿದ್ದೇನೆ. ಈಗಾಗಲೇ ೧೦೫ ವರ್ಷ ಮುಗಿದಿದೆ. ಈ ಜಿಲ್ಲಾ ಆಸ್ಪತ್ರೆ ಶತಮಾನೋತ್ಸವಕ್ಕೆ ಒಂದು ಸಮಿತಿಯನ್ನು ರಚಿಸಬೇಕಾಗಿದೆ. ಅದನ್ನು ತಾವು ಪೂರೈಸಿ ಕೊಡುತ್ತೀರಾ ? ಆಮೇಲೆ ಧಾರವಾಡದಲ್ಲಿರತಕ್ಕಂಥ ಮಾನಸಿಕ ಆಸ್ಪತ್ರೆ ೧೪೫ ವರ್ಷಗಳ ಹಳೆಯ ಒಂದು ಮಾನಸಿಕ ಆಸ್ಪತ್ರೆ. ಕರ್ನಾಟಕದಲ್ಲಿ ನಿಮ್ಹಾನ್ಸ್ ಬಿಟ್ಟರೆ ಇದು ಎರಡನೆಯ ಆಸ್ಪತ್ರೆ. ಪೂರ್ತಿ

ಸರ್ಕಾರದಿಂದಲೇ ನಡೆಯತಕ್ಕಂಥ ಆಸ್ಪತ್ರೆ. ನಿಮ್ಹಾನ್ಸ್ ಪ್ರಕಾರ ಸ್ವಾಯತ್ತತೆ ಇರುವಂಥ ರೀತಿಯಲ್ಲಿ ಈ ಸಂಸ್ಥೆಯನ್ನು ಮಾಡುತ್ತೀರಾ ಹೇಗೆ ? ಮತ್ತು ನಿಮ್ಹಾನ್ಸ್‌ನಲ್ಲಿ ಇರುವಂತೆ ಎಲ್ಲಾ ಉಪಕರಣಗಳನ್ನು ಇಲ್ಲಿಯೂ ಅಳವಡಿಸಿ ಉತ್ತರದ ಕರ್ನಾಟಕದ ಜನತೆಗೆ ಈ ಒಂದು ಸೇವೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ. ಇದರ ಜೊತೆಗೆ ಸರ್ಕಾರಿ ವೈದ್ಯರು ಈಗ ಖಾಸಗಿಯಾಗಿ ಏನು ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಇದರ ಬಗ್ಗೆ ಒಂದು ಬಿಲ್ಲನ್ನು ತೆಗೆದುಕೊಂಡು ಬರುತ್ತಿದ್ದೇವೆ ಎಂದು ಹೇಳಿದ್ದಾರೆ. ಇದು ಬಹಳ ಸಂತೋಷದಾಯಕವಾದುದು. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ತೀವ್ರವಾಗಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೆಲ್ಲದ್‌ರವರೇ, ಇಲ್ಲಿ ಬರೆದುಕೊಂಡು ಭಾಷಣ ಮಾಡುವುದಲ್ಲ. ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ನಾನು ಈಗ ಹೇಳಿದ ಮೂರಕ್ಕೂ ಮಾನ್ಯ ಮಂತ್ರಿಗಳು ಉತ್ತರಕೊಡಬೇಕೆಂದು ಮತ್ತು ಆ ಕೆಲಸವನ್ನು ಪೂರೈಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಬೆಂಗಳೂರಿನಲ್ಲಿರತಕ್ಕಂಥ ಮಾನಸಿಕ ಆಸ್ಪತ್ರೆ ಏನು ಇದೆ, ಇದು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ಸಂಯೋಜನೆಯಿಂದ ನಡೆಯುತ್ತಿದೆ. ಇಲ್ಲಿ ಮೊದಲಿನಿಂದಲೂ ಕೂಡಾ ಸಾಕಷ್ಟು ಡೆವಲಪ್‌ಮೆಂಟ್ ಆಗುತ್ತಾ ಬಂದಿದೆ. ಈಗ ಅದೇಮಟ್ಟದಲ್ಲಿ ನಾವು ಅಲ್ಲಿ ಒಂದೇ ಸಾರಿ ಮಾಡುವುದು ಕಷ್ಟವಾಗುತ್ತದೆ. ಮೊನ್ನೆ ನಾನು ಅದನ್ನು ನೋಡಿಕೊಂಡು ಬಂದಿದ್ದೇನೆ, ಆಗ ಅವರು ಸಹ ಇದ್ದರು. ತಕ್ಷಣ ಅಲ್ಲಿ ಅಗತ್ಯವಾಗಿ ಬೇಕಾಗಿರತಕ್ಕಂಥದ್ದನ್ನು ಪೂರೈಸುತ್ತೇನೆ. ಶತಮಾನೋತ್ಸವವನ್ನು ಮಾಡಿಕೊಳ್ಳಬೇಕಾದರೆ ಏನಾದರೂ ಅಲ್ಲಿ ಸಿಂಬಾಲಿಕ್ ಆಗಿ ಗ್ರ್ಯಾಂಟನ್ನು ಕೊಡಬೇಕೇ ವಿನಹಾ ಸರ್ಕಾರ ಪೂರ್ತಿ ಹಣ ಕೊಡುವುದಕ್ಕಾಗುವುದಿಲ್ಲ. ದಯೆಯಿಟ್ಟು ಅಲ್ಲಿ ಶ್ರೀಮಂತರು ಇದ್ದಾರೆ, ತಾವೇ ಇದನ್ನು ಮೊದಲು ಶುರುಮಾಡಿ ಬೇರೆಯವರಿಂದ ಕೊಡಿಸಬೇಕೆಂದು ಹೇಳುತ್ತೇನೆ.

ಶ್ರೀ ಚಂದ್ರ ಕಾಂತ ಜಿ. ಬೆಲ್ಲದ್.—ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಮಂತ್ರಿಗಳು ಒಪ್ಪಿಕೊಂಡಿದ್ದರು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಬೇಕು ಎಂದು, ಈಗಾಗಲೇ ಕೆಲವು ಕಡೆಗಳಲ್ಲಿ ೨೫ ಸಾವಿರ ಫಂಡ್ ಅನ್ನು ಕಲೆಕ್ಟ್ ಮಾಡಿದ್ದಾರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕಟ್ಟಿಸಬೇಕು ಎಂಬ ಉದ್ದೇಶಕ್ಕೆ ಒಟ್ಟು ಎಷ್ಟು ಹಣ ಬೇಕು, ಅಥವಾ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮಂಜೂರು ಮಾಡುವಂತಹ ನೀತಿ ಏನು ಇದೆ. ಅಥವಾ ಜಿಲ್ಲಾ ಪರಿಷತ್‌ನಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುವ ಬಗ್ಗೆ ಏನಾದರೂ ಹೇಳುತ್ತೀರಾ ? ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬರತಕ್ಕ ಔಷಧಿಗಳು ಅಂದರೆ ಸರ್ಕಾರದ ಮೆಡಿಕಲ್ ಸ್ಟೋರ್ಸ್‌ನಿಂದ ಬರತಕ್ಕ ಔಷಧಿಗಳು ಏನೂ ಉಪಯೋಗಕ್ಕೆ ಬರುವುದಿಲ್ಲ ಎಂಬ ಆಪಾದನೆಗಳು ಇದೆ. ಡಾಕ್ಟರ್‌ಗಳು ಕೇಳುವಂತಹ ಔಷಧಿಗಳನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯ ಇದೆಯೇ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಹೊರ ನಾಡ ಕನ್ನಡಿಗರಿಗೆ ಎನ್‌ಸಿಸಿಯವರಿಗೆ, ಅಂಗವಿಕಲ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡಲು ಸೀಟುಗಳನ್ನು ಕಾದಿರಿಸುತ್ತಿದ್ದೀರಿ. ಆದರೆ ಕಳೆದ ಎರಡು ವರ್ಷಗಳಿಂದ ಈ ಸೀಟುಗಳನ್ನು ಕಾದಿರಸದೇ ಇರುವುದಕ್ಕೆ ಕಾರಣ ಏನು ? ಪುನಃ ಕಾದಿರಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಹೊರ ನಾಡ ಕನ್ನಡಿಗರು ಅಂದರೆ ಬರೇ ಕಾಸರಗೋಡಿನಲ್ಲಿ ಮಾತ್ರವಲ್ಲ, ಅಂಡಮಾನ್‌ನಲ್ಲೂ ಇದ್ದಾರೆ ಮತ್ತು ಕಾಶ್ಮೀರದಲ್ಲೂ ಇದ್ದಾರೆ. ಬೇರೆ ಬೇರೆ ಕಡೆಯಲ್ಲಿಯೂ ಇದ್ದಾರೆ. ಕನ್ನಡ ಭಾಷೆ ಮತು ಕನ್ನಡ ಸಂಸ್ಕೃತಿ ಅಭ್ಯಾಸ ಮಾಡತಕ್ಕ ಜನರು ಯಾರು ಇದ್ದಾರೆ, ಅವರ ಪೈಕಿ ಕಾಂಪಿಟಿಷನ್ ಏರ್ಪಾಟು ಮಾಡಿ ಅವರಲ್ಲಿ ಯಾರು ಹೆಚ್ಚಿಗೆ ಅಂಕಗಳನ್ನು ತೆಗೆದುಕೊಳ್ಳುತ್ತಾರೋ ಅಂಥವರಿಗೆ ಸೀಟ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅಂಗವಿಕಲರಿಗೆ ನಾವು ಕೊಟ್ಟಿಲ್ಲ, ಅಂಗವಿಕಲರಿಗೆ ಅದನ್ನು ಮಾಡಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಎರಡು ವರ್ಷಗಳ ಹಿಂದೆ ಕಾದಿರಿಸಿದ್ದೀರಲ್ಲ, ಆ ನಿಮ್ಮ ನೀತಿ ಬದಲಾವಣೆ ಆಗುವುದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ನೀವು ಬದಲಾವಣೆ ಮಾಡಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾಡಿದ್ದೀರಿ.

ಶ್ರೀ ಬಿ. ರಾಚಯ್ಯ.—ನಾನು ಎಜುಕೇಶನ್ ಮಿನಿಸ್ಟರ್ ಆಗಿದ್ದಾಗ. ಅಂಗವಿಕಲರಿಗೆ ಟೆಕ್ನಿಕಲ್ ಎಜುಕೇಶನ್‌ನಲ್ಲಿ ಹಾಗೂ ಇಂಜನಿಯರಿಂಗ್‌ನಲ್ಲಿ ಸೀಟ್‌ಗಳನ್ನು ಕೊಟ್ಟಿದ್ದೇನೆ. ಅದಕ್ಕೋಸ್ಕರ ಇಲ್ಲಿ ರಿಸರ್ವೇಶನ್ ಹೆಚ್ಚು ಆಗುತ್ತಿದೆ ಎಂದು ಹೇಳಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇನೆ. ಆರೋಗ್ಯ ಘಟಕಗಳಿಗೆ ಹಣ ಕೊಟ್ಟು ಜಿಲ್ಲಾ ಪರಿಷತ್‌ಗೆ ಕಟ್ಟಿಸಿಕೊಡುತ್ತಿದ್ದೀರಾ ಅಥವಾ ದುಡ್ಡು ಏನು ಮಾಡುತ್ತಿದ್ದೀರಿ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರ ಹಾಕಿಕೊಂಡಿರತಕ್ಕ ನೀತಿಯ ಪ್ರಕಾರ ಟ್ರೀ ಟೈರ್ ಸಿಸ್ಟಂ ಎಂದು ಹೇಳುತ್ತೇವೆ. ಅಂದರೆ ಸೆಂಟರ್, ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕ ಅದರ ಪ್ರಕಾರ ನಾವು ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳನ್ನು ಓಪನ್ ಮಾಡುವುದಿಲ್ಲ. ಎಲ್ಲಿ ೩೦ ಸಾವಿರ ಪಾಪ್ಯುಲೇಷನ್ ಇದೆಯೋ ಅಲ್ಲಿ ಯಾವುದೇ ಆಸ್ಪತ್ರೆ ಇಲ್ಲದಿದ್ದರೆ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಪರವಾನಗಿ ಕೊಡಬಲ್ಲೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮೆಡಿಕಲ್ ಸ್ಟೋರ್ಸ್‌ನಿಂದ ಬರತಕ್ಕ ಔಷಧಿಗಳ ಬಗ್ಗೆ. ....

ಶ್ರೀ ಬಿ. ರಾಚಯ್ಯ.—ಮೆಡಿಕಲ್ ಸ್ಟೋರ್ಸ್‌ನಿಂದ ಬರತಕ್ಕ ೪೦ ಪರ್ಸೆಂಟ್ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಜಿಲ್ಲಾ ಪರಿಷತ್‌ಗೆ ಹಣವನ್ನು ಕೊಟ್ಟಿದ್ದೇವೆ. ಪ್ರತಿ ವರ್ಷ ಹೆಚ್ಚಿನ ರೀತಿಯಲ್ಲಿ ಹಣವನ್ನು ಕೊಡುತ್ತಿದ್ದೇವೆ. ಮೆಡಿಕಲ್ ಸ್ಟೋರ್ಸ್‌ನಿಂದ ಬರತಕ್ಕ ಔಟ್‌ಡೇಟೆಡ್ ಮೆಡಿಷನ್ಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ ಅದನ್ನು ಎರಡು ಸಾರಿ ಚೆಕ್ ಮಾಡಿದ್ದೇನೆ. ಯಾವುದೋ ಕಂಪೆನಿಯಿಂದ ಬರತಕ್ಕ ಕೆಲವು ಬ್ರಾಂಡ್ ಅನ್ನು ಕೆಲವು ಡಾಕ್ಟರ್‌ಗಳು ರೆಕ್‌ಮೆಂಡ್ ಮಾಡುತ್ತಾರೆ, ಅವು ಇಲ್ಲದೇ ಹೋದರೆ ಔಟ್‌ಡೇಟೆಡ್ ಎಂದು ಹೇಳುತ್ತಾರೆ. ಅದಕ್ಕೋಸ್ಕರ ಅಲ್ಲಿ ಬರತಕ್ಕ ಔಷಧಿಗಳನ್ನು ಔಷಧಿಗಳ ನಿಯಂತ್ರಣಾಧಿಕಾರಿಗಳು ಹಾಗೂ ಇನ್‌ಸ್ಪೆಕ್ಟರ್ ಇವುಗಳನ್ನು ಪರೀಕ್ಷೆ ಮಾಡಲು ವ್ಯವಸ್ಥೆ ಮಾಡಿ, ಯಾವುದು ಔಟ್‌ಡೇಟೆಡ್ ಮತ್ತು ಸಬ್ ಸ್ಟ್ಯಾಂಡರ್ಡ್ ಎಂದು ನಿರ್ಧಾರವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ಪ್ರಸಿದ್ಧ ಆಸ್ಪತ್ರೆಗಳಲ್ಲಿ ಯಾರಾದರೂ ಪರೀಕ್ಷೆ ಮಾಡಿಸಲು ಹೋದರೆ ಅಲ್ಲಿ ಎಕ್ಸ್‌ರೇ ಪ್ಲಾಂಟ್ ಇಲ್ಲ, ಇರುವ ಕಡೆ ಎಕ್ಸ್‌ರೇ ತೆಗೆದರೆ ಫೋಟೋ ಚೆನ್ನಾಗಿ ಬರುವುದಿಲ್ಲ ಬೇರೆ ಕಡೆ ತೆಗೆಸಿ, ಬ್ಲಡ್ ಟೆಸ್ಟ್ ಬೇರೆ ಕಡೆ ಮಾಡಿಸಿಕೊಳ್ಳಿ ಎನ್ನುತ್ತಾರೆ. ಇ.ಸಿ.ಜಿ.ಯನ್ನು ಪ್ರೈವೇಟ್ ನರ್ಸಿಂಗ್ ಹೋಮ್‌ನಲ್ಲಿ ಟೆಸ್ಟ್ ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಇದು ನನ್ನದಷ್ಟೇ ಕಂಪ್ಲೈಂಟ್ ಅಲ್ಲ; ಅನೇಕ ಜನರ ಕಂಪ್ಲೈಂಟ್ ಇದೆ. ಇದು ಸತ್ಯಾನಾ, ಯಾಕೆ ಹೀಗೆ ಹೇಳುತ್ತಿದ್ದಾರೆ ? ಎಕ್ಸ್‌ರೇ ಪ್ಲಾಂಟ್ ಇಲ್ಲದೇ ಇದ್ದರೆ ಬೇರೆ ಎಕ್ಸ್‌ರೇ ಪ್ಲಾಂಟ್‌ಗೆ ರೆಕ್‌ಮೆಂಡ್ ಮಾಡಬೇಕು. ಇಲ್ಲಿ ಫೋಟೋ ತೆಗೆದರೆ ಚೆನ್ನಾಗಿ ಬರುವುದಿಲ್ಲ. ಬೇರೆ ಕಡೆ ತೆಗೆಸಿಕೊಂಡು ಬನ್ನಿ ಅಂದರೆ ಬಡವರು ಏನು ಮಾಡಬೇಕು ? ಹಳ್ಳಿಗಳಲ್ಲಿ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ಸ್ ಮಾಡಬೇಕಾದರೆ ಕೆಲವು ಮೋಟಿವೇಟ್‌ಗಳನ್ನು ಸೋಶಿಯಲ್ ವರ್ಕರ್ಸ್‌ನವರಿಗೆ ಡಿಪಾರ್ಟ್‌ಮೆಂಟ್‌ನಿಂದ ಇಟ್ಟಿರುತ್ತಾರೆ. ನನ್ನ ಒಂದು ಪ್ರಶ್ನೆ ಅಂದರೆ ಏನು ನೀವು ಟಾರ್ಗೆಟ್ ಕೊಡುತ್ತಿದ್ದೀರಿ, ಇಂತಹ ಒಂದು ಕ್ಯಾಂಪ್‌ನಿಂದ ನೂರು ಜನರಿಗೆ ಇಲ್ಲವೇ ಇನ್ನೂರು ಜನರಿಗೆ ಆಪರೇಷನ್ಸ್ ಆಗಬೇಕು ಅಂದರೆ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದು ಆಪರೇಷನ್ಸ್ ಮಾಡಿಸುತ್ತಾರೆ. ಅಷ್ಟೇ ಈಕ್ವಲ್ ಆಗಿ ಗಂಡಸರನ್ನೂ ಕರೆದುಕೊಂಡು ಬಂದು ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ಸ್ ಯಾಕೆ ಮಾಡಿಸುವುದಿಲ್ಲ ? ನಾನು ಅನೇಕಬಾರಿ ಈ ಪ್ರಶ್ನೆಯನ್ನು ಮಾನ್ಯ ಹೆಲ್ತ್ ಮಿನಿಸ್ಟರ್‌ಗೆ ಹೇಳಿದ್ದೇನೆ ಮತ್ತು ಇದರ ಬಗ್ಗೆ ಫಿಗರ್ಸ್ ಸಹ ಕೇಳಿದ್ದೇನೆ. ತಾವು ಬಂದ ವರ್ಷದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ಸ್ ಮಾಡಿಸಿಕೊಂಡವರಲ್ಲಿ ಗಂಡಸರ ಸಂಖ್ಯೆ ಎಷ್ಟು ? ಹೆಂಗಸರ ಸಂಖ್ಯೆ ಎಷ್ಟು ಎಂದು ಕೇಳಿದಾಗ, ಅವರ ಸಂಖ್ಯೆಯ ಪ್ರಕಾರ ನೂರಕ್ಕೆ ಹತ್ತು ಜನ ಕೂಡ ಗಂಡಸರು ಆಪರೇಷನ್ಸ್ ಮಾಡಿಸಿಕೊಂಡಿಲ್ಲ. ಹೆಣ್ಣುಮಕ್ಕಳನ್ನು ಅವರು ಬಾಣಂತಿ ಆಗಿ ಕೇವಲ ಎರಡು ತಿಂಗಳು ಕಳೆದಿರಲಿ, ಅಥವಾ ಮೂರು ತಿಂಗಳು ಕಳೆದಿರಲಿ, ಬಾಣಂತಿ ತನವನ್ನು ಮುಗಿಸಿಕೊಂಡಿರುವ ಹೆಣ್ಣುಮಕ್ಕಳನ್ನು ಹಿಡಿದುಕೊಂಡು ಬಂದು ಆಪರೇಷನ್ ಮಾಡಿಸಿದ್ದಾರೆ. ಇದು ಹೋಗಬೇಕು. ಎಷ್ಟು ಹೆಣ್ಣುಮಕ್ಕಳನ್ನು ಆಪರೇಷನ್ಸ್‌ಗೆ ಒಳಪಡಿಸುತ್ತೀರೋ ಅಷ್ಟೇ ಈಕ್ವಲ್ ಆಗಿ ಗಂಡಸರನ್ನೂ ಆಪರೇಷನ್‌ಗೆ ಒಳಪಡಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಗಂಡುಮಕ್ಕಳು ಆಪರೇಷನ್ ಮಾಡಿಸಿಕೊಂಡರೆ ಮುಂದೆ ಕೆಲಸಕಾರ್ಯಗಳನ್ನು ಮಾಡುವುದು ಸ್ವಲ್ಪ ತೊಂದರೆಯಾಗುತ್ತದೆಂದು, ಅವರೇ ಹೆಣ್ಣುಮಕ್ಕಳಿಗೆ ಆಪರೇಷನ್

ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಇದರಿಂದ ಆಪರೇಷನ್ ಮಾಡಿಸಿಕೊಂಡವರ ಪೈಕಿ ಗಂಡಸರ ಸಂಖ್ಯೆ ಕಡಿಮೆ ಇದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇದನ್ನು ನಾನು ಒಪ್ಪುವುದಿಲ್ಲ. ಇಲ್ಲಿಯೂ ಸಹ ಹೆಣ್ಣುಮಕ್ಕಳ ಶೋಷಣೆ ಆಗುತ್ತಿದೆ.

ಶ್ರೀ ಬಿ. ರಾಚಯ್ಯ.—ಆಪರೇಷನ್ ಮಾಡಿಸಿಕೊಳ್ಳುವ ಬಗ್ಗೆ ಕೆಲವು ಸಲ ಗಂಡಹೆಂಡತಿಯರಲ್ಲೇ ಅನುಮಾನ ಬರುತ್ತದೆ. ಆಗ ಎಲ್ಲಿ ಫರ್ಟಿಲಿಟಿ ಇದೆ, ಅದನ್ನೇ ಸರಿಮಾಡಿಬಿಟ್ಟರೆ ಒಳ್ಳೆಯದು ಎಂದು ತೀರ್ಮಾನ ಮಾಡಿ ಹೆಣ್ಣುಮಕ್ಕಳಿಗೇ ಹೆಚ್ಚಾಗಿ ಈ ಆಪರೇಷನ್ ಮಾಡುತ್ತಿದ್ದೇವೆ.

ಇನ್ನು ಬೆಂಗಳೂರಿನ ಕೆಲವು ಆಸ್ಪತ್ರೆಗಳಲ್ಲಿ ಎಕ್ಸ್‌ರೇ ಯುನಿಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಈಗ ನಾವು ಕಿಯೋನಿಕ್ಸ್ ಸಂಸ್ಥೆಯವರಿಂದ ಇಂತಹ ಕೆಟ್ಟಿರುವ ಯಂತ್ರಗಳನ್ನು ಸರಿಪಡಿಸುತ್ತಿದ್ದೇವೆ. ಆದ್ದರಿಂದ ಅವರು ಇನ್ನು ಮುಂದೆ ಆ ರೀತಿ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಯಾರಾದರು ಡಾಕ್ಟರ್‌ಸ್ ಆ ರೀತಿ ಹೇಳಿದರೆ, ಅದನ್ನು ನನ್ನ ಗಮನಕ್ಕೆ ತಂದರೆ ನಾನು ಅವರ ಮೇಲೆ ಕ್ರಮ ಕೈಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ವಾಸೆಕ್ಟಮಿ ಆಪರೇಷನ್‌ಗಳು ಜಾಸ್ತಿ ಆದರೆ ಕೇವಲ ಮನೆ ಒಳಗಡೆ ಮಾತ್ರವಲ್ಲ, ಮನೆಯ ಹೊರಗಡೆಯೂ ಸಹ ಫ್ಯಾಮಿಲಿ ಪ್ಲಾನಿಂಗ್ ಆಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ನಿಗಾ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಆಗಬಹುದು.

ಅಧ್ಯಕ್ಷರು.—ಒಳ್ಳೆಯ ಉತ್ತರ ಕೊಟ್ಟರಿ. ಈಗ ಚಿನ್ನಪ್ಪನವರು ಕೇಳಬಹುದು.

ಶ್ರೀ ಡಿ.ಪಿ. ಚಿನ್ನಪ್ಪ.—ಐ.ಎಂ.ಎ.ನಲ್ಲಿ ರೆಕಗ್ನಿಷನ್ ಪಡೆದಂಥ ೮ ಖಾಸಗಿ ಮೆಡಿಕಲ್ ಕಾಲೇಜ್‌ಗಳು ನಮ್ಮಲ್ಲಿವೆ. ಇಲ್ಲಿ ಪಾಸಾಗಿ ಹೊರಬಂದಂಥವರಿಗೆ ಪೋಸ್ಟ್-ಗ್ರ್ಯಾಜ್ಯುಯೇಟ್ ಕೋರ್ಸ್‌ಗೆ ಹೋಗಲು ಈಗ ಅನುಮತಿ ಕೊಡುತ್ತಿಲ್ಲ, ಇನ್ನು ಮುಂದೆಯಾದರೂ ಇಂತಹವರಿಗೆ ಅನುಮತಿ ಕೊಡುತ್ತೀರೋ ಅಥವಾ ಇಲ್ಲವೋ ಎಂಬುವುದನ್ನು ತಿಳಿಸಬೇಕು. ಮತ್ತೆ ಖಾಸಗಿ ಮೆಡಿಕಲ್ ಕಾಲೇಜ್‌ಗಳಿಗೆ ಸರ್ಕಾರದಿಂದ ನಾಮಿನಿ ಮಾಡಿದಂಥ ಹೌಸ್ ಸರ್ಜನ್‌ಗಳಿಗೆ ಈಗ ಸ್ಟೈಫಂಡ್ ಕೊಡುತ್ತಿಲ್ಲ, ಆದರೆ ಸರ್ಕಾರದ ಮೆಡಿಕಲ್ ಕಾಲೇಜ್‌ಗಳಲ್ಲಿ ಸ್ಟೈಫಂಡ್ ಕೊಡುತ್ತಿದ್ದಾರೆ ಇದು ಸರಿಯಲ್ಲ. ಇವರಿಗೆ ಕೊಟ್ಟಂತೆ ಅವರಿಗೂ ಸಹ ಕೊಡಬೇಕು. ಮತ್ತೆ ಮಡಕೇರಿಯಲ್ಲಿರುವ ಆಸ್ಪತ್ರೆಗೆ ಮೇನ್‌ಟೆನೆನ್ಸ್ ಗ್ರಾಂಟ್ ಎಂದು 13 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದು ಸಾಕಾಗುವುದಿಲ್ಲವಾದ ಕಾರಣ ಇದನ್ನು ಒಂದು ಲಕ್ಷಕ್ಕೆ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಡಿಕೇರಿಯ ಆಸ್ಪತ್ರೆಗೆ ಮೇನ್‌ಟೆನೆನ್ಸ್ ಗ್ರಾಂಟ್ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ರೀಅಪ್ರೋಪ್ರಿಯೇಷನ್ ಮಾಡಿ ಹೆಚ್ಚು ಹಣ ಕೊಡಿಸಲು ಪ್ರಯತ್ನ ಮಾಡುತ್ತೇನೆ. ಮತ್ತೆ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸ್‌ಗೆ ಹೋಗಲು ಡೆಂಟಲ್ ಕಾಲೇಜ್‌ನಲ್ಲಿ ಅವಕಾಶ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಇಲ್ಲಿ ಸೀಟ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ, ಅಲ್ಲಿರುವಂತಹ ಪ್ರೊಫೆಸರ್‌ಗಳ ಸಂಖ್ಯೆಗೆ ಅನುಗುಣವಾಗಿ ಅನುಮತಿ ಕೊಡಬೇಕಾಗುತ್ತದೆಯೇ ಹೊರತು, ಅದಕ್ಕಿಂತ ಹೆಚ್ಚು ಕೊಡುವುದಕ್ಕಾಗುವುದಿಲ್ಲ. ಮತ್ತೆ ಸರ್ಕಾರದಿಂದ ಖಾಸಗೀ ಮೆಡಿಕಲ್ ಕಾಲೇಜುಗಳಿಗೆ ನಾಮಿನಿ ಮಾಡಿದಂಥ ಹೌಸ್ ಸರ್ಜನ್‌ಗಳಿಗೆ ಸ್ಟೈಫಂಡ್ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಈಗ ನಮ್ಮಲ್ಲಿ ಖಾಸಗಿ ಮೆಡಿಕಲ್ ಕಾಲೇಜ್‌ಗಳು ಜಾಸ್ತಿ ಇರುವುದರಿಂದ, ಅಲ್ಲಿಗೆ ನಾವೇ ಹೌಸ್ ಸರ್ಜನ್‌ಗಳನ್ನು ನೇಮಕ ಮಾಡಿದರೂ ಸಹ, ಅವರಿಗೆ ನಾವೇ ಸ್ಟೈಫಂಡ್ ಕೊಡಬೇಕೆಂದರೆ ಕಷ್ಟವಾಗುತ್ತದೆ. ಸರ್ಕಾರದ ಕಾಲೇಜುಗಳಲ್ಲಿ ಕೊಡುತ್ತಿರುವ ರೀತಿಯಲ್ಲಿ ಇವರಿಗೂ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ತೊಂದರೆ ಇರುವುದರಿಂದ, ಈ ಖರ್ಚನ್ನು ಪ್ರೈವೇಟ್ ಕಾಲೇಜ್‌ನವರೇ ಮೀಟ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡಿ ನೋಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ವಿಶೇಷ ಸೌಲಭ್ಯಗಳನ್ನು ಹೊಂದಿರುವಂತಹ ನಮ್ಮ ರಾಜ್ಯದ ಆಸ್ಪತ್ರೆಗಳಿಗೆ ಬರುವಂತಹ ಹೊರ ರೋಗಿಗಳಿಗೆ ಉತ್ತಮವಾದ ಊಟದ ವ್ಯವಸ್ಥೆ ಮಾಡಬೇಕು ಮತ್ತು ಒಳರೋಗಿಗಳನ್ನು ನೋಡಲು ಬರುವಂತಹವರಿಗೆ ಉಳಿದು ಕೊಳ್ಳಲು ವಸತಿ ಗೃಹದ ವ್ಯವಸ್ಥೆಯನ್ನು

ಕಲ್ಪಿಸಲು ಮಾನ್ಯ ಸಚಿವರು ಒಪ್ಪಲೇಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಎರಡನೆಯದಾಗಿ ಈ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುವಂತಹ ಅಭ್ಯರ್ಥಿಗಳನ್ನು ಯಾವ ರೀತಿ ಆಯ್ಕೆ ಮಾಡಿದ್ದೀರಿ ? ಈ ಬಗ್ಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದೀರಾ ಎಂಬುದನ್ನು ತಾವು ತಿಳಿಸಬೇಕು. ಮತ್ತೆ ನರ್ಸಿಂಗ್ ಶಾಲೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ಜಿಲ್ಲೆಯವರಿಗೆ ಅವಕಾಶವನ್ನು ಕೊಡಬೇಕು ಎಂದು ಹಿಂದೆ ನಾನು ಒತ್ತಾಯ ಮಾಡಿದೆ. ಆಗಿನ ಮಂತ್ರಿಗಳಾಗಿದ್ದ ಶ್ರೀಮಾನ್ ಕೃಷ್ಣಪ್ಪನವರು ಒಪ್ಪಿಕೊಂಡಿದ್ದರು. ಕಾರಣ ಏನೆಂದರೆ, ಕೆಲವು ಜಿಲ್ಲೆಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಂಥ ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕುವುದಿಲ್ಲ. ಆದರೆ ರಾಜ್ಯದ ಎಲ್ಲಾ ಭಾಗದವರನ್ನು ನರ್ಸಿಂಗ್ ಶಾಲೆಗಳಿಗೆ ಆಯ್ಕೆ ಮಾಡತಕ್ಕಂಥ ಸಂದರ್ಭ ಇರುವುದರಿಂದ ಆಯಾ ಜಿಲ್ಲೆಯವರಿಗೆ ಪ್ರಾತಿನಿಧ್ಯ ಸಿಗದೆ ಬಹಳ ತೊಂದರೆಯಾಗಿದೆ. ಆದುದರಿಂದ ಸ್ಥಳೀಯ ಜಿಲ್ಲೆಯವರಿಗೆ ಆದ್ಯತೆ ಕೊಟ್ಟು ಅವರನ್ನೇ, ಆಯ್ಕೆ ಮಾಡತಕ್ಕಂಥ ವ್ಯವಸ್ಥೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಮುಖ್ಯವಾದದ್ದು, ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರತಕ್ಕಂಥ ವಾರ್ಡ್ ಬಾಯ್ಸ್, ಆಯಾಗಳ ಮೇಲೆ ಆಸ್ಪತ್ರೆಯ ಸೂಪರಿಂಟೆಂಡೆಂಟರಿಗೆ ನೇರವಾಗಿ ಕ್ರಮ ತೆಗೆದು ಕೊಳ್ಳತಕ್ಕ ಅವಕಾಶವಿಲ್ಲದೇ ಇರುವುದರಿಂದ ಇವರ್ಯಾರೂ ಅವರಿಗೆ ಹೆದರುತ್ತಾ ಇಲ್ಲ, ಹಾಗೂ ಅಂಜುತ್ತಾ ಇಲ್ಲ. ಇವರು ಆಸ್ಪತ್ರೆಗೆ ಬರುವಾಗಲೇ ಕುಡಿದು ಬಂದು ಶಿಕ್ಕಾಪಟ್ಟೆ ವರ್ತನೆ ಮಾಡುತ್ತಾ ಇದ್ದಾರೆ. ವಾರ್ಡ್‌ಬಾಯ್ಸ್, ಆಯಾಗಳು ಕುಡಿದು ಸೂಪರಿಂಟೆಂಡೆಂಟ್‌ರನ್ನು ಯಾವ ಲೆಕ್ಕಕ್ಕೆ ತೆಗೆದುಕೊಳ್ಳದರೀತಿ ವರ್ತನೆ ಮಾಡುತ್ತಾ ಇದ್ದಾರೆ, ಆದುದರಿಂದ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರ ತಕ್ಕಂಥ ವಾರ್ಡ್‌ಬಾಯ್ಸ್ ಮತ್ತು ಆಯಾಗಳ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರ ವನ್ನು ಅಲ್ಲಿನ ಸೂಪರಿಂಟೆಂಡೆಂಟರಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಕೊಡಬೇಕು ಎಂದು ಕೋರಿಕೊಳ್ಳುತ್ತೇನೆ,

ಶ್ರೀ ಬಿ. ರಾಚಯ್ಯ.—ಬಹುಶಃ ಕ್ರಮ ತೆಗೆದುಕೊಳ್ಳುವುದಕ್ಕೆ ಯೂನಿಟ್ ಆಫೀಸರಿಗೆ ಅವಕಾಶ ಇದೆ. ಒಂದೊಂದು ಸಾರಿ ಅವರಿಗೆ ಹೆದರಿಕೊಂಡು ಆಕ್ಷನ್ ತೆಗೆದುಕೊಳ್ಳದಿರುವುದರಿಂದ ಕಷ್ಟವಾಗುತ್ತಾ ಇದೆ. ಇಂಥವರು ಹೀಗೆ ಮಾಡುತ್ತಾ ಇದ್ದಾರೆ ಎಂದು ಅವರ ಮೇಲೆ ಚಾರ್ಜಸ್ ಮಾಡಿ ಸರ್ಕಾರಕ್ಕೆ ಕಳಿಸಿಕೊಟ್ಟರೆ ಅದನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಎನ್‌ಕ್ವೈರಿ ಆದಮೇಲೆ ಅವರಿಗೆ ಏನು ಶಿಕ್ಷೆ ಆಗ ಬೇಕೋ ಅದನ್ನು ಮಾಡಿಸೋಣ. ಆದರೆ ಇಂಥವರು ಕೆಲವರು ಮಾತ್ರ ಇದ್ದಾರೆ, ಆ ಕೆಲವರನ್ನು ನಿವೃತ್ತಿ ಮಾಡತಕ್ಕಂಥ ವ್ಯವಸ್ಥೆ ಮಾಡೋಣವೆಂದರೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನಲ್ಲಿ ಅವರು ಸರಿಯಾಗಿ ಬರೆಯುವುದಿಲ್ಲ. ಎರಡನೆಯದಾಗಿ, ಎಲ್ಲೆಲ್ಲಿ ನರ್ಸಿಂಗ್ ಸ್ಕೂಲ್ಸ್, ಕಾಲೇಜಸ್‌ನ್ನು ಮಾಡುತ್ತಾ ಇದ್ದಾರೆ ಅಲ್ಲಿ ಆಯಾ ಜಿಲ್ಲೆಯವರಿಗೆ ಆದ್ಯತೆ ಕೊಡಬೇಕು ಎಂದು ಹೇಳಿದ್ದಾರೆ. ನ್ಯಾಯಾಲಯದ ಪ್ರಕಾರ ಆಯಾ ಜಿಲ್ಲೆಗೆ ಕನ್‌ಫೈನ್ ಮಾಡುವುದಕ್ಕಾಗುವುದಿಲ್ಲ. ಮೂರನೆಯದಾಗಿ, ಪೋಸ್ಟ್ ಗ್ರ್ಯಾಜುಯೇಟ್ಸನ್ನು ಸೆಲೆಕ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ರೀತಿ ಮಾಡುತ್ತೀರಿ ಎಂದು ಹೇಳಿದರು. ನಾವು ಹಿಂದಿನಿಂದ ಕೂಡ ಸೀನಿಯಾರಿಟಿಗೆ ಮೊದಲು ಆದ್ಯತೆ ಕೊಟ್ಟಿದ್ದೇವೆ. ರಿಸರ್ವೇಷನ್‌ನ್ನು ಪೋಸ್ಟ್ ಗ್ರ್ಯಾಜುಯೇಷನ್‌ನಲ್ಲಿ ಈ ಸಾರಿ ಫಾಲೋ ಮಾಡಲಿಲ್ಲ. ಪೋಸ್ಟ್ ಗ್ರ್ಯಾಜುಯೇಷನ್‌ನಲ್ಲಿ ಒಂದೇ ಹಂತದಲ್ಲಿ ರಿಸರ್ವೇಷನ್ ಪಾಲಿಸಬೇಕೇ ವಿನಃ ಎರಡನೇ ಹಂತದಲ್ಲಿ ಪಾಲಿಸುವುದಕ್ಕಾಗುವುದಿಲ್ಲ ಎಂದು ಲಾ ಒಪಿನಿಯನ್ ಬಂದಿದ್ದರಿಂದ ಅದನ್ನು ಮಾಡುವುದಕ್ಕೆ ಆಗಲಿಲ್ಲ.

ಅಧ್ಯಕ್ಷರು.—ಈಗ ಲಾಸ್ಟ್ ಲೈಕುದ್ದೀನ್‌ರವರು.

ಶ್ರೀ ಬಿ. ಎ. ಉಪ್ಪಿನ್.—ಹಿಂದೆ ಇದ್ದವರನ್ನು ನೀವು ನೋಡುತ್ತಾ ಇಲ್ಲ.

(ಗೊಂದಲ)

ಅಧ್ಯಕ್ಷರು.—ಏನ್ರಿ ಅದು ಗಲಾಟೆ. ಇಲ್ಲಿಯವರೆಗೆ ಕಾಂಗ್ರೆಸ್‌ನವರು ೧೪ ಜನ ಕೇಳಿದ್ದಾರೆ, ಜನತಾದವರು ೮ ಜನ ಕೇಳಿದ್ದಾರೆ. ಒಂದೂವರೆ ತಾಸಿನ ಮೇಲೆ ಆಯಿತು.

ಶ್ರೀ ಬಿ. ಎ, ಉಪ್ಪಿನ್.—ಹಿಂದಿನ ಬೆಂಚ್‌ನಲ್ಲಿರತಕ್ಕಂಥವರು ಶಾಸಕರು ಹೌದೋ ಅಲ್ಲವೋ, ನಾವು ಎಲೆಕ್ಷನ್‌ನಲ್ಲಿ ಕಷ್ಟಪಟ್ಟು ಗೆದ್ದಿದ್ದೇವೊ ಇಲ್ಲವೋ ? ನಾವು ಒಂದು ಪ್ರಶ್ನೆ ಕೇಳಬೇಕಾದರೆ......

ಅಧ್ಯಕ್ಷರು.—೨೨೪ ಜನರೂ ಅದಕ್ಕೇ ಬಂದಿರುವುದು. ಲೈಕುದ್ದೀನ್‌ರವರೆ ತಾವು ಕೇಳಿ.

ಶ್ರೀ ಬಿ. ರಾಚಯ್ಯ.—ಅಡ್ಮಿಷನ್ ಟು ಪಿ.ಜಿ. ಕೋರ್ಸ್‌ನಲ್ಲಿ ಓಪನ್ ಕಾಂಪಿಟಿಷನ್‌ನಲ್ಲಿ ಬಂದಂಥ ಕಾಲದಲ್ಲಿ ರಿಸರ್ವೇಷನ್ ಮಾಡಿದ್ದೇವೆ. ಡಿಪಾರ್ಟ್‌ಮೆಂಟ್ ಮುಖಾಂತರ ಸೆಲೆಕ್ಟ್ ಮಾಡತಕ್ಕಂಥ ಕಾಲದಲ್ಲಿ ಸೀನಿಯಾರಿಟಿ ಪ್ರಕಾರ ಮಾಡಿದ್ದೇವೆ.

ಅಧ್ಯಕ್ಷರು.—ಲೈಕುದ್ದೀನ್‌ರವರೆ ತಾವು ಕೇಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು.—ಲಕ್ಕಪ್ಪನವರೆ ಕೂಡಿ ನೀವು. ನಾಳೆ ನಾಡಿದ್ದು ಎಲ್ಲ ಮುಗಿಯಬೇಕು. ಗಿಲಿಟಿನ್‌ಗೆ ಹಾಕುವುದು ಬೇಡ ಎಂದು ನಾನು ಮೊದಲೇ ಹೇಳಿದ್ದೇನೆ. ಜವಾಬ್ದಾರಿ ನಿಮಗೂ ಇರಬೇಕು. ನಮಗೂ ಇರಬೇಕು ಲೈಕುದ್ದೀನ್‌ರವರೆ, ತಾವು ಕೇಳಿ.

† SRI MD. LAIKUDDIN BURANUDDIN.—Sir, in Karnataka the treatment given by Unani doctors is most popular but the Government is not providing facilities for establishing Unani clinics at Taluka levels so far. I request the Hon. Minister to establish Unani clinics at taluk levels and at the same time the Minority Commission has recommended for establishing of an Unani Medicle College at Gulbarga. I also request the hon. Minister to take proper steps for the establishment of Unani College at proper Gulbarga. Regarding establishing rural medical colleges the the Hon'ble Chief Minister has promised that Bidar will be given one more college. There is demand particularly for rural medical colleges since quite a long time and the permission has not been accorded so far for the establishment of medical colleges in Hyderabad Karnataka areas. I have also requested the Hon. Minister to constitute the board of visitors in the district hospital Bidar. So far they have not constituted. This is not only with regard to Bidar but also in the case of district hospitals at Raichur and Gulbarga where they have not constituted the Board of visitors. Here, they have not maintained proper sanitation as a result of which great inconvenience is caused to the patients particularly in operation theatres. Due to insanitation many people have died. There is no operation theatre in the District hospital Bidar. There is no arrangement for scanning, X-ray and also intensive care unit, This hospital has to be upgraded to 500 bedded hospital. Rs. 97 lakhs was earmarked last year for building. So far no steps have been taken for upgrading and constructing a building. Even in P. H. Cs. and P. H. Us life saving drugs are not available, Dog bites, titanus and other cases have been detected in the rural areas. The life saving drugs are not available for these diseases in the Central stores whenever they indent. They may send after one month, but by that time all the patients would have died. Please take steps for supplying or life saving drugs as well as usual other drugs. At Chincholi the hospital has been collapsed and so far it has not been reconstructed

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

and repaired. The entire hospital has fallen down. Then What is the fate of the rural poor. This is a more important question.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ. ಈ ಯುನಾನಿ ಕಾಲೇಜಿನ ಇನ್ಸ್‌ಸ್ಟಿಟ್ಯೂಟ್ ಅನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುವುದಕ್ಕೆ ಸರ್ಕಾರ ಈಗಾಗಲೇ ಜಮೀನನ್ನು ಕೊಟ್ಟಿದೆ. ಅದನ್ನು ಗುಲ್ಬರ್ಗ ದಲ್ಲಿ ಮಾಡುವುದಿಲ್ಲ. ಬೆಂಗಳೂರಿನಲ್ಲಿ ನಮ್ಮ ಬೆಗ್ಗರ್ಸ್ ರಿಲೀಫ್ ಕಾಲೋನಿಯಲ್ಲಿರತಕ್ಕ ೩೭ ಎಕರೆ ಜಮೀನನ್ನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ನಮಗೆ ವಹಿಸಿಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿ ಯುನಾನಿ ಕಾಲೇಜ್ ಇನ್ಸ್‌ಸ್ಟಿಟ್ಯೂಟ್ ಆಗುತ್ತದೆ. ಎರಡನೆಯದು ಬೀದರ್ ಜಿಲ್ಲಾ ಆಸ್ಪತ್ರೆಯನ್ನು ಉನ್ನತೀಕರಣ ಮಾಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಈಗ ೨೦೦ ಎಂ. ಎ. ಶಕ್ತಿ ಇರತಕ್ಕ ಕ್ಷ. ರೇ. ಯೂನಿಟ್ ಅನ್ನು ಟಿ. ಬಿ. ಆಸ್ಪತ್ರೆಯಿಂದ ಜಿಲ್ಲಾ ಆಸ್ಪತ್ರೆಗೆ ಹಾಕಿದ್ದೇವೆ. ಇದು ಅಲ್ಲದೆ

೧.೩೦ ಪಿ. ಎಂ.

೧೫೦ ಎಂ. ಎಂ. ಶಕ್ತಿ ಇರತಕ್ಕ ಇನ್ನೊಂದು ಕ್ಷ-ಕಿರಣವನ್ನು ಸದ್ಯದಲ್ಲಿಯೇ ಕೊಡಲಿಕ್ಕೆ ಏರ್ಪಾಟಾಗಿದೆ. ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ ಎನ್ನುವ ವಿಷಯದಲ್ಲಿ ಸಾಮಾನ್ಯವಾಗಿ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಔಷಧಿಗಳನ್ನು ಪುಕ್ಕಟ್ಟೆಯಾಗಿ ಹೆಚ್ಚು ಜನರಿಗೆ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ, ಈಗ ಅಲ್ಲಿದ್ದಂಥ ಔಷದಿ ತಕ್ಷಣ ಮುಗಿದು ಹೋಗಿದೆ. ಔಷಧಿ ಅಲ್ಲಿ ಉಳಿದಿಲ್ಲ. ಮಾನ್ಯ ಸದಸ್ಯರು ಜೀವ ರಕ್ಷಣ ಔಷಧಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅಲ್ಲಿನ ಡಿವಿಜನಲ್ ಆಫೀಸರ್‌ಗೆ ವಿಜಿಟ್ ಮಾಡಿ ಅಲ್ಲಿ ಏನೇನು ಕಡಿಮೆ ಇವೆ ಅದನ್ನು ಸರಿಮಾಡಿ ಎಂದು ಹೇಳಿ ಕಳುಹಿಸುತ್ತೇನೆ.

ಶ್ರೀ ವಿಶ್ವನಾಥ್ ಹೆಚ್. ಪಾಟೀಲ್.—ಐಪಿಪಿ ಯೋಜನೆ ಉತ್ತರ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಬರುತ್ತದೆ. ಅದಕ್ಕೆ ೭೧ ಕೋಟಿ ರೂಪಾಯಿಯ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಅದು ಈ ವರ್ಷ ೧೯೮೮ರ ಮಾರ್ಚಿಯೊಳಗೆ ಮುಗಿಯಬೇಕಾಗಿತ್ತು. ಮತ್ತೆ ಒಂದು ವರ್ಷ ಅದಕ್ಕೆ ಲೈಫ್ ಕೊಟ್ಟಿದ್ದಾರೆ. ಈಗಾಗಲೇ ಸುಮಾರು ೭೧ ಕೋಟಿ ರೂಪಾಯಿಗಳಲ್ಲಿ ೩೫ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಈ ಕಟ್ಟಡಗಳಿಗಾಗಿ ೪೨ ಕೋಟಿ ರೂಪಾಯಿಯಲ್ಲಿ ೨೫ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ ಇನ್ನೂ ೧೭ ಕೋಟಿ ರೂಪಾಯಿ ಈ ವರ್ಷ ಖರ್ಚು ಮಾಡಬೇಕು. ಈ ೧೭ ಕೋಟಿ ರೂಪಾಯಿ ಖರ್ಚು ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ತಮ್ಮ ಉತ್ತರದಲ್ಲಿ ತಿಳಿಸಬೇಕು. ವಿಶೇಷವಾಗಿ ಈ ಯೋಜನೆ ಹಿಂದುಳಿದ ಜಿಲ್ಲೆಗಳಾದ ಗುಲ್ಬರ್ಗ, ಬೀದರ್ ನಲ್ಲಿ ಬರುತ್ತದೆ. ೧೭ ಕೋಟಿ ರೂಪಾಯಿ ಈ ವರ್ಷ ಬಿಡುಗಡೆ ಮಾಡದೇ ಹೋದರೆ ಆ ಕಟ್ಟಡಗಳು ಪೂರ್ತಿ ಆಗದೆ, ಅರ್ಧಕ್ಕೆ ನಿಂತು ಹೋಗುತ್ತವೆ. ಈಗಾಗಲೇ ಏಪ್ರಿಲ್, ಮೇ ಎರಡು ತಿಂಗಳು ಕಳೆದು ಹೋಗಿವೆ. ಕಳೆದ ಎರಡು ತಿಂಗಳಿಂದಲೂ ದುಡ್ಡು ಬಿಡುಗಡೆ ಮಾಡಿಲ್ಲ. ಆದ್ದರಿಂದ, ಮಾನ್ಯ ಮಂತ್ರಿಗಳು ಈ ಯೋಜನೆ ಬಗ್ಗೆ ಕಾಳಜಿ ವಹಿಸಿ ದುಡ್ಡು ಬಿಡುಗಡೆ ಮಾಡಬೇಕು. ಇನ್ನು ಎರಡನೆಯದು ಅಂದರೆ ಗುಡ್ಡಗಾಡು ಪ್ರದೇಶದಲ್ಲಿ ೨೦ ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಬೇಕೆಂದು ನಿಯಮವಿದೆ. ನಮ್ಮ ಜಿಲ್ಲೆಯಲ್ಲಿ ಪಾಪುಲೇಷನ್ ಸಾಂದ್ರತೆ ತುಂಬಾ ಕಡಿಮೆ ಇದೆ. ಆದರೆ ರಾಜ್ಯದ ಏರಿಯಾದಲ್ಲಿ ದೊಡ್ಡದು ಇದೆ, ನಮ್ಮದು ಎರಡನೆಯ ದೊಡ್ಡ ಜಿಲ್ಲೆ, ಪಾಪುಲೇಷನ್ ಸ್ವಲ್ಪ ಕಡಿಮೆ. ೨೦ ಸಾವಿರ ಜನಸಂಖ್ಯೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಬೇಕೆಂದುದು ಸರ್ಕಾರದ ನಿಯಮ ಇದೆ ಆದ್ದರಿಂದ, ನಮಗೆ ಬಹಳ ಅನ್ಯಾಯವಾಗುತ್ತಿದೆ. ಏಕೆಂದರೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ತುಂಬಾ ದೂರ ಇರುವುದರಿಂದ ಇದನ್ನು ರಿಲ್ಯಾಕ್ಸ್ ಮಾಡಿ ಈ ಗುಡ್ಡಗಾಡು ಪ್ರದೇಶದಲ್ಲಿಯೂ ಕೊಡಲಿಕ್ಕೆ ಯಾವ ರೀತಿ ೨೦ ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಬೇಕೆಂದು ನಿಯಮ ಇದೆ, ಅದೇ ರೀತಿ ಗುಲ್ಬರ್ಗ ಜಿಲ್ಲೆಗೂ ಅನ್ವಯಿಸುವುದಕ್ಕೆ ಮಾನ್ಯ ಮಂತ್ರಿಗಳು ತೀರ್ಮಾನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಚಿತ್ತಾಪುರ್ ತಾಲ್ಲೂಕಿನಲ್ಲಿ ಮೂರು ಹೆರಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡಿದ್ದಾರೆ. ಸರ್ಕಾರದ ನಿಯಮದ ಪ್ರಕಾರವಾಗಿ ಅಲ್ಲಿ ಕಟ್ಟಡ ಕಟ್ಟಿಸಿಕೊಡಬೇಕೆಂದು ಇದೆ ಆ ನಿಯಮದ ಪ್ರಕಾರ ಹೆಬ್ಬಾಳು, ಬೇಟ್‌ಸೂರು. ಹರಳ್‌ಕಲ್‌ಗಳಲ್ಲಿ ೧೦ ಹಾಸಿಗೆಗಳ ಹೆರಿಗೆ ಆಸ್ಪತ್ರೆಗೆ ಕಟ್ಟಡಗಳನ್ನು ಕಟ್ಟಿ ಆಗಿದೆ, ಈಗ ತಕ್ಷಣದಲ್ಲಿ ಸ್ಟ್ಯಾಫ್ ಮಂಜೂರು ಮಾಡಿಕೊಡಬೇಕಾಗಿದೆ. ತಕ್ಷಣ ಸ್ಟ್ಯಾಫ್ ಮಂಜೂರು ಮಾಡಿಕೊಡದೇ ಹೋದರೆ ಅಲ್ಲಿ ಕಟ್ಟಿರತಕ್ಕಂಥ ಕಟ್ಟಡಗಳು ಹಾಳಾಗು

ತ್ತವೆ. ಸಿಬ್ಬಂದಿಯನ್ನು ಮಂಜೂರು ಮಾಡಬೇಕೆಂದು ನಮ್ಮ ಜಿಲ್ಲೆಯಿಂದ ಪ್ರಪೋಸಲ್ ಬಂದಿದೆ. ಆದ್ದರಿಂದ ಸ್ಟ್ಯಾಫ್ ಮಂಜೂರು ಮಾಡಿಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಐಪಿಪಿ ೮೮ ಕೋಟಿ ರೂಪಾಯಿನಲ್ಲಿ ೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇದನ್ನು ಒಂದು ವರ್ಷ ಅಂದರೆ ೧೯೮೯ನೇ ಕೊನೆವರೆಗೆ ಕಟ್ಟಿಸಬಹುದು ಎಂದು ಹೇಳಿದ್ದಾರೆ. ಉಳಿದ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಪಿ.ಡಬ್ಲ್ಯೂ.ಡಿ. ಅವರು ಎಲ್ಲೆಲ್ಲಿ ಕನ್‌ಸ್ಟ್ರಕ್ಷನ್ ಪ್ರಾರಂಭ ಮಾಡಿದ್ದಾರೆ, ಅವುಗಳನ್ನು ಪೂರೈಸಲಿಕ್ಕೆ ೧೨ ಕೋಟಿ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡು ಬಿಡುಗಡೆ ಮಾಡುತ್ತಿದ್ದೇವೆ. ಪ್ಲಾನಿಂಗ್‌ನವರು ಒಪ್ಪಿಕೊಂಡಿದ್ದಾರೆ. ಮಾನ್ಯ ಸದಸ್ಯರು ಚಿಂಚೋಳಿ ತಾಲ್ಲೂಕು ಆಸ್ಪತ್ರೆ ಬಿದ್ದು ಹೋಗಿದೆ ಹೊಸದಾಗಿ ಕಟ್ಟಿಸಬೇಕೆಂದು ಹೇಳಿದರು ಹಳೆಯ ಕಟ್ಟಡಕ್ಕೆ ಬದಲಾಗಿ ಅಲ್ಲಿ ಒಂದು ಕಮ್ಯುನಿಟಿ ಆಸ್ಪತ್ರೆಯನ್ನು ಕಟ್ಟಿಸಲಿಕ್ಕೆ ಈ ವರ್ಷ ಈಗಾಗಲೇ ಪ್ಲಾನ್ ಅಂಡ್ ಎಸ್ಟಿಮೇಟ್ ತೆಗೆದುಕೊಂಡು ಅದನ್ನು ಮಾಡುತ್ತಿದ್ದೇವೆ. ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಕೊಡತಕ್ಕಂಥದುಡ್ಡನ್ನು ನಾವು ಸದುಪಯೋಗ ಪಡಿಸಿಕೊಳ್ಳಲಿಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಈ ದೃಷ್ಟಿಯಿಂದ ಹೇಳುವುದಾದರೆ ಈ ವರ್ಷ ಕೆಲವು ಬಿಟ್ಟು ಹೋಗಿರತಕ್ಕದ್ದು ಸೇರಿಸಿಕೊಳ್ಳಬೇಕೆಂದು ಹೇಳಿದ್ದೇವೆ ಅವುಗಳನ್ನು ಸೇರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಇದು ಕೇಂದ್ರ ಸರ್ಕಾರದ ಯೋಜನೆ. ೩೦ ಸಾವಿರ ಜನಸಂಖ್ಯೆ ಇದ್ದರೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಸಾಮೂಹಿಕವಾಗಿಯಾದರೆ ಒಂದು ಲಕ್ಷ ಜನಸಂಖ್ಯೆ ಇರಬೇಕೆಂದು ಹೇಳಿದ್ದಾರೆ. ಇದನ್ನು ರಿವೈಸ್ಡ್ ಮಾಡಬೇಕೆಂದು ಕೇಳಿದ್ದೇವೆ. ಅವರು ಒಪ್ಪಿದರೆ ಮಾಡುತ್ತೇವೆ.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಆದಮೇಲೆ ಆಕಸ್ಮಾತ್ ಸತ್ತರೆ ಅವರಿಗೆ ಪರಿಹಾರ ಕೊಡುವ ಬಗ್ಗೆ ಒಂದು ನಿರ್ಧಿಷ್ಟವಾದ ಮೊತ್ತ ಕೊಡಬೇಕೆಂದು ಸರ್ಕಾರದಲ್ಲಿ ನಿಯಮ ಇಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಫ್ಯಾಮಿಲಿ ಪ್ಲಾನಿಂಗ್ ಮಾಡುವ ಸಂದರ್ಭದಲ್ಲಿ ಆಪರೇಷನ್ ಆದಮೇಲೆ ಬೇರೆ ಬೇರೆ ಕಾರಣಗಳಿಂದ ಸತ್ತಿರತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಆದರೆ ಆಪರೇಷನ್ ಮಾಡಿಸಿಕೊಂಡು ಸತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದರೆ ಅದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕೆ ಪ್ರಾವಿಷನ್ ಮಾಡಿಕೊಳ್ಳುತ್ತೇವೆ.

ಶ್ರೀ ಬಿ. ಎ. ಉಪ್ಪಿನ್.—ಮಾನ್ಯ ಅಧ್ಯಕ್ಷರೇ, SAMSHI ಯಲ್ಲಿ ಸುಮಾರು ೧೫ ಸಾವಿರ ಜನಸಂಖ್ಯೆ ಇದೆ ದುರ್ದೈವ ಅಲ್ಲಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲ. ಇಲ್ಲಿಗೆ ಆರೋಗ್ಯ ಕೇಂದ್ರ ಬೇಕೆಂದು ಕಳೆದ ಮೂರು ವರ್ಷಗಳಿಂದಲೂ ಮಾನ್ಯ ಆರೋಗ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಕೇವಲ ಆಶ್ವಾಸನೆಗಳನ್ನು ಮಾತ್ರ ಕೊಡುತ್ತಾ ಬಂದಿರುತ್ತಾರೆ. ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಜಿಲ್ಲಾಪರಿಷತ್ ಶಿಫಾರಸ್ಸು ಮಾಡಿದರೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಜಿಲ್ಲಾ ಪರಿಷತ್ತು ಕೂಡ ಶಿಫಾರಸ್ಸು ಮಾಡಿದೆ. ಅದರ ಪ್ರತಿಕೂಡ ನನ್ನ ಹತ್ತಿರ ಇದೆ. ಮಂಡಲ್ ಪಂಚಾಯತ್‌ನಿಂದ ಈಗಾಗಲೇ ನಾಲ್ಕು ಎಕರೆ ಗ್ರಾಮಠಾಣ ಪ್ರದೇಶದಲ್ಲಿ ಜಾಗವನ್ನು ಆರೋಗ್ಯ ಇಲಾಖೆಗೆ ಸ್ಯಾಂಕ್ಷನ್ ಮಾಡಿದ್ದಾರೆ. ಸ್ವಂತ ಕಟ್ಟಡವನ್ನು ಕಟ್ಟುತ್ತಲೂ ಇದ್ದಾರೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇನ್ನೆಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರೆಂಬುದನ್ನು ನಿಖರವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಪಾಪುಲೇಷನ್ ನಾರಮ್ಸ್‌ಗೆ ಅನುಸಾರವಾಗಿ ಶಿಫಾರಸ್ಸು ಮಾಡಿದ್ದರೆ ಪರವಾನಿಗೆಯನ್ನು ಕೊಡಿಸುತ್ತೇನೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಜನರ ಆದ್ಯತೆಯ ಮೇಲೆ ಹೆಚ್ಚುವರಿ ಸೀಟುಗಳನ್ನು ನಿಯಮಾವಳಿಯಂತೆ ಕೊಟ್ಟರೆ ಅವರು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇಂಡಿಯನ್ ಮೆಡಿಸನ್ ಇನ್‌ಫ್ರಾಸ್ಟ್ರಕ್ಚರ್ ಇಟ್ಟುಕೊಳ್ಳದಿದ್ದರೆ ಅವುಗಳನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ಎಂದು ಕೇಳುತ್ತೇನೆ ?

ಎರಡನೆಯದಾಗಿ ಬಿ.ಸಿ.ಜಿ. ವಾಕ್ಸಿನೇಷನ್ ಪ್ಲಾಂಟ್ ನಿಂತುಬಿಟ್ಟರೆ ಅದರ ಬದಲಿ ಬೇರೆ ಅಲಾಟ್ ಮಾಡಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ಹಿರಿಯೂರು ತಾಲೂಕಿನಲ್ಲಿ ಎರಡು ಲಕ್ಷ ಹದಿನೇಳು ಸಾವಿರ ಜನಸಂಖ್ಯೆ ಇದೆ. ಅಲ್ಲಿ ಜನರಲ್ ಆಸ್ಪತ್ರೆ ಇಲ್ಲದಿರುವುದು ಬಹಳ ದುರಾದೃಷ್ಟಕರ. ಆದ್ದರಿಂದ ಜನರಲ್ ಆಸ್ಪತ್ರೆಯನ್ನು ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಒಂದು ದಂತ ವೈದ್ಯರ ಹುದ್ದೆ ಈಗಿರುವ ಆಸ್ಪತ್ರೆಯಲ್ಲಿ ಬಹಳ ದಿವಸಗಳಿಂದಲೂ ಖಾಲಿ ಇದೆ. ಅದನ್ನು ಕೂಡಲೇ ತುಂಬಬೇಕು. ಮತ್ತು ಅಲ್ಲಿ ಒಂದು ಎಕ್ಸ್‌ರೆ ಪ್ಲಾಂಟ್ ಇದೆ. ಅದನ್ನು ನಡೆಸುವುದಕ್ಕೆ ಆದಷ್ಟು ಬೇಗನೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಒಂದು ರೀತಿಯಾದ ಹೊಸ ರೋಗ ತಲೆ ಎತ್ತಿದೆ. ಅದು ಮಂಗನ ಕಾಯಿಲೆ ಎಂದು. ಇದು ನಾಲ್ಕು ವರ್ಷಗಳಿಂದಲೂ ಇದೆ. ಈ ಮಂಗನ ಕಾಯಿಲೆ ಹತ್ತಿದ ರೋಗಿಗಳನ್ನು ಇತರೇ ರೋಗಿಗಳ ಜೊತೆಯಲ್ಲಿ ಇಡಬಾರದು. ಆದರೆ ಹೊನ್ನಾವರ ಆಸ್ಪತ್ರೆಯಲ್ಲಿ ಈ ರೋಗಿಗಳನ್ನು ಪ್ರತ್ಯೇಕವಾಗಿ ಇಡಲು ವ್ಯವಸ್ಥೆಯಿಲ್ಲ. ಇಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮಂಗನ ಕಾಯಿಲೆ ರೋಗಕ್ಕೆ ಇದುವರೆವಿಗೂ ಸರಿಯಾದ ಔಷಧಿಯನ್ನು ಕಂಡುಹಿಡಿದಿಲ್ಲ. ಇದಕ್ಕೆ ಬೇಕಾದಂತ ಔಷಧಿಗಳನ್ನೂ ಕೂಡ ಕಂಡುಹಿಡಿಯತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮೊದಲು ರೋಗ ತಗುಲಿದ ರೋಗಿಗಳನ್ನು ಪ್ರತ್ಯೇಕವಾಗಿ ಇಡಬೇಕೆಂದು ಹೇಳಿದ್ದಾರೆ. ಅದಕ್ಕೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇವೆ. ಇದನ್ನು ಜಿಲ್ಲಾ ಪರಿಷತ್ತಿನವರು ಮಾಡಬೇಕೆಂದರೆ ತಡವಾಗಬಹುದು. ನಾವೇ ಆ ರೋಗಿಗಳನ್ನು ಪ್ರತ್ಯೇಕ ವಾರ್ಡಿನಲ್ಲಿ ಇಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಲಸಿಕೆಗಳನ್ನು ಕಂಡುಹಿಡಿದಿರುವ ಬಗ್ಗೆ ಹೇಳಿದ್ದಾರೆ. ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಲಸಿಕೆ ತಯಾರಿಸಲಾಗುತ್ತಿದೆ ಎಂದು ನಿರ್ದೇಶಕರು ಚೀಟಿ ಬರೆದು ಕಳುಹಿಸಿದ್ದಾರೆ. ಮಂಗನ ಕಾಯಿಲೆ ವಿಷಯದಲ್ಲಿ ಹೇಳುವುದಾದರೆ ಕಾಡಿನ ಪ್ರದೇಶಗಳಲ್ಲಿ ಅದು ಕಾಣಿಸಿಕೊಂಡು ಜನರು ಸತ್ತಿರತಕ್ಕದ್ದನ್ನು ಕೇಳಿದ್ದೇನೆ. ಯಾವ ಯಾವ ಪ್ರಾಣಿಗಳಿಂದ ಆ ರೋಗ ಹರಡುತ್ತದೆ ಆ ಪ್ರಾಣಿಗಳನ್ನು ಎಷ್ಟು ದೂರ ಇಡಬೇಕೋ ಅಷ್ಟು ದೂರ ಇಡಬೇಕೆಂಬ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಲಸಿಕೆಯನ್ನು ಶಿವಮೊಗ್ಗದಲ್ಲಿ ಕಂಡುಹಿಡಿದಿದ್ದಾರೆ. ತಾವು ಅಲ್ಲೇ ಹತ್ತಿರದಲ್ಲಿರುವುದರಿಂದ ಅದನ್ನು ನೋಡಿ ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿ ಎಂದು ಇಲಾಖೆಯ ಮೂಲಕ ತಿಳಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಚಿಕ್ಕನಾಯಕನಹಳ್ಳಿ ಎರಡು ಲಕ್ಷಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರತಕ್ಕ ತಾಲ್ಲೂಕು, ಅಲ್ಲಿಗೆ ಒಂದು ಜನರಲ್ ಆಸ್ಪತ್ರೆ ಆಗಬೇಕು. ಈ ಬಗ್ಗೆ ಸರ್ಕಾರದ ಕಾರ್ಯಕ್ರಮ ಏನಾದರೂ ಇದೆಯೇ? ಈ ಇಲಾಖೆಯಲ್ಲಿ ಬಹಳ ಜನ ಕರಪ್ಟ್ ಇದ್ದಾರೆಂದು ತಿಳಿದುಬಂದಿದೆ. ಎಂಟ್ರೆನ್ಸ್ ಎಕ್ಸಾಮಿನೇಷನ್ ಪೇಪರನ್ನು ಕಂಪ್ಯೂಟರಿಗೆ ಕೊಟ್ಟು ಮಾಹಿತಿ ತಿಳಿಯತಕ್ಕ ಪದ್ಧತಿ ಇದೆ. ಆ ಕರಪ್ಟ್ ಜನರ ಜೊತೆ ಸೇರಿ ಕಂಪ್ಯೂಟರ್ ಸಹ ಕರಪ್ಟ್ ಆಗಿದೆ ಎಂದು ಜನರ ಮನಸ್ಸಿನಲ್ಲಿ ಬಂದಿದೆ. 16 ಇದ್ದದ್ದನ್ನು 61 ಎಂದು ಮಾಡುತ್ತದೆ. ದಯಮಾಡಿ ಈ ಬಗ್ಗೆ ನಿಗಾ ವಹಿಸಬೇಕು. ಅರ್ಹ ಮತ್ತು ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಎಂಟ್ರೆನ್ಸ್ ಎಕ್ಸಾಮಿನೇಷನ್‌ನಿಂದ ಅನ್ಯಾಯವಾಗುತ್ತದೆ. ದಯಮಾಡಿ ಆ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಎಂಟ್ರೆನ್ಸ್ ಎಕ್ಸಾಮಿನೇಷನ್ ನಡೆಯದೆ ಇದ್ದ ಕಾಲವನ್ನು ತಾವು ಯೋಚಿಸಬೇಕು. ಎಂಟ್ರೆನ್ಸ್ ಎಕ್ಸಾಮಿನೇಷನ್ ಇಟ್ಟಿರುವುದು ಅರ್ಹತೆ ಇದ್ದವರಿಗೆ ಅವಕಾಶವಾಗುತ್ತದೆ ಎಂದು. ಅದರಲ್ಲಿ ಲೋಪದೋಷ ಇದೆ ಎಂದು ಹೇಳಿದ್ದಾರೆ, ಅದನ್ನು ನಾನು ನೋಡುತ್ತೇನೆ. ಚಿಕ್ಕನಾಯಕನಹಳ್ಳಿಯಲ್ಲಿ 2 ಲಕ್ಷ ಜನಸಂಖ್ಯೆ ಇರುವುದರಿಂದ ಇರತಕ್ಕ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಕನ್‌ವರ್ಟ್ ಮಾಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹಂತಹಂತವಾಗಿ ಸಾಮಾನ್ಯವಾಗಿ ಎಲ್ಲಾ ರೀತಿಯ ವ್ಯವಸ್ಥೆ ಅಲ್ಲಿ ಇರುವ ಏರ್ಪಾಡನ್ನು ಮಾಡುತ್ತೇನೆ.

ಶ್ರೀ ಆರ್. ರಾಮಯ್ಯ.—ನನ್ನ ಪ್ರಶ್ನೆಗಳಿಗೆ ಪೂರ್ಣ ಉತ್ತರ ಬರಲಿಲ್ಲ.

ಶ್ರೀ ಬಿ. ರಾಚಯ್ಯ.—ಆರ್ಥೋಪೆಡಿಕ್ಸ್ ಬೇಕು, ಹಲ್ಲು ನೋವಾದರೆ ಡೆಂಟಲ್ ಸರ್ಜನ್ ಬೇಕೆಂದು ಕೇಳಿದ್ದಾರೆ, ಈ ಬಗ್ಗೆ......

ಅಧ್ಯಕ್ಷರು.—ಅವರಿಗೆ ಈಗ ಏಕೆ ಉತ್ತರ ಹೇಳುತ್ತಿದ್ದೀರಿ? ಖೇಡ್ ಅವರೇ ಕೇಳಿ.

ಶ್ರೀ ಎನ್. ಎಸ್. ಖೇಡ್.—ಮಾನ್ಯ ಕಡಪಟ್ಟಿಯವರ ಅಧ್ಯಕ್ಷತೆಯಲ್ಲಿ ಎಸ್ಟಿಮೇಟ್ ಕಮಿಟಿಯು ಆರೋಗ್ಯ ಇಲಾಖೆಯ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿ ಒಂದು ವರದಿಯನ್ನು ಸಲ್ಲಿಸಿತು. ಅದರ ಮೇಲೆ ಇಲಾಖೆಯ ಮುಖ್ಯಸ್ಥರು ಲೋಕಾಯುಕ್ತಕ್ಕೆ ರೆಫರ್ ಮಾಡಿ ಸುಮ್ಮನೆ ಕುಳಿತಿದ್ದಾರೆಂದು ನನಗೆ ತಿಳಿದುಬಂದಿದೆ. ಕಾರ್ಯದರ್ಶಿಯವರು, ಅಧಿಕಾರಿಗಳು ಒಂದೊಂದು ಒಪೀನಿಯನ್ ಕೊಟ್ಟಿದ್ದಾರೆ. ಅಂಥ ಅಧಿಕಾರಿಗಳು ಇರುವಾಗ ಯಾವ ಅಧಿಕಾರಿಯನ್ನೂ ಮುಟ್ಟುಗೋಲು ಹಾಕುವ ಅಥವಾ ಸಸ್ಪೆಂಡ್ ಮಾಡುವ ಕೆಲಸವನ್ನು ಮಾಡಿಲ್ಲ. ನಾವು ಕೂಡ ಮಂತ್ರಿಗಳೊಡನೆ ಚರ್ಚೆ ಮಾಡಿ ವಿಷಯವನ್ನು ತಿಳಿಸಿದ್ದೇವೆ. ಇಂಥ ಆಪಾದನೆ ಇದ್ದಾಗ (ಸ್ಕ್ಯಾಂಡ್ರಲ್ ಅಂದರೂ ಅಡ್ಡಿಯಿಲ್ಲ) ಇದರ ಬಗ್ಗೆ ಮಂತ್ರಿಗಳು ಏನು ಕ್ರಮ ಕೈಗೊಳ್ಳುತ್ತಾರೆ? ಇನ್ನೊಂದು ಪ್ರತ್ಯಕ್ಷವಾದ ಉದಾಹರಣೆಯನ್ನು ಹೇಳಿ ಅದರ ಪೇಪರ್ ಕಟಿಂಗ್ ಕೂಡ ನಾನು ಅವರಿಗೆ ಕೊಟ್ಟಿದ್ದೇನೆ. ಬೆಳಗಾವಿ ವಿಭಾಗದ ಜಾಯಿಂಟ್ ಡೈರೆಕ್ಟರ್ ಅವರು, "ಅದು ತಪ್ಪು ವರದಿ. ನಾವು ಔಷಧಿಯನ್ನಾಗಲೀ ಬೇರೆ ಯಾವುದನ್ನೇ ಆಗಲಿ ಪರ್ಚೇಸ್ ಮಾಡಿಲ್ಲ" ಎಂದು ಹೇಳಿಕೆ ಕೊಟ್ಟಿದ್ದಾರೆ. ಈ ಹೇಳಿಕೆ ಕೊಟ್ಟು ಈ ಮನೆಗೆ ಅವರು ಅಪಮಾನ ಮಾಡಿದ್ದಾರೆ. ಇದು ನಾಚಿಕೆಗೇಡಿನ ವಿಚಾರ. ಆ ಅಧಿಕಾರಿಯು ವರ್ತನೆ ಸರಿ ಇಲ್ಲದ್ದರಿಂದ ತಕ್ಷಣ ಅವರನ್ನು ಸಸ್ಪೆನ್‌ಷನ್ ನಲ್ಲಿಡಬೇಕು. ಮತ್ತು ಆ ಅಧಿಕಾರಿಯು ಅಕ್ರಮ ಸಂಪಾದನೆ ಮಾಡಿರುವುದರಿಂದ ಅವರ ಪ್ರಾಪರ್ಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇದಕ್ಕೆ ಮೊದಲೇ ಉತ್ತರ ಕೊಟ್ಟಿದ್ದೇನೆ ಸ್ವಾಮಿ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ......

ಶ್ರೀ ಎನ್. ಹೆಚ್. ಖೇಡ್.—ಅಧ್ಯಕ್ಷರೇ......

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಕೆ. ಬಿ. ಕೋಳಿವಾಡ್.—ವರ್ಗಾವಣೆ ಅಧಿಕಾರವನ್ನು ಮಂತ್ರಿಗಳು ಇಟ್ಟುಕೊಳ್ಳದೆ ಆಯಾ ಇಲಾಖೆಯ ಮುಖ್ಯಾಧಿಕಾರಿಗಳಿಗೇ ಕೊಡುವ ವಿಚಾರ ಮಂತ್ರಿಗಳಿಗಿದೆಯೋ? ರಾಣೆಬೆನ್ನೂರು ತಾಲ್ಲೂಕು ಮೆಡಲೇರಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕವನ್ನು ಆರೋಗ್ಯ ಕೇಂದ್ರವಾಗಿ ಪರಿವರ್ತಿಸಿ ಮೂರು ವರ್ಷಗಳಾದರೂ ಅಲ್ಲಿಗೆ ಎಂ. ಬಿ. ಬಿ. ಎಸ್. ಡಾಕ್ಟರನ್ನು ಹಾಕಿಲ್ಲ. ರಾಣೆಬೆನ್ನೂರು ತಾಲ್ಲೂಕಿನ ಕುಪ್ಪಲೂರಿನಲ್ಲೂ ಆರೋಗ್ಯ ಕೇಂದ್ರದಲ್ಲಿ ಒಬ್ಬ ಡಾಕ್ಟರೂ ಸಹ ಇಲ್ಲ. ಡಾಕ್ಟರುಗಳಿಲ್ಲ ಎಂದು ಗ್ರಾಮದ ಜನ ಟೆಲಿಗ್ರಾಂ ಕೊಟ್ಟಿದ್ದರು. ಜಾಯಿಂಟ್ ಡೈರೆಕ್ಟರ್ ಅವರು ಮತ್ತು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಅವರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದರೂ ಸರ್ಕಾರ ಕ್ರಮ ಕೈಗೆಂಡಿಲ್ಲ. ಇದರ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ರಾಚಯ್ಯ.—ರಾಣೆಬೆನ್ನೂರು ತಾಲ್ಲೂಕಿನಲ್ಲಿ ಎಲ್ಲಿ ಖಾಲಿ ಇದೆ ಆ ಸ್ಥಳಕ್ಕೆ ಡಾಕ್ಟರನ್ನು ಹಾಕಿಕೊಡಬಹುದು. ಆದರೆ ರೀಸೆಂಟಾಗಿ ಪೋಸ್ಟ್ ಮಾಡಿರುವವರನ್ನು ಅಲ್ಲಿ ಹಾಕಿಕೊಡಿ ಎಂದು ಹೇಳುವ ಅಭ್ಯಾಸ ಕಡಿಮೆ ಆದರೆ ಒಳ್ಳೆಯದು. ಯಾರಿಗೆ ಮೂರು ನಾಲ್ಕು ವರ್ಷ ಸರ್ವೀಸ್ ಆಗಿರುತ್ತದೋ ಅವರನ್ನು ಅಲ್ಲಿ ಹಾಕಬೇಕಾಗುತ್ತದೆ. ಜಿಲ್ಲಾ ಪರಿಷತ್ತಿನವರು, ನಮ್ಮ ಡೈರೆಕ್ಟರ್ ವರ್ಗಾವಣೆ ಆರ್ಡರ್ ಕಳುಹಿಸಿದಾಗ ಅವರು ಒಪ್ಪಲಿಲ್ಲ. ಸರ್ಕಾರದ ಮುಖಾಂತರ ಬಂದರೆ ಒಪ್ಪುತ್ತೇವೆ ಎಂದು ಹೇಳಿದ್ದರಿಂದ ಸರ್ಕಾರ ಈ ರೀತಿ ಮಾಡುತ್ತಿದೆ. ನಾನು ಮಾಡಿದರೂ ಕೂಡ ಅವರ ಶಿಫಾರಸ್ಸಿನ ಪ್ರಕಾರವೇ ಮಾಡುವುದು. ಅದಿಲ್ಲದೆ ಮಾಡುವುದಿಲ್ಲ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ:

"೩೧-೩-೧೯೮೯ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೩೧ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೩೧-ವೈದ್ಯಕೀಯ ಸೇವೆ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨, ೧೯, ೬೨, ೨೦. ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨, ೦೦, ೦೦, ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು. "

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ನೀಲಗಿರಿ ಗಿಡಗಳನ್ನು ಬೆಳೆಸುವುದು

೮೭೧ (೨೯೯೪) ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಹೋಬಳಿ ಕರಕುಚ್ಚಿ ಗ್ರಾಮಕ್ಕೆ ಸೇರಿದ ಸುಮಾರು ೭೦ ಎಕರೆ ಪ್ರದೇಶದಲ್ಲಿ ಬೆಳೆಸಿದ್ದ ನೀಲಗಿರಿ ಮರಗಳನ್ನು ಕಡಿದು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರೀ ನೀಲಗಿರಿ ಗಿಡಗಳನ್ನು ಬೆಳೆಸಿದ್ದು ಯಾವಾಗ ? ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಇ) ಈ ಅರಣ್ಯ ನಾಶವನ್ನು ಮಾಡಿದವರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಲಕ್ಕವಳ್ಳಿ ಹೋಬಳಿ. ಕುರಕುಚ್ಚಿ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಂದ ಜಮೀನನ್ನು ಒತ್ತುವರಿ ಪಡಿಸಿಕೊಳ್ಳುವುದಕ್ಕೋಸ್ಕರ ನೀಲಗಿರಿ ಮರಗಳ ಕಡಿತಲೆಯಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಹೀಗೆ ಕಡಿತಲೆಯಾಗಿರುವ ನೆಡುತೋಪುಗಳ ವಿಸ್ತೀರ್ಣವು ೪೫ ಎಕರೆಗಳಷ್ಟಾಗಿದೆ.

ಆ) ೧೯೬೩ನೇ ಇಸವಿಯಲ್ಲಿ ೪೫ ಎಕರೆ ವಿಸ್ತೀರ್ಣದಲ್ಲಿ ಬೆಳಸಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ. ೫೦, ೦೦೦-೦೦ ಗಳು.

ಇ) ಇದರ ಬಗ್ಗೆ ತಾರೀಖು ೨೩-೫-೧೯೭೮ ರಂದು ಲಕ್ಕವಳ್ಳಿಯ ಪೋಲೀಸ್ ಠಾಣೆಗೆ ದೂರನ್ನು ಕೊಡಲಾಗಿದೆ. ಇದಕ್ಕೆ ಮುನ್ನ ಲಕ್ಕವಳ್ಳಿವಲಯ ವಲಯ ಅರಣ್ಯಾಧಿಕಾರಿಯವರು ಎರಡು ಮೊಕದ್ದಮೆಗಳನ್ನು ೧೮-೫-೧೯೭೮ ರಂದು ದಾಖಲು ಮಾಡಿಕೊಂಡಿರುವರು.

(ಉಪಾಧ್ಯಕ್ಷರು ಪೀಠದಲ್ಲಿದ್ದರು.)

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಅಧ್ಯಕ್ಷರೇ, ೧೯೬೮ನೇ ಇಸವಿಯಲ್ಲಿ ೪೫ ಎಕರೆ ಪ್ರದೇಶದಲ್ಲಿ ಅರಣ್ಯವನ್ನು ೫ ವರ್ಷಗಳಿಂದ ಬೆಳೆಸಿದ್ದಾರೆ. ಅದಕ್ಕೆ ೫೦,೦೦೦ ರೂಪಾಯಿ ಖರ್ಚಾಗಿದೆ. ಈ ಅರಣ್ಯವನ್ನು ನಾಶ ಮಾಡಬೇಕಾದರೆ ಅಧಿಕಾರಿಗಳು ಏನು ಮಾಡುತ್ತಿದ್ದರು ? ಎರಡನೆಯದಾಗಿ ಯಾರೋ ಬೀಳುವರು ಕೂಲಿ ಕಾರ್ಮಿಕರು ೧೦-೧೫ ವರ್ಷ ಸಾಗುವಳಿ ಮಾಡಿದಂಥವರನ್ನು ಬಿಡಿಸಿ ಸಸಿ ನೆಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ತಪ್ಪಲ್ಲವೇ ? ೫೦ ಸಾವಿರ ರೂಪಾಯಿ ಖರ್ಚು ಮಾಡಿ ಬೆಳೆಸಿರುವ ಅರಣ್ಯವನ್ನು ಏಕಕಾಲದಲ್ಲಿ ನಾಶ ಮಾಡಬೇಕಾದರೆ ಇಲಾಖೆಯವರು ನಿದ್ದೆ ಮಾಡುತ್ತಿದ್ದರೆ ? ಇಲಾಖೆಯವರಿಗೆ ಗೊತ್ತಾಗಲಿಲ್ಲವೆ ? ಸರ್ಕಾರದವರು ಏನು ಮಾಡುತ್ತಿದ್ದರು ? ಇಲ್ಲಿ ಸರ್ಕಾರ ಎಂಬುದು ಇದೆಯೇ ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ? ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅರಣ್ಯ ನಾಶ ತಡೆಯಲು ಸಿಬ್ಬಂದಿವರ್ಗ ಇರಲಿಲ್ಲವೆ ? ಡಿ. ಎಫ್. ಒ. ಇಲ್ಲವೇ ?